ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಡಿಸೆಂಬರ್ 31 ಮಂಗಳವಾರ 2024
ಸಂಪುಟ: 45 | ಸಂಚಿಕೆ: 254 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಹೊಸ ವರ್ಷಾಚರಣೆ ಹರುಷದಾಯಕವಾಗಿರಲಿ...

● ಸಾರ್ವಜನಿಕರಿಗೆ ಪೊಲೀಸ್ ಆಯುಕ್ತರ ಸಲಹೆ ● ಮೈಸೂರಲ್ಲಿ ಭಾರೀ ಬಂದೋಬಸ್ತ್ ● ಶುಭ ಕೋರುವ ನೆಪದಲ್ಲಿ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡಿದರೆ ಪ್ರಕರಣ ದಾಖಲು


ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್

ಮೈಸೂರು,ಡಿ.30(ಆರ್‌ಕೆ)–ಹೊಸ ವರ್ಷಕ್ಕೆ ಶುಭ ಕೋರುವ ನೆಪದಲ್ಲಿ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡಿದಲ್ಲಿ, ನೆಮ್ಮದಿಗೆ ಭಂಗ ತಂದಲ್ಲಿ ಅಂತಹವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು. ಕಾನೂನು–ಸುವ್ಯವಸ್ಥೆಯಡಿ ಹೊಸ ವರ್ಷಾಚರಣೆ ಹರುಷದಾಯಕವಾಗಿರಲಿ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಜನತೆಗೆ ತಿಳಿ ಹೇಳಿದ್ದಾರೆ.

ಸಾರ್ವಜನಿಕರ ನೆಮ್ಮದಿಗೆ ಭಂಗ ಉಂಟಾಗದಂತೆ ಹೊಸ ವರ್ಷಾಚರಣೆ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಡಿ.31ರ ರಾತ್ರಿಯ ಹೊಸ ವರ್ಷಾಚರಣೆ ಮಾಡುವ ಹೋಟೆಲ್, ರೆಸ್ಟೋರೆಂಟ್, ಕ್ಲಬ್, ರೆಸಾರ್ಟ್, ಹೋಂಸ್ಟೇ, ಸರ್ವಿಸ್ ಅಪಾರ್ಟ್‌ಮೆಂಟ್, ಅಪಾರ್ಟ್‌ಮೆಂಟ್ ಅಸೋಸಿಯೇಷನ್, ಮಾಲ್‌ಗಳು, ಸಂಘ ಸಂಸ್ಥೆಗಳು ಪೊಲೀಸ್ ಆಯುಕ್ತರಿಂದ ಅನುಮತಿ ಪಡೆದು ■6ನೇ ಪುಟಕ್ಕೆ

ಕಾವೇರಿ ನದಿ ತಟದಲ್ಲಿ ಹೊಸ ವರ್ಷಾಚರಣೆಗೆ ಬ್ರೇಕ್



ಶ್ರೀರಂಗಪಟ್ಟಣ, ಡಿ.30–ನೂತನ ವರ್ಷಾಚರಣೆ ಅಂಗವಾಗಿ ಕೆಆರ್‌ಎಸ್ ಪೊಲೀಸ್ ಠಾಣೆ ಸರಹದ್ದಿನ ವ್ಯಾಪ್ತಿಯಲ್ಲಿ ಬರುವ ಪ್ರಮುಖ ಪ್ರವಾಸಿ ತಾಣಗಳಾದ ಎಡಮುರಿ, ಬಲಮುರಿ, ಕೆಆರ್‌ಎಸ್ ಹಿನ್ನೀರು ಪ್ರದೇಶ ಹಾಗೂ ಕಾವೇರಿ ನದಿ ತೀರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಡಿ.31 ರಂದು ಬೆಳಗ್ಗೆ 6ರಿಂದ ಜ.1ರ ರಾತ್ರಿ 8 ರವರೆಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಿ ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ ನಿಷೇಧಾಜ್ಞೆ ಹೊರಡಿಸಿದ್ದಾರೆ. ಪ್ರಮುಖ ಪ್ರವಾಸಿ ತಾಣ ಹಾಗೂ ನದಿ ತೀರದ ಪ್ರದೇಶದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದು, ಮದ್ಯಪಾನ ಮಾಡುವುದು, ಅಸಭ್ಯವಾಗಿ ವರ್ತಿಸಿ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗುತ್ತಿದ್ದಾರೆ. ಮೋಜು, ಮಸ್ತಿಗಾಗಿ ನೀರಿಗೆ ಇಳಿಯುವುದರಿಂದ ಎಡಮುರಿ ಹಾಗೂ ಬಲಮುರಿ ಪ್ರದೇಶಗಳಲ್ಲಿ ಕಳೆದ 10 ವರ್ಷಗಳಲ್ಲಿ 64 ಮಂದಿ ಮೃತಪಟ್ಟಿದ್ದಾರೆ. ಕಾನೂನು ಬಾಹಿರ ಕೃತ್ಯ ತಡೆಯುವುದು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ನಿಷೇಧಾಜ್ಞೆ ಹೇರಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಹೊಸ ವರ್ಷದಂದು ಚಾಮುಂಡಿಬೆಟ್ಟಕ್ಕೆ ಬರುವ ಭಕ್ತಾದಿಗಳಿಗೆ ಮೂಲಸೌಲಭ್ಯ ಕಲ್ಪಿಸಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಸೂಚನೆ




ಮೈಸೂರಿನ ಜಿಪಂ ಕಚೇರಿಯಲ್ಲಿ ಸೋಮವಾರ ಡಿಸಿ ಜಿ.ಲಕ್ಷ್ಮಿಕಾಂತರೆಡ್ಡಿ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಡಿ.30(ಆರ್‌ಕೆ)–2025ರ ಜನವರಿ 1ರ ಬುಧವಾರ ಚಾಮುಂಡಿಬೆಟ್ಟಕ್ಕೆ ಆಗಮಿಸುವ ಭಕ್ತರಿಗೆ ಅಗತ್ಯ ಮೂಲಸೌಲಭ್ಯ ಕಲ್ಪಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಅಧಿಕಾರಿಗಳಿಗೆ ಇಂದಿಲ್ಲಿ ಸೂಚನೆ ನೀಡಿದ್ದಾರೆ. ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಹೊಸ ವರ್ಷದಂದು ಸಾವಿರಾರು ಭಕ್ತರು ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನಕ್ಕೆ ಆಗಮಿಸಲಿದ್ದು, ಅವರಿಗೆ ತೊಂದರೆಯಾಗದಂತೆ ದೇವರ ದರ್ಶನಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಸಲಹೆ ನೀಡಿದ ಅವರು, ಪೊಲೀಸ್ ಸಿಬ್ಬಂದಿ, ಎಲ್ಲಾ ಗೇಟ್‌ಗಳಲ್ಲಿ ಹಾಜರಿದ್ದು ವಾಹನಗಳ ಸಂಚಾರ ಸುಗಮಗೊಳಿಸಬೇಕು. ಅನಗತ್ಯವಾಗಿ ವಾಹನಗಳು ಪ್ರವೇಶವಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ■6ನೇ ಪುಟಕ್ಕೆ



‘ಮೈಸೂರು ಮಿತ್ರ’ನ 2025ರ ವರ್ಣರಂಜಿತ ಕ್ಯಾಲೆಂಡರ್‌ನ್ನು ಇಂದಿನ ಸಂಚಿಕೆಯ ಕೊನೆ ಪುಟದಲ್ಲಿ ಪ್ರಕಟಿಸಲಾಗಿದೆ.
–ಸಂಪಾದಕರು

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಖದೀಮರ ಹೊಸ ವರಸೆ

ಪ್ರಯಾಣಿಕರ ವಾಹನದ ಮೇಲೆ ಮೊಟ್ಟೆ ದಾಳಿ!

● ವೈಪರ್ ಹಾಕಿದರೆ ಇಡೀ ಗಾಜು ಮಸುಕಾಗಿ ಅಪಾಯದ ಆತಂಕ
● ದಾರಿ ಕಾಣದೆ ನಿಲ್ಲಿಸುತ್ತಿದ್ದಂತೆ ದಾಳಿ ನಡೆಸಿ ಸುಲಿಗೆ


(ಸಂಗ್ರಹ ಚಿತ್ರ)

ಎಂ.ಕೆ.ಮೋಹನ್‌ರಾಜ್

ಮಂಡ್ಯ, ಡಿ.30– ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಕೆಲ ತಿಂಗಳಿನಿಂದ ಸೈಲೆಂಟ್ ಆಗಿದ್ದ ದರೋಡೆಕೋರರು ಮತ್ತೆ ಆಕ್ಟೀವ್ ಆಗಿದ್ದಾರೆ. ಒಂಟಿ ಕಾರು, ಬೈಕ್‌ಗಳು, ಹೊರ ಜಿಲ್ಲೆ, ರಾಜ್ಯದವರನ್ನೇ ಟಾರ್ಗೆಟ್ ಮಾಡಿಕೊಂಡು ದರೋಡೆ ನಡೆಸಲಾಗುತ್ತಿತ್ತು. ಇದೀಗ ವರಸೆ ಬದಲಾಗಿದ್ದು, ಕಾರಿನ ಮೇಲೆ ಮೊಟ್ಟೆ ಎಸೆದು ದರೋಡೆ ಮಾಡುವ ಗ್ಯಾಂಗ್ ಹುಟ್ಟಿಕೊಂಡಿದೆ.

ಇತ್ತೀಚೆಗೆ ಹೆದ್ದಾರಿಯ ಸರ್ವೀಸ್ ರಸ್ತೆಯಲ್ಲಿ ಮಂಡ್ಯ ನಗರದ ಗುತ್ತಲು ನಿವಾಸಿ ಬೆಲ್ಲದ ವ್ಯಾಪಾರಿ ವಿನೋದ್ ಕಾರಿನ ಮೇಲೆ ದರೋಡೆಕೋರರು ಮೊಟ್ಟೆ ಎಸೆದು, ವಾಹನ ನಿಲ್ಲಿಸುತ್ತಿದ್ದಂತೆ ದಾಳಿ ಮಾಡಿ ನಗದು ದೋಚಿರುವ ಘಟನೆ ನಡೆದಿದೆ. ವಿನೋದ್ ವ್ಯಾಪಾರ ಮುಗಿಸಿಕೊಂಡು ಮದ್ದೂರಿನಿಂದ ಮಂಡ್ಯಕ್ಕೆ ಬರುತ್ತಿದ್ದಾಗ ಬೂದನೂರು ಬಳಿ ಮೂರು ಬೈಕ್‌ಗಳಲ್ಲಿ ಬಂದ ದುಷ್ಕರ್ಮಿಗಳು ಕಾರಿನ ಗಾಜಿನ ಮೇಲೆ ಮೊಟ್ಟೆ ತೂರಿದ್ದಾರೆ. ಕೂಡಲೇ ವಿನೋದ್ ವೈಪರ್ ಆನ್ ಮಾಡಿದಾಗ ಒಡೆದ ಮೊಟ್ಟೆ ದ್ರವ ಹರಡಿ ಇಡೀ ಗಾಜು ಮಸುಕಾಗಿದೆ. ಇದರಿಂದ ರಸ್ತೆ ಸರಿಯಾಗಿ ಕಾಣದ ಹಿನ್ನೆಲೆಯಲ್ಲಿ ಕಾರು ನಿಲ್ಲಿಸಿ ಗಾಜು ಕ್ಲೀನ್ ಮಾಡಲು ಮುಂದಾದಾಗ ಹಿಂದಿನಿಂದ ಬಂದ ದುಷ್ಕರ್ಮಿಗಳು ವಿನೋದ್ ಕಣ್ಣಿಗೆ ಖಾರದ ಪುಡಿ ಎರಚಿ ಹಲ್ಲೆ ನಡೆಸಿ 55 ಸಾವಿರ ರೂ. ನಗದು ದೋಚಿ ಪರಾರಿಯಾಗಿದ್ದಾರೆ. ಮಂಡ್ಯ ವ್ಯಾಪ್ತಿಯ ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ ಪೊಲೀಸ್ ಠಾಣೆಗಳಲ್ಲಿ ದರೋಡೆ ಪ್ರಕರಣಗಳು ದಾಖಲಾಗಿದ್ದವು. ಮಂಡ್ಯ ವ್ಯಾಪ್ತಿಯಲ್ಲಿಯೇ ■6ನೇ ಪುಟಕ್ಕೆ

▶ ನಾನು ಜಿಲ್ಲೆಗೆ ಬಂದಾಗಿನಿಂದ ಹೆದ್ದಾರಿಯಲ್ಲಿ ದರೋಡೆ ಪ್ರಕರಣಗಳು ನಡೆದಿಲ್ಲ. ಹಿಂದೆ ನಡೆದಿದ್ದ ಪ್ರಕರಣಗಳನ್ನು ಭೇದಿಸಿ ಆರೋಪಿಗಳನ್ನು ಬಂಧಿಸಲಾಗಿತ್ತು. ಮೊಟ್ಟೆ ಎಸೆದು ದರೋಡೆ ಮಾಡುವ ಪ್ರಕರಣ ಇದೇ ಮೊದಲು. ದರೋಡೆಕೋರರು ಹೊಸ ಗ್ಯಾಂಗ್ ಅಥವಾ ಹಳೇ ಗ್ಯಾಂಗ್ ಸಕ್ರಿಯವಾಗಿದೆಯಾ ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಕೂಡಲೇ ಪ್ರಕರಣ ಪತ್ತೆ ಹಚ್ಚಲಾಗುವುದು.


– ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ವರಿಷ್ಠಾಧಿಕಾರಿ, ಮಂಡ್ಯ

▶ ಹೆದ್ದಾರಿ ಪ್ರಾಧಿಕಾರದವರು ರಸ್ತೆ ನಿರ್ಮಿಸುವಾಗ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿಲ್ಲ. ಕಾಟಾಚಾರಕ್ಕೆ ಎಂಬಂತೆ ಹೆದ್ದಾರಿ ನಿರ್ಮಿಸಿದ್ದಾರೆ. ಮೂಲ ಸೌಕರ್ಯಗಳಿಲ್ಲ. ವಿದ್ಯುತ್ ದೀಪಗಳನ್ನು ಅಳವಡಿಸಿಲ್ಲ. ಇದರಿಂದ ಕತ್ತಲು ಆವರಿಸಿರುವ ಸರ್ವೀಸ್ ರಸ್ತೆಗಳಲ್ಲಿ ದರೋಡೆ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿವೆ. ಇದೀಗ ದರೋಡೆಕೋರರು ಮೊಟ್ಟೆ ಎಸೆದು ವಾಹನ ಸವಾರರ ದೋಚುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕಿದೆ.
–ಬಿ.ಕೆ.ಸತೀಶ್, ಬೂದನೂರು ನಿವಾಸಿ

ಗುತ್ತಿಗೆದಾರ ಆತ್ಮಹತ್ಯೆ ಪ್ರಕರಣ ಸಂಬಂಧ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ಆರೋಪ

ಸಿಐಡಿ ತನಿಖೆಗೆ ವಹಿಸಿದ ಸರ್ಕಾರ


ಡಾ.ಜಿ.ಪರಮೇಶ್ವರ್

ಬೆಂಗಳೂರು, ಡಿ.30(ಕೆಎಂಶಿ)–ಗುತ್ತಿಗೆದಾರನ ಆತ್ಮಹತ್ಯೆ ಹಿನ್ನೆಲೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಮೇಲೆ ಬಿಜೆಪಿ ಮಾಡಿರುವ ಆರೋಪ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವರ ಮೇಲೆ ಅನಾವಶ್ಯಕ ಆಪಾದನೆ ಮಾಡುವುದು ಯಾವುದೇ ಸರ್ಕಾರಕ್ಕೆ ಸರಿ ಕಾಣುವುದಿಲ್ಲ. ಡೆತ್ ನೋಟ್‌ನಲ್ಲಿ ■6ನೇ ಪುಟಕ್ಕೆ

ಬಿಜೆಪಿಯವರು ಎಷ್ಟೇ ಚೀರಾಡಿ, ಬಟ್ಟೆ ಹರ್ಕೊಂಡ್ರೂ ನಾನು ರಾಜೀನಾಮೆ ಕೊಡಲ್ಲ


ಪ್ರಿಯಾಂಕ್ ಖರ್ಗೆ

ಬೆಂಗಳೂರು: ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ತಮ್ಮ ರಾಜೀನಾಮೆಗೆ ಒತ್ತಡ ಹಾಕುತ್ತಿರುವ ಬಗ್ಗೆ ಸಚಿವ ಪ್ರಿಯಾಂಕ್ ಖರ್ಗೆ ಕೌಂಟರ್ ಕೊಟ್ಟಿದ್ದಾರೆ. ಬಿಜೆಪಿಯವರು ಎಷ್ಟೇ ಕೂಗಾಡಿದರೂ, ಚೀರಾಡಿದರೂ ಬಟ್ಟೆ ಹರ್ಕೊಂಡ್ರೂ ■6ನೇ ಪುಟಕ್ಕೆ

ಪೊಲೀಸರು ಸುಪಾರಿ ಕಿಲ್ಲರ್ ರೀತಿ ವರ್ತಿಸಿದರು!

ರಾಜ್ಯಪಾಲರಿಗೆ ಸಿಟಿ ರವಿ ದೂರು: ಪೊಲೀಸರ ವಿರುದ್ಧ ಕ್ರಮಕ್ಕೆ ಒತ್ತಾಯ, ಸೂಕ್ತ ಭದ್ರತೆಗೂ ಮನವಿ


ಸೂಕ್ತ ಭದ್ರತೆ ನೀಡುವಂತೆ ರಾಜ್ಯಪಾಲರಿಗೆ ಸಿಟಿ ರವಿ ಮನವಿ ಮಾಡಿದರು.

ಬೆಂಗಳೂರು: ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಸಿ.ಟಿ.ರವಿ ನಡುವಿನ ಜಟಾಪಟಿ ರಾಜ್ಯಪಾಲರ ಅಂಗಳ ತಲುಪಿದೆ. ಇಂದು ರಾಜ್ಯಪಾಲರ ಭೇಟಿ ಮಾಡಿದ ಸಿಟಿ ರವಿ, ಅಂದು ಪರಿಷತ್‌ನಲ್ಲಿ ಏನೆಲ್ಲಾ ಆಯ್ತು, ತಮ್ಮ ಬಂಧನದ ಬಳಿಕ ನಡೆದ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಜೊತೆಗೆ ರಾಜ್ಯಪಾಲರಿಗೆ 8 ಪುಟಗಳ ದೂರು ನೀಡಿದ್ದು, ತಮ್ಮ ಮೇಲಿನ ಪೊಲೀಸ್ ದೌರ್ಜನ್ಯದ ಕುರಿತು ಡಿಜಿ & ಐಜಿಪಿಯಿಂದ ಸ್ಪಷ್ಟನೆ ಪಡೆದುಕೊಳ್ಳುವಂತೆ ಮನವಿ ಮಾಡಿದ್ದಾರೆ.

ಸಿ.ಟಿ.ರವಿ ದೂರಿನಲ್ಲೇನಿದೆ: ಡಿ.19ರಂದು ಇಡೀ ರಾತ್ರಿ ಪೊಲೀಸರು ಅಮಾನವೀಯ ವರ್ತನೆ ಮಾಡಿದ್ದಾರೆ. ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಬೆಳಗಾವಿ ನಗರ ಪೊಲೀಸ್ ಕಮಿಷನರ್ ಯಡಾ ಮಾರ್ಟಿನ್, ಎಸ್‌ಪಿ ಗುಳೇದ್ ಮತ್ತು ಇತರೆ ಪೊಲೀಸರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದ್ದು, ತಮಗೆ ಪ್ರಾಣಾಪಾಯ ಇದ್ದು, ಸೂಕ್ತ ಭದ್ರತೆ ಕೊಡಬೇಕು ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ. ರಾಷ್ಟ್ರಪತಿ, ಕೇಂದ್ರ ಗೃಹ ಇಲಾಖೆ ಗಮನಕ್ಕೂ ತರುವಂತೆ ಪತ್ರದಲ್ಲಿ ಉಲ್ಲೇಖಿಸಿದ್ದು, ದೂರಿನಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧವೂ ಆರೋಪ ಮಾಡಿದ್ದಾರೆ.

ದೂರಿನಲ್ಲಿ ಫೇಕ್ ಎನ್‌ಕೌಂಟರ್ ವಿಚಾರ ಪ್ರಸ್ತಾಪಿಸಿರುವ ಸಿ.ಟಿ.ರವಿ, ಡಿಕೆ ಶಿವಕುಮಾರ್ ಸೂಚನೆ ಮೇರೆಗೆ ಪೊಲೀಸರು ಸುಪಾರಿ ಕಿಲ್ಲರ್ ರೀತಿ ವರ್ತಿಸಿದರು. ನಿಗೂಢ ಸ್ಥಳಗಳಿಗೆ ಕರೆದೊಯ್ದು ಫೇಕ್ ಎನ್‌ಕೌಂಟರ್ ಮಾಡಲು ಸಂಚು ರೂಪಿಸಿದ್ದರು. ಪೊಲೀಸರು ಸುವರ್ಣಸೌಧದೊಳಗೆ ಪ್ರವೇಶ ಮಾಡಿ ಬಂಧಿಸಿದ್ದು ಅಕ್ರಮ ನನ್ನ ಹಕ್ಕು ಚ್ಯುತಿ ಆಗಿದೆ ಎಂದಿದ್ದಾರೆ. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬೆಂಬಲಿಗರು ಕೊಲೆ ಮಾಡುವುದಾಗಿ ಧಮ್ಕಿ ಹಾಕಿದ್ದು, ಅವರ ಬಂಟರಿಂದಲೂ ■6ನೇ ಪುಟಕ್ಕೆ

ಮೆಹಫಿಲ್ ಝಿಕ್ರೊ ಅಝ್‌ಕರ್, ದಾರೂದ್ ಷರೀಫ್ ಖತ್ಮ್–ಇ–ಖಾದ್ರಿ ಆಚರಣೆ




ಮೈಸೂರು,ಡಿ.30–ಹಜ಼ರತ್ ಸೈಯದ್ ಷಾ ಮೊಹಮ್ಮದ್ ಅಲ್ತಾಫ್ ಪೀರಾನ್ ಖಾದ್ರಿ ಶತ್ತಾರಿ, ಸಜ್ಜದಾ ನಷೀನ್, ದರ್ಗಾ ಹಜ಼ರತ್ ಸೈಯದ್ ಷಾ ಮೊಹಮ್ಮದ್ ಉಮೇರೆ–ಇ–ಮೆಝಾರ್ ಖಾದ್ರಿ, ಬಡಾ ಮಕಾನ್, ಟಿಪ್ಪು ಸರ್ಕಲ್, ಮೈಸೂರು–ಬೆಂಗಳೂರು ಹೈವೇ ವತಿಯಿಂದ ಮೆಹಫಿಲ್ ಝಿಕ್ರೊ ಅಝ್‌ಕರ್ ಮತ್ತು ದಾರೂದ್ ಷರೀಫ್ ಖತ್ಮ್–ಇ–ಖಾದ್ರಿ ಆಚರಿಸಲಾಯಿತು.

ಅಧ್ಯಕ್ಷತೆಯನ್ನು ಹಜ಼ರತ್ ಸೈಯದ್ ಷಾ ಮೊಹಮ್ಮದ್ ಗೌಸ್ ಮೊಯೀದಿನ್ ಖಾದ್ರಿ, ಸಜ್ಜದ್ ನಷೀನ್ ದರ್ಗಾ ಹಜ಼ರತ್ ದಾದಾ ಹಿಯಾತ್ ಮೀರ್ ಖಲಂದರ್ (ದಾದಾ ಕಾ ಪಹಾಡ್ ಎಂದೇ ಖ್ಯಾತಿ) ಚಿಕ್ಕಮಗಳೂರು ಮತ್ತು ಹಜ಼ರತ್ ಸೈಯದ್ ಷಾ ಇಬ್ರಾಹಿಂ ಷಾ ಖದಾರಿ, ಕೇರಳ ವಹಿಸಿದ್ದರು. ಮಜ್ಲೀಸ್, ಮೆಹಫಿಲ್ ಝಿಕ್ರೊ ಅಝ್ ಕರ್ ದಾರೂದ್ ಷರೀಫ್, ಖತ್ಮ್–ಇ–ಖಾದ್ರಿಯ, ಫಾತೆಹಾ ಖಾನಿ, ದಾರೂದ್ ಸಲಾಂ ಮತ್ತು ಭಾವನಾತ್ಮಕ ದುವಾ ನೆರವೇರಿಸಲಾಯಿತು. ನಂತರ ಸಜ್ಜದ್ ನಷೀನ್, ಬಡಾ ಮಕಾನ್ ಅವರ ಸಮ್ಮುಖದಲ್ಲಿ, ಹಜ಼ರತ್ ಸೈಯದ್ ಗೌಸ್ ಪೀರಾನ್ ಶತ್ತಾರಿ, ಬಡಾ ಮಕಾನ್ ಮತ್ತು ಸ್ಥಳೀಯ ಯುವಕರು, ಭಕ್ತಾದಿಗಳು, ಅಫ್ರೋಜ್, ಅಸ್ಲಂ, ಖಾಸಿಫ್, ಆಸಿಫ್, ಶೋಯೆಬ್, ಸೈಯದ್ ಇಶಾಕ್, ಫಾರೂಖ್ ಮತ್ತು ಇತರರ ಮಾರ್ಗದರ್ಶನದಲ್ಲಿ ಹಜ಼ರತ್ ಸೈಯದ್ ಷಾ ಮೊಹಮ್ಮದ್ ಗೌಸ್ ಮೊಯೀದಿನ್ ಖಾದ್ರಿ, ಸಜ್ಜದ್ ನಷೀನ್ ದರ್ಗಾ ಹಜ಼ರತ್ ದಾದಾ ಹಿಯಾತ್ ಮೀರ್ ಖಲಂದರ್ ಅವರನ್ನು ಸನ್ಮಾನಿಸಲಾಯಿತು.

ಮೌಢ್ಯ ತೊಲಗದೆ ಸಮಾಜ ಉದ್ಧಾರವಾಗದು

ಕುವೆಂಪು ಜನ್ಮ ದಿನಾಚರಣೆಯಲ್ಲಿ ನಿವೃತ್ತ ಪ್ರಾಂಶುಪಾಲರು, ಪ್ರಗತಿಪರ ಚಿಂತಕರು ಪ್ರೊ.ಕೆ.ಕಾಳಚನ್ನೇಗೌಡ ಅಭಿಮತ



ಮೈಸೂರಿನ ಜೆ.ಪಿ.ನಗರದಲ್ಲಿರುವ ಪುಟ್ಟರಾಜು ಗವಾಯಿ ಕ್ರೀಡಾಂಗಣದ ಆವರಣದಲ್ಲಿರುವ ವಿಶ್ವಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ರಸಋಷಿ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಪ್ರಗತಿಪರ ಚಿಂತಕ ಡಾ.ಕಾಳಚನ್ನೇಗೌಡ, ಕೆ.ಎಸ್.ಕೃಷ್ಣ, ಎಂ.ಬಿ.ಮಂಜೇಗೌಡ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಮೈಸೂರು,ಡಿ.30–ಮೈಸೂರಿನ ಜೆ.ಪಿ. ನಗರದಲ್ಲಿರುವ ಪುಟ್ಟರಾಜು ಗವಾಯಿ ಕ್ರೀಡಾಂಗಣದ ಆವರಣದಲ್ಲಿರುವ ವಿಶ್ವಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ರಸಋಷಿ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸುವುದರ ಮೂಲಕ ಚಾಲನೆ ನೀಡಿದ ಪ್ರಗತಿಪರ ಚಿಂತಕರು ಹಾಗೂ ನಿವೃತ್ತ ಪ್ರಾಂಶುಪಾಲರಾದ ಪ್ರೊ.ಕೆ. ಕಾಳಚನ್ನೇಗೌಡ ಮಾತನಾಡಿ, ಮೌಢ್ಯವನ್ನು ತೊಲಗಿಸದೇ ಸಮಾಜದ ಉದ್ಧಾರ ಸಾಧ್ಯವಾಗುವುದಿಲ್ಲ. ಭಾರತದ ಬಹುತ್ವದ ಸಮಾಜ. ಈ ಸಮಾಜದಲ್ಲಿ ಮೌಢ್ಯವನ್ನು ತೊಲಗಿಸಿ ಸರಿಸಮಾನತೆಯನ್ನು ತರಬೇಕು ಎಂದು ಹೇಳಿದರು.

ವೈಜ್ಞಾನಿಕ ಮನೋಭಾವದೊಂದಿಗೆ, ಪ್ರಗತಿಪರ ಚಿಂತನೆಯೊಂದಿಗೆ, ಸರಿಸಮಾನತೆಯಿಂದ ಬದುಕಬೇಕೆಂದು ಕುವೆಂಪು ರವರ ಆಶಯವಾಗಿತ್ತು.

ಆದರೆ ಇಂದು ಕುವೆಂಪುರವರ ಆಶಯ ನನಸಾಗದೇ ಬರಿ ಕನಸಾಗಿ ಉಳಿದಿರುವುದು ಬೇಸರದ ಸಂಗತಿ. ಆಡಂಬರದ ತೋರಿಕೆಯ ಜೀವನಕ್ಕೆ ಕಡಿವಾಣ ಹಾಕಿ ಮಂತ್ರ ಮಾಂಗಲ್ಯದ ಮೂಲಕ ಜನರನ್ನು ಸಾಮರಸ್ಯ ಜೀವನಕ್ಕೆ ಬೆಂಬಲಿಸಿದವರು ರಾಷ್ಟ್ರಕವಿ ಕುವೆಂಪು. ಕರ್ನಾಟಕದ ಏಕೀಕರಣದಲ್ಲಿ ಪ್ರಮುಖವಾಗಿ ನಿಂತು ಕನ್ನಡ ಭಾಷೆ, ನೆಲ ಜಲ ಸುಭದ್ರವಾಗಿ ನಿಲ್ಲಲು ನಾಂದಿ ಹಾಡಿದವರು ವಿಶ್ವಕವಿ. ಇವರ ವಿಶ್ವ ಮಾನವ ಸಂದೇಶವನ್ನು ನಾವೆಲ್ಲರೂ ಪಾಲಿಸಬೇಕಿದೆ. ಪ್ರಸ್ತುತ ದಿನಗಳಲ್ಲಿ ಧರ್ಮ ಹಾಗೂ ರಾಜಕಾರಣ ಹೊಂದಿಕೆಯಾಗಿರುವುದು ದುರಂತವಾಗಿದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ವೃತ್ತಿಯಲ್ಲಿ ಶ್ರೇಷ್ಠತೆಯನ್ನು ಕಾಣಬೇಕೆ ಹೊರತು ಜಾತಿ, ವರ್ಗಗಳಿಂದಲ್ಲ. ಅಧಿಕಾರದ ಆಸೆಗಾಗಿ, ಮತಗಳ ಭೇಟೆಗಾಗಿ ಇಂದಿನ ರಾಜಕಾರಣಿಗಳು ಜಾತಿಯನ್ನು ವೈಭವೀಕರಿಸುತ್ತಿರುವುದು ಅಪಾಯ ಸೂಚನೆಯಾಗಿದೆ. ಇಂತಹ ಅಪಾಯದ ಸೂಚನೆಗಳು ನಿಲ್ಲಬೇಕು ಎಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ವಿಶ್ವಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎಸ್.ಕೃಷ್ಣ, ಕುವೆಂಪು ಅವರ ಜನ್ಮದಿನದ ಅಂಗವಾಗಿ ಕನ್ನಡ ಕಲಾವಿದರನ್ನು ಗೌರವಿಸು ತ್ತಿದ್ದೇವೆ. ಹಾಗೆಯೇ ಕುವೆಂಪು ಅವರ ಮಸ್ತಕಗಳನ್ನು ಕಾರ್ಯಕ್ರಮಗಳಲ್ಲಿ ಉಡುಗೊರೆಯಾಗಿ ನೀಡಿ ಪ್ರತಿನಿತ್ಯ ಕುವೆಂಪು ವಿಚಾರಧಾರೆಗಳನ್ನು ಯುವಕರಲ್ಲಿ ಮೂಡುವಂತೆ ಪ್ರಯತ್ನಿಸುತ್ತಿದ್ದೇವೆ ಎಂದರು. ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ, ಉಪಾಧ್ಯಕ್ಷ ಜಯರಾಂ, ನಿರ್ದೇಶಕ ಪ್ರೊ.ಬಿ.ಕೆಂಪರಾಜು ಉಪಸ್ಥಿತರಿದ್ದರು. ಕುವೆಂಪು ಅವರ ಗೀತ ಗಾಯನ ಕಾರ್ಯಕ್ರಮವನ್ನು ಹಿರಿಯ ಕಲಾವಿದೆ ಶಶಿಕಲಾ ಚಂದ್ರಶೇಖರ್ ನೆರವೇರಿಸಿಕೊಟ್ಟರು.

ಸಾರಿಗೆ ದರ ಏರಿಕೆ ಪ್ರಸ್ತಾಪ ಹಿಂಪಡೆಯಲು ಎಸ್‌ಯುಸಿಐ ಒತ್ತಾಯ

ಮೈಸೂರು, ಡಿ. 30– ಸಾರಿಗೆ ದರ ಏರಿಕೆಯ ಪ್ರಸ್ತಾಪವನ್ನು ಹಿಂಪಡೆಯುವಂತೆ ಎಸ್‌ಯುಸಿಐ ಒತ್ತಾಯ ಮಾಡಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಮೈಸೂರು ಜಿಲ್ಲಾ ಕಾರ್ಯದರ್ಶಿ ಬಿ.ರವಿ, ರಾಜ್ಯದಲ್ಲಿ ಬಸ್ ದರ ಶೇ. 15ರಷ್ಟು ಏರಿಕೆ ಮಾಡುವ ಶಿಫಾರಸ್ಸು ಮತ್ತು ಬೆಂಗಳೂರು ಮೆಟ್ರೋ ದರ ಏರಿಕೆ ಪ್ರಸ್ತಾಪವನ್ನು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷ ಖಂಡಿಸುತ್ತದೆ. ಈಗಾಗಲೇ ಆಹಾರ ಪದಾರ್ಥಗಳು, ಇಂಧನ ದರ ಏರಿಕೆ ಬಿಸಿಯಿಂದ ಜನತೆ ಬಸವಳಿದಿದ್ದಾರೆ. ಹಾಗಾಗಿ ಬಸ್ ಮತ್ತು ಮೆಟ್ರೋ ದರ ಏರಿಕೆಗಳು ಜನರಿಗೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ. ಸರ್ಕಾರವು ರಾಜ್ಯದ ಜನರಿಗೆ ಹೊಸ ವರ್ಷಕ್ಕೆ ಇಂತಹ ಉಡುಗೊರೆ ನೀಡಲು ಮುಂದಾಗಿರುವುದು ವಿಪರ್ಯಾಸ.

ಶಕ್ತಿ ಯೋಜನೆಯ ಬಾಕಿ ಹಣವನ್ನು ತಡ ಮಾಡದೆ ಸಾರಿಗೆ ನಿಗಮಗಳಿಗೆ ಪಾವತಿಸಬೇಕು. ಹಾಗೆಯೇ ನಿಗಮಗಳಲ್ಲಿರುವ ಭ್ರಷ್ಟಾಚಾರ, ದುಂದುವೆಚ್ಚಗಳಿಗೆ ಕಡಿವಾಣ ಹಾಕಬೇಕು. ಇದರ ಜೊತೆಗೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡಬೇಕಾದ ನ್ಯಾಯ ಸಮ್ಮತ ತೆರಿಗೆ ಬಾಕಿ ಪಾವತಿಸಬೇಕು. ಆ ಮೂಲಕ ಸಾರಿಗೆ ಸಂಸ್ಥೆಗಳ ಆದಾಯದ ಕೊರತೆಯನ್ನು ತುಂಬಬೇಕೇ ಹೊರತು ಯಾವುದೇ ಕಾರಣಕ್ಕೂ ದರ ಏರಿಕೆ ಮಾಡಕೂಡದು ಎಂದು ಆಗ್ರಹಿಸಿದ್ದಾರೆ.

ಚೆಲುವಾಂಬ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ರಾಜೇಂದ್ರಕುಮಾರ್‌ಗೆ ಅಭಿನಂದನೆ



ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ವೈದ್ಯಕೀಯ ಅಧೀಕ್ಷಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾದ ಡಾ.ರಾಜೇಂದ್ರಕುಮಾರ್ ಅವರನ್ನು ಮೈಸೂರು ಜಿಲ್ಲಾ ದಸಂಸ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಡಿ. 30– ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ವೈದ್ಯಕೀಯ ಅಧೀಕ್ಷಕರಾಗಿ ದಕ್ಷ ಹಾಗೂ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿ ನಿವೃತ್ತಿಯಾಗುತ್ತಿರುವ ಡಾ. ರಾಜೇಂದ್ರಕುಮಾರ್ ಅವರನ್ನು ಮೈಸೂರು ಜಿಲ್ಲಾ ದಸಂಸ ವತಿಯಿಂದ ಅಭಿನಂದಿಸಲಾಯಿತು.

ಈ ವೇಳೆ ದ.ಸಂ.ಸ ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ ಮಾತನಾಡಿ, ಡಾ॥ ರಾಜೇಂದ್ರಕುಮಾರ್ ಅವರು ಹುಣಸೂರಿನ ಅತ್ತಿಕುಪ್ಪೆ ಹೊಸೂರು ಗ್ರಾಮದಲ್ಲಿ ಅತ್ಯಂತ ಕಡುಬಡತನದಲ್ಲಿ ಹುಟ್ಟಿ, ಗ್ರಾಮದಿಂದ ಚಿಲ್ಕುಂದ ಸರ್ಕಾರಿ ಶಾಲೆಗೆ ಕಾಲ್ನಡಿಗೆಯಲ್ಲಿ ಹೋಗಿ ವಿದ್ಯಾಭ್ಯಾಸ ಮಾಡಿ ವೈದ್ಯಕೀಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಅತ್ಯಂತ ಪರಿಶ್ರಮದಿಂದ ವೈದ್ಯಕೀಯ ವ್ಯಾಸಂಗ ಮಾಡಿ ಹುಣಸೂರು ತಾಲೂಕಿನಲ್ಲೇ ಪ್ರಥಮವಾಗಿ ವೈದ್ಯರಾಗಿ, ಸರ್ಕಾರಿ ಸೇವೆ ಸಲ್ಲಿಸುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯ ಎಂದರು.

ದ.ಸಂ.ಸ ಹೆಚ್.ಬಿ.ದಿವಾಕರ್, ರಾಜ್ಯ ಅಲೆಮಾರಿ ಸಂಘದ ಅಧ್ಯಕ್ಷ ವೈ.ಕುಮಾರ್, ಏಕಲವ್ಯನಗರ ಸೋಮಶೇಖರ, ಕಪನಯ್ಯ, ಲೋಕೇಶ, ಮಂಜಪ್ಪ ಸಿದ್ದಪ್ಪ, ಪದ್ಮಾ, ಗೌರಮ್ಮ, ಸೌಮ್ಯ, ನಾರಾಯಣಮ್ಮ, ಸೀಮಾ, ಮಣಿ, ರಜಿನಿ, ಸರೋಜಿನಿ, ಚಿಕ್ಕತಾಯಿ ಮತ್ತಿತರರು ಈ ವೇಳೆ ಹಾಜರಿದ್ದರು.

ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಕ್ಯಾಲೆಂಡರ್ ಬಿಡುಗಡೆ



ಇತ್ತೀಚೆಗೆ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವಾರ್ಷಿಕ ಮಹಾಸಭೆ ನಡೆಯಿತು. ಈ ಸಂದರ್ಭದಲ್ಲಿ ಕರ್ನಾಟಕದ ಗಾಂಧಿ ಎಂದೇ ಪ್ರಸಿದ್ಧರಾದ ಚಮನ್‌ಲಾಲ್ ಪ್ರಶಸ್ತಿ ಪಡೆದ ತಗಡೂರು ರಾಮಚಂದ್ರರಾಯರ ಪುಣ್ಯಸ್ಮರಣೆ ಮಾಡಲಾಯಿತು. ಸಂಘದ ಅಧ್ಯಕ್ಷರಾದ ಎಂ.ವಿಶ್ವನಾಥಯ್ಯ, ಎಲ್ಲಾ ಪದಾಧಿಕಾರಿಗಳು, ನಿರ್ದೇಶಕ ಮಂಡಳಿ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು. ಇದೇ ವೇಳೆ 2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಚಾಮರಾಜ ಜೋಡಿ ರಸ್ತೆಯಲ್ಲಿ ಮರಕ್ಕೆ ಕಾರು ಡಿಕ್ಕಿ

ತೆಲಂಗಾಣ ಮೂಲದ ಇಬ್ಬರು ಸಾಫ್ಟ್‌ವೇರ್ ಇಂಜಿನಿಯರ್ಸ್ ಸಾವು

ಮೈಸೂರು, ಡಿ.30(ಆರ್‌ಕೆ)– ಚಾಲಕನ ನಿಯಂತ್ರಣ ತಪ್ಪಿದ ಕಾರು ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸಾಫ್ಟ್‌ವೇರ್ ಇಂಜಿನಿಯರ್‌ಗಳು ಸಾವನ್ನಪ್ಪಿದ್ದು, ಮತ್ತಿಬ್ಬರು ಗಾಯಗೊಂಡಿರುವ ಘಟನೆ ಮೈಸೂರಿನ ಚಾಮರಾಜ ಜೋಡಿ ರಸ್ತೆಯ ಗಾಯತ್ರಿ ಟಾಕೀಸ್ ಬಳಿ ಡಿಸೆಂಬರ್ 29ರ ಮಧ್ಯರಾತ್ರಿ ಸಂಭವಿಸಿದೆ.

ತೆಲಂಗಾಣ ಮೂಲದ ಸಾಯಿಕೃಷ್ಣ (30) ಮತ್ತು ಸಂದೀಪ್ (31) ಸಾವನ್ನಪ್ಪಿದವರು. ಗಾಯಗಳಾಗಿರುವ ಜಗದೀಶ್ ಮತ್ತು ಹರಿಕೃಷ್ಣ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಹೈದರಾಬಾದಿನ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಅವರು ಹೊಸ ವರ್ಷಾಚರಣೆಗೆಂದು ಮದುಮಲೈಗೆ ಹೋಗುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ.

ಬೆಂಗಳೂರಿನಿಂದ ಸ್ಕೋಡಾ ಕಾರಿನಲ್ಲಿ ಮೈಸೂರಿಗೆ ಬಂದ ಅವರು ರಿಂಗ್ ರೋಡ್‌ನಲ್ಲಿ ತೆರಳುವ ಬದಲು ದಾರಿ ತಿಳಿಯದೇ ನಗರ ಪ್ರವೇಶಿಸಿ ಜೆಎಲ್‌ಬಿ ರಸ್ತೆ, ರಾಮಸ್ವಾಮಿ ಸರ್ಕಲ್ ಮೂಲಕ ಚಾಮರಾಜ ಜೋಡಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಭಾನುವಾರ ಮುಂಜಾನೆ 1.30 ಗಂಟೆಯಲ್ಲಿ ಗಾಯತ್ರಿ ಟಾಕೀಸ್ ಬಳಿ ರಸ್ತೆ ಬದಿ ಮರಕ್ಕೆ ಕಾರು ಡಿಕ್ಕಿ ಹೊಡೆದಿದೆ. ಈ ವೇಳೆ ಕಾರಿನಲ್ಲಿದ್ದ ಸಾಯಿಕೃಷ್ಣ ಮತ್ತು ಸಂದೀಪ್ ಸ್ಥಳದಲ್ಲೇ ಸಾವನ್ನಪ್ಪಿದರು. ವಿಷಯ ತಿಳಿದು ಕೆ.ಆರ್.ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಶರತ್ ಹಾಗೂ ಸಿಬ್ಬಂದಿ ಸ್ಥಳ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡರು. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಭಾನುವಾರ ಮಧ್ಯಾಹ್ನ ವಾರಸುದಾರರಿಗೆ ದೇಹಗಳನ್ನು ಒಪ್ಪಿಸಲಾಯಿತು.

110ನೇ ಮೈಸೂರು ಸಾಹಿತ್ಯ ದಾಸೋಹ ಯಶಸ್ವಿ



ಮೈಸೂರು ಸಾಹಿತ್ಯ ದಾಸೋಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕವಿಗಳು, ಲೇಖಕರು ಚಿತ್ರದಲ್ಲಿದ್ದಾರೆ.

ಮೈಸೂರು,ಡಿ.30–ಮೈಸೂರು ಸಾಹಿತ್ಯ ದಾಸೋಹ ವತಿಯಿಂದ ನೇಗಿಲಯೋಗಿ ಸಭಾಂಗಣದಲ್ಲಿ ನಡೆದ ಸಾಹಿತ್ಯ ದಾಸೋಹ ಕಾರ್ಯಕ್ರಮದಲ್ಲಿ ಮೂವತ್ತಕ್ಕೂ ಹೆಚ್ಚು ಕವಿಗಳು, ಲೇಖಕರು ಭಾಗವಹಿಸಿದ್ದರು.

ಎಲ್ಲರೂ ತಮ್ಮ ಸ್ವ–ರಚನೆಯ ಲೇಖನ, ಕವನ, ಕಥೆ, ಪ್ರವಾಸ ಕಥನ, ವೃತ್ತಿಯಲ್ಲಿನ ಅನುಭವ, ಹಾಸ್ಯ ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಪ್ರಸ್ತುತಿಪಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಿಕ್ಷಕಿ ಕವಿ ಕೆ.ಟಿ.ಶ್ರೀಮತಿ ವಹಿಸಿ ಎಲ್ಲರ ಪ್ರಸ್ತುತಿಗಳಿಗೆ ವಿಮರ್ಶೆ ಮಾಡಿ ಮಾತನಾಡಿ, ತಿಂಗಳಿಂದ ತಿಂಗಳಿಗೆ ಮೈಸೂರು ಸಾಹಿತ್ಯ ದಾಸೋಹದಲ್ಲಿ ವಿಭಿನ್ನ ರೀತಿಯ ಸಾಹಿತ್ಯದ ಪ್ರಕಾರಗಳು ಹೊರ ಬರುತ್ತಿವೆ. ಇದೊಂದು ಅರ್ಥಪೂರ್ಣ, ಮೌಲ್ಯಯುತ ಕಾರ್ಯಕ್ರಮವಾಗಿದೆ. ಪ್ರಾರಂಭದಲ್ಲಿ ಸುಮ್ಮನೆ ಭಾಗಿಯಾಗಿದ್ದ ಹಲವರು ಇಂದು ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ವೇದಿಕೆಯಲ್ಲಿ ಮೈಸೂರು ಸಾಹಿತ್ಯ ದಾಸೋಹದ ರೂವಾರಿಗಳಾದ ಆನಂದ್ ಮತ್ತು ಪದ್ಮಾ ಆನಂದ್, 110ನೇ ಸಾಹಿತ್ಯ ದಾಸೋಹದ ಆತಿಥ್ಯ ವಹಿಸಿದ್ದ ಆಕಾಶವಾಣಿಯ ನಿವೃತ್ತ ಅಧಿಕಾರಿ, ಲೇಖಕ, ಕವಿ, ವಿಮರ್ಶಕ ಎನ್.ವಿ.ರಮೇಶ್, ಶ್ರೀಮತಿ ಉಮಾ ರಮೇಶ್ ದಂಪತಿ ಭಾಗವಹಿಸಿದ್ದರು.

ಸಾಹಿತ್ಯ ದಾಸೋಹದ 9ನೆಯ ವಾರ್ಷಿಕೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಪ್ರಯುಕ್ತ ನಡೆಸಿದ ರಸಪ್ರಶ್ನೆ ವಿಜೇತರಾದ ಆರ್.ಎ.ಕುಮಾರ್, ಎನ್.ವಿ.ರಮೇಶ್, ಕಣ್ಣೂರು ವಿ ಗೋವಿಂದಾಚಾರಿ (ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ರಸಪ್ರಶ್ನೆ ವಿಜೇತರು) ಅವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ವಿಪ್ರ ಜಾಗೃತಿ ವೇದಿಕೆಯ ಕ್ಯಾಲೆಂಡರ್ ಬಿಡುಗಡೆ




ವಿಪ್ರ ಜಾಗೃತಿ ವೇದಿಕೆಯ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಬಿಡುಗಡೆ ಮಾಡಿದರು. ಮೈಸೂರು ನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಪ್ರಕಾಶ್, ಕೆ.ರಘುರಾಂ ವಾಜಪೇಯಿ, ಸತ್ಯನಾರಾಯಣ್, ನಂ.ಶ್ರೀಕಂಠಕುಮಾರ್, ಮಾ.ವಿ.ರಾಮಪ್ರಸಾದ್, ಡಾ.ಲಕ್ಷ್ಮೀದೇವಿ, ನಾಗರಾಜ್, ಪ್ರಭಾ, ಸುರೇಶ್, ಮಂಜುನಾಥ್, ಸುಚೀಂದ್ರ ಇನ್ನಿತರರಿದ್ದರು.

ವಿಷ್ಣುವರ್ಧನ್ ನೆನಪು



ಮೈಸೂರಿನ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಚಾಮುಂಡಿಪುರಂ ವೃತ್ತದಲ್ಲಿ ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ ಭಾವಚಿತ್ರ ಹಿಡಿದು ಮೊಂಬತ್ತಿ ಬೆಳಗುವ ಮೂಲಕ ವಿಷ್ಣು ಅವರ ಪುಣ್ಯಸ್ಮರಣೆ ಆಚರಿಸಲಾಯಿತು. ಬಳಗದ ಅಧ್ಯಕ್ಷ ಸಂದೀಪ್, ಪಾಲಿಕೆ ಮಾಜಿ ಸದಸ್ಯ ಪಾರ್ಥಸಾರಥಿ, ಅಜಯ್ ಶಾಸ್ತ್ರಿ ಅಂಬಳೆ ಶಿವಣ್ಣ, ಧರ್ಮೇಂದ್ರ, ಪುರುಷೋತ್ತಮ್, ವಿಕ್ರಂ ಐಯ್ಯಂಗಾರ್, ಪ್ರಭು, ಅರವಿಂದ, ಅಭಿನಂದನ್ ಅರಸ್, ಲೋಕೇಶ್, ಅರ್ಜುನ್ ಅರಸ್, ಮಹೇಶ್ ಅರಸ್, ಲತಾ, ಸುಶೀಲ, ಭುವನಾಕ್ಷಿ ಇತರರಿದ್ದರು.

ಸಾಹಸಸಿಂಹ ವಿಷ್ಣುವರ್ಧನ್ 15ನೇ ವರ್ಷದ ಪುಣ್ಯಸ್ಮರಣೆ



ಜೆಎಸ್‌ಎಸ್ ಸಂಸ್ಥೆಯ ದೃಷ್ಟಿದೋಷವುಳ್ಳ ಉದ್ಯೋಗಸ್ಥ ಮಹಿಳೆಯರು, ವಿದ್ಯಾರ್ಥಿನಿಯರ ನಿಲಯದ ಬಂಧುಗಳಿಗೆ ಹಣ್ಣು ಹಂಪಲು ಹಾಗೂ ದಿನಸಿ ಸಾಮಗ್ರಿಗಳನ್ನು ವಿತರಿಸುವ ಮೂಲಕ ಸಾಹಸಸಿಂಹ ವಿಷ್ಣುವರ್ಧನ್ ಅವರ 15ನೇ ವರ್ಷದ ಪುಣ್ಯಸ್ಮರಣೆ ಆಚರಿಸಲಾಯಿತು. ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ನಿಲಯಪಾಲಕಿ ಅನಿತಾ, ಡಾ.ಬಿ.ಎಸ್.ಪ್ರೇಮಕುಮಾರಿ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ್, ವೀರಭದ್ರಸ್ವಾಮಿ, ಮಹದೇವ್, ಯಶ್ವಂತ್‌ಕುಮಾರ್, ಮಹೇಶ್, ರಾಜೇಶ್ ಕುಮಾರ್, ನವನೀತ್ ಕುಮಾರ್, ಜಯಮ್ಮ, ಅಕ್ಷಯ್ ಪ್ರಿಯದರ್ಶನ್, ಹರ್ಷಿತ್ ನಾಗೇಶ್ ಇತರರಿದ್ದರು.

ನಿಧನ



ಹೆಚ್.ಸಿ.ತಮ್ಮಯ್ಯ


ಮೈಸೂರು, ಡಿ.30–ಜೆಎಸ್‌ಎಸ್ ನಿವೃತ್ತ ಶಿಕ್ಷಕ, ಮೈಸೂರಿನ ರಾಮಕೃಷ್ಣನಗರ ನಿವಾಸಿ ಹೆಚ್.ಸಿ.ತಮ್ಮಯ್ಯ(80) ಅವರು ಸೋಮವಾರ ಸಂಜೆ ನಿಧನರಾದರು. ಮೃತರು ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಅವರ ಸ್ವಗ್ರಾಮವಾದ ಕೆ.ಆರ್.ನಗರ ತಾಲೂಕು ಹಾಡ್ಯದಲ್ಲಿ ನಾಳೆ (ಮಂಗಳವಾರ) ಬೆಳಗ್ಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಲತೀಫಾ ಬಾನು ಸಾಹೆಬಾ



ಮೈಸೂರು, ಡಿ. 30– ಮೈಸೂರಿನ ಮೀನಾ ಬಜಾರ್‌ನ ನಿವಾಸಿ ದಿವಂಗತ ಸೈಯದ್ ಗೌಸ್ ಪೀರ್ ಅವರ ಪತ್ನಿ ಶ್ರೀಮತಿ ಲತೀಫಾ ಬಾನು (68) ಭಾನುವಾರ ಮುಂಜಾನೆ ಹೃದಯಾಘಾತದಿಂದ ನಿಧನರಾದರು. ಮೃತರು ಪುತ್ರಿ ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೈಸೂರಿನ ಮಂಡಿ ಮೊಹಲ್ಲಾ, ಕೆ.ಟಿ. ಸ್ಟ್ರೀಟ್, ಮಸೀದಿ ಮೀರ್ ಹಯಾತ್ ಹತ್ತಿರ ಇರುವ ಮುಸ್ಲಿಮರ ಸ್ಮಶಾನದ ಗೇಟ್ ನಂ.1ರಲ್ಲಿ ಮೃತರ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.12.2024 ಮಂಗಳವಾರ, ಮಳೆ ನಕ್ಷತ್ರ: ಪೂಷಾ, 29.12.2024ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧನುರ್ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಸುಪ್ರಭ ನಾಗೇಶರಾವ್ ಸೇವಾ ಪ್ರತಿಷ್ಠಾನ :** ವಿಶ್ವ ಶಾಂತಿಗಾಗಿ ವಿಷ್ಣು ಸಹಸ್ರನಾಮ ಪಾರಾಯಣ, ಏಕವ್ಯಕ್ತಿಯಿಂದ ನಿರಂತರವಾಗಿ 108 ಬಾರಿ ಪಾರಾಯಣ, ಸ್ಥಳ: #622, 2ನೇ ಮೇನ್, 2ನೇ ಕ್ರಾಸ್, ಶಾರದಾದೇವಿನಗರ, ಬೆಳಗ್ಗೆಯಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್. ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15 ರಿಂದ.

■ **ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ :** ಹಿರಿಯ ಸ್ವಾಮೀಜಿ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಆರಾಧನೆ ಪ್ರಯುಕ್ತ ಜ್ಞಾನಯಜ್ಞ ಸಂಭ್ರಮ ಕಾರ್ಯಕ್ರಮದಡಿ ಪಲಿಮಾರು ಮಠದ ಸಂಸ್ಥಾನಾಧೀಶರಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರಿಂದ ಮಹಾಭಾರತದಲ್ಲಿ ಭೀಷ್ಮಪರ್ವ ಕುರಿತು ಪ್ರವಚನ, ಸ್ಥಳ: ಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ, ಸಂಜೆ 6.30ರಿಂದ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ಶ್ರೀ ಮದ್ಭಾಗವತ ಸಪ್ತಾಹ, ವಿದುಷಿ ಡಾ.ಜ್ಯೋತಿ ಶಂಕರ್ ಅವರಿಂದ ಕೃಷ್ಣಾವತಾರ ಕುರಿತು ಪ್ರವಚನ, ರಾಮಕೃಷ್ಣನಗರದ ಸ್ವರರಾಗಾಲಯ ಸಂಗೀತ ಕೇಂದ್ರದಿಂದ ಹಾಡುಗಾರಿಕೆ, ವಿದ್ವಾನ್ ಡಾ. ಎಚ್.ಎಸ್. ತಾಂಡವಮೂರ್ತಿ–ಪಿಟೀಲು, ಸುಮುಖ– ಮೃದಂಗ, ಸ್ಥಳ: ರಜತ ಸಭಾ ಮಂಟಪ, ಗಣಪತಿ ದೇವಸ್ಥಾನ, ಐ–ಬ್ಲಾಕ್, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ:** ಹಿರಿಯ ಸ್ವಾಮೀಜಿ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಆರಾಧನೆ ಪ್ರಯುಕ್ತ, ಜ್ಞಾನ ಯಜ್ಞ ಸಂಭ್ರಮ ಕಾರ್ಯಕ್ರಮದಡಿ ಪಲಿಮಾರು ಮಠದ ಸಂಸ್ಥಾನಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರಿಂದ ಮಹಾಭಾರತದಲ್ಲಿ ಭೀಷ್ಮ ಪರ್ವ ಕುರಿತು ಪ್ರವಚನ, ಸ್ಥಳ: ಶ್ರೀ ಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ, ಸಂಜೆ 6.30 ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

■ **ಮೈಸೂರು ಅರಮನೆ ಮಂಡಳಿ :** ಬೆಳಗ್ಗೆ 10 ರಿಂದ 9 ರವರೆಗೆ ಅರಮನೆ ಫಲಪುಷ್ಪ ಪ್ರದರ್ಶನ, ಸ್ಥಳ: ಅರಮನೆ ಆವರಣ.

■ **ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ರೈತ ಸಂಘ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘ :** ವಿಶ್ವ ರೈತ ದಿನಾಚರಣಾ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸ್ಥಳ: ಕಲಾಮಂದಿರ, ಬೆಳಗ್ಗೆ 11ಕ್ಕೆ.

■ **ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್, ಡಾ. ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ :** ಮೈಸೂರು ಜಯರಾಂ ಅವರ ಹುಟ್ಟುಹಬ್ಬದ ಪ್ರಯುಕ್ತ ಅಮ್ಮನಿಗಾಗಿ ಸಂಗೀತ ಸಂಜೆ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ– ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಶಾಂತಲಾ ವಟ್ಟಂ, ವ್ಯಾಖ್ಯಾನ–ಡಾ. ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್.ಎಸ್.ಎಸ್., 8.30ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಟಿ.ಎನ್.ಶೇಷಗೋಪಾಲನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್, ಚೈತ್ರಿಕಾ. ಎಸ್ ಹಾಗೂ ಕಾರ್ತಿಕ್. ಎಂ. ಎಸ್

ಮಧ್ಯಾಹ್ನ: 12.05–ವನಿತಾ ವಿಹಾರ 'ನಾನು ನನ್ನ ಕಂಪನಿ' ನೈಸರ್ಗಿಕವಾಗಿ ಸೌಂದರ್ಯ ಉತ್ಪನ್ನಗಳನ್ನು ಮನೆಯಲ್ಲಿಯೇ ತಯಾರಿಸುವ ಪಲ್ಲವಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 12.35 –ದೇವರನಾಮ–ನಿರಂಜನ್, 12.45–ಯಾರು ಕಾಣದ ಪ್ರವಾಸ ತಾಣ–ಬಾನುಲಿ ಮಾಲಿಕೆ– ಮೇಲುಕೋಟೆಯ ಗುಹಾಂತರ ದೇವಾಲಯ–ಪರಿಚಯಿಸುತ್ತಾರೆ ಸಿರಿ ಮೈಸೂರು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20–ಭಾವಗೀತೆಗಳು–ಹಂಸಿನಿ. ಎಸ್. ಕುಮಾರ್, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ.ಎಸ್. ಆನಂದ್ ಮತ್ತು ಎಂ. ಆರ್. ಕೃಷ್ಣ–ಯುಗಳ ನಾಗಸ್ವರ ವಾದನ, 4.00–ಕಥಾ ಕಾಲಕ್ಷೇಪ–ನಲ್ಲ ತಂಗಾದೇವಿ, ಪ್ರಸ್ತುತಿ: ವಿದ್ವಾನ್. ಆರ್. ಗುರುರಾಜುಲು ನಾಯ್ಡು, 6.50–ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಹಿಪ್ಪುನೇರಳೆಯಲ್ಲಿ ಹನಿ ನೀರಾವರಿ ತಾಂತ್ರಿಕತೆಗಳನ್ನು ಕುರಿತು ಸಂವಾದ. ಭಾಗವಹಿಸುತ್ತಾರೆ : ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿಗಳಾದ ಡಾ. ಸಿ.ಎಂ. ಬಾಬು ಮತ್ತು ಡಾ. ಆರ್. ಮಹೇಶ್, ಪ್ರಸ್ತುತಿ: ಎನ್. ಕೇಶವಮೂರ್ತಿ, 7.45–ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00 –ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಉಸ್ತಾದ್ ಶಫಿಕ್ಯೂ ಖಾನ್–ಸಿತಾರ್, 9.30– ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ.ಡಿ. ಸುಮತಿ–ಹಾಡುಗಾರಿಕೆ, 10.00 –ಚೈತ್ರವನ –ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ : ಡಾ. ಎ.ಎಸ್. ಶಂಕರನಾರಾಯಣ, 10.30– ಸವಿನೆನಪು

ಸದಭಿರುಚಿ, ಸಾಮರಸ್ಯ, ಮಾನವೀಯ ಮೌಲ್ಯ ಬೆಳೆಸುವಂತಹ ಸಂಜೀವಿನಿ ವನ ರಂಗಭೂಮಿ

● ಬಹುಭಾಷಾ ನಟ ಪ್ರಕಾಶ್ ರಾಜ್ ಅಭಿಮತ ● ನಿರಂತರ ರಂಗ ಉತ್ಸವಕ್ಕೆ ತೆರೆ

ಮೈಸೂರು,ಡಿ.30(ಪಿಎಂ)– ರಂಗಭೂಮಿ ಪ್ರಸ್ತುತತೆ ಅರ್ಥ ಮಾಡಿಕೊಳ್ಳಬೇಕು. ಸದಭಿರುಚಿ, ಸಾಮರಸ್ಯ, ಮಾನವೀಯ ಮೌಲ್ಯ ಬೆಳೆಸುವಂತಹ ಸಂಜೀವಿನಿ ವನ ರಂಗಭೂಮಿ ಎಂದು ರಂಗಕರ್ಮಿಗಳೂ ಆದ ಬಹುಭಾಷಾ ನಟ ಪ್ರಕಾಶ್ ರಾಜ್ ಅಭಿಪ್ರಾಯಪಟ್ಟರು.


ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದ ಎದುರು ಸೋಮವಾರ ಹಮ್ಮಿಕೊಂಡಿದ್ದ ನಿರಂತರ ಫೌಂಡೇಷನ್‌ನ ನಿರಂತರ ರಂಗ ಉತ್ಸವದ (6 ದಿನಗಳ ನಾಟಕ ಪ್ರದರ್ಶನ) ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರಮುಖವಾದ ಗ್ರೀನ್ ಹಾರ್ಟ್ ಒಂದು ಸಮಾಜಕ್ಕೆ ರಂಗಭೂಮಿ. ಅದು ಅಭಿರುಚಿ, ಸಾಮರಸ್ಯ, ಮಾನವೀಯತೆ ಮತ್ತು ಗ್ರಹಿಕೆ ಬೆಳೆಸಲಿದೆ. ಅಂತಹ ರಂಗಭೂಮಿ ಕಾಯಕಕ್ಕೆ ನಾವೆಲ್ಲ ದೊಡ್ಡ ಬಲದೊಂದಿಗೆ ಒಂದಾಗಿ ನಿಲ್ಲುವುದು ಅಗತ್ಯ. ನಿರ್ದಿಗಂತ, ನಿರಂತರ, ರಂಗಾಯಣ ಸೇರಿದಂತೆ ಯಾವುದೇ ರಂಗ ಸಂಸ್ಥೆಗಳು ಯಾರೊಬ್ಬರ ಆಸ್ತಿಯಲ್ಲ. ಅವು ನಮ್ಮೆಲ್ಲರ ಆಸ್ತಿಯಾಗಿದ್ದು, ಅವು ನಮ್ಮೆಲ್ಲರ ಮನೆಗಳಾಗಿವೆ. ನಮ್ಮ ಯುವಜನರು, ಮಕ್ಕಳು, ಹಿರಿಯರು ಇಂತಹ ಸ್ಥಳಗಳಲ್ಲಿ ಕುಳಿತು ಹಾಡು, ನಾಟಕ, ಸಾಹಿತ್ಯ ಹಾಗೂ ವಿಚಾರ ಸಂಕಿರಣದಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸ್ಥಳಗಳಿವು. ಜೊತೆಗೆ ವಿಚಾರ ವಿನಿಮಯ ಮಾಡಿಕೊಳ್ಳುವ ಸ್ಥಳಗಳಾದ ಅವು ಸಮಾಜದ ಆರೋಗ್ಯ ಕಾಪಾಡುವ ಆಸ್ಪತ್ರೆ ಹಾಗೂ ಎಲ್ಲಾ ಸಂಜೀವಿಗಳಿರುವ ವನ ಎಂದು ಬಣ್ಣಿಸಿದರು.

ಈ ನಿಟ್ಟಿನಲ್ಲಿ ಬಹಳ ಕೆಲಸಗಳು ಆಗಬೇಕಿದೆ. ಪ್ರೇಕ್ಷಕರಾದ ನಾವು ಮತ್ತು ಇತರ ತಂಡಗಳು ನಿರಂತರದಂತಹ ಸಂಸ್ಥೆಗಳಿಗೆ ಕೇವಲ ಮಾತಿನಲ್ಲಿ ಪ್ರಶಂಸೆ ವ್ಯಕ್ತಪಡಿಸಿದರೆ ಸಾಲದು. ಅವರೊಂದಿಗೆ ನಿಲ್ಲಬೇಕಾಗುತ್ತದೆ. ಇಲ್ಲವಾದರೆ ಈ ರೀತಿ ಕೆಲಸ ಮಾಡುತ್ತಲೇ ಸೋಲಬೇಕಾಗುತ್ತದೆ. ಜೊತೆಗೆ ಅಸಹಾಯಕತೆ ಬೆಳೆಯುತ್ತಾ ಹೋಗುತ್ತದೆ ಎಂದರು.

ಸರ್ಕಾರದವರು ಮೈಸೂರಿನಲ್ಲಿ ಕಲಾಮಂದಿರ ಕಟ್ಟಿದ್ದಾರೆ. ಅಲ್ಲಿ ಡಿಜೆ ಅಥವಾ ಏನು ಮಾಡಿದರೂ ಸಹಿಸಿಕೊಳ್ಳಬೇಕು. ರಂಗಾಯಣಕ್ಕೆ ಸರ್ಕಾರದಿಂದ 20 ಲಕ್ಷ ಬಂದರೆ ಸ್ವಂತಕ್ಕೆ ಒಂದು ಬಿಲ್ಡಿಂಗ್ ಕಟ್ಟಿಕೊಳ್ಳಲು ರಂಗಾಯಣದಲ್ಲಿ ಆಗಲ್ಲ. ಅಂದ್ರೆ ಸರ್ಕಾರಗಳು ಕೊಟ್ಟಂಗೆ ಕೊಟ್ಟಿವೆಯಷ್ಟೇ ಹೊರತು ಕೊಟ್ಟಿಲ್ಲ. ಬಹುರೂಪಿ ನಾಟಕೋತ್ಸವ ನಡೆಯುತ್ತದೆ. ಅದಕ್ಕೆ ದುಡ್ಡು ಕೊಡಬೇಕೆಂದು ಅನ್ನಿಸುವುದಿಲ್ಲ. ಇಂತಹ ಸನ್ನಿವೇಶದಲ್ಲಿ ರಂಗಾಯಣ, ನಿರಂತರದಂತಹ ಸಂಸ್ಥೆಗಳು ನಿಂತಿರುವುದಕ್ಕೆ ಕಾರಣ ಪ್ರೇಕ್ಷಕರು ಎಂದು ಹೇಳಿದರು.

ಮೈಸೂರು ಹಾಗೂ ನಮ್ಮ ಯುವಜನರ ಆರೋಗ್ಯ ಕಾಪಾಡಿಕೊಳ್ಳಬೇಕಾದರೆ ನಿರಂತರ, ರಂಗಾಯಣ, ನಿರ್ದಿಗಂತ ಅಥವಾ ಹವ್ಯಾಸಿ ತಂಡಗಳಾಗಲಿ, ಎಲ್ಲರೂ ಸಣ್ಣತನದಿಂದ ಒಬ್ಬರನ್ನೊಬ್ಬರು ಕಾಲೆಳೆಯದೇ, ಹೊಟ್ಟೆ ಕಿಚ್ಚು ಪಡದೇ ಒಂದಾಗಬೇಕು. ಮನುಷ್ಯನಲ್ಲಿ ಈ ಗುಣಗಳು ಸಹಜವಾದರೂ ರಂಗ ಚಟುವಟಿಕೆಯಂತಹ ದೊಡ್ಡ ಕೆಲಸಕ್ಕೆ ಅವು ಸರಿ ಹೋಗಲ್ಲ. ಅಭಿಪ್ರಾಯ, ಭಿನ್ನಾಭಿಪ್ರಾಯ ಹಾಗೂ ಸಂವಾದದೊಂದಿಗೆ ಎಲ್ಲರೂ ಒಂದಾಗಿ



ಮೈಸೂರಿನ ಕಿರುರಂಗಮಂದಿರ ಆವರಣದಲ್ಲಿ ಸೋಮವಾರ ನಡೆದ ನಿರಂತರ ರಂಗ ಉತ್ಸವದ ಸಮಾರೋಪ ಸಮಾರಂಭದಲ್ಲಿ ಬಹುಭಾಷ ನಟ ಪ್ರಕಾಶ್ ರಾಜ್ ಮಾತನಾಡಿದರು.

ಮುನ್ನಡೆಯುವಂತಹ ನಿರ್ಧಾರವನ್ನಾದರೂ ಈ ವರ್ಷದ ಕೊನೆಯಲ್ಲಿ ಕೈಗೊಳ್ಳೋಣ ಎಂದು ತಿಳಿಸಿದರು.

ದೇಶ ಎಂಬುದು ಒಂದು ದೋಣಿ ಇದ್ದಂತೆ. ಅದರಲ್ಲಿ ತೂತು ಉಂಟಾಗಿದ್ದು, ಮೊದಲು ದೋಣಿಯ ತೂತು ಮುಚ್ಚೋಣ. ಆಮೇಲೆ ನಾವು ಜಗಳವಾಡುವುದು, ಇಲ್ಲವೇ ಒಟ್ಟಾಗಿ ಮುನ್ನಡೆಯುವುದು ಇದ್ದೇ ಇದೆ. ಇಂದು ಮೀಡಿಯಾ, ಬೇರೆ ಬೇರೆ ಸಂಸ್ಕೃತಿ ಅಬ್ಬರ ಹಾಗೂ ಆಲೋಚನೆಗಳ ನಡುವೆ ನಾವು ಆರೋಗ್ಯವಾಗಿ ಇರಬೇಕಾದರೆ ರಂಗಭೂಮಿ ಉತ್ಸವಗಳನ್ನು ನಿರಂತರವಾಗಿ ಮಾಡುತ್ತಿರಬೇಕು. ಅಹಂ ಬಿಟ್ಟು ಒಟ್ಟಾಗಿ ಮೈಸೂರಿನಲ್ಲಿ ರಂಗಭೂಮಿಗೆ ಉತ್ತೇಜನ ನೀಡಬೇಕಿದೆ. ರಂಗಾಯಣಕ್ಕೆ ಸ್ವಾಯತ್ತತೆ ಬರಲಿ, ಇನ್ನೊಂದಷ್ಟು ರಂಗ ಸಂಸ್ಥೆಗಳು ಹುಟ್ಟಿಕೊಳ್ಳುವ ಮೂಲಕ ನಮ್ಮ ಮೈಸೂರನ್ನು ಇನ್ನಷ್ಟು ಆರೋಗ್ಯವಂತವಾಗಿ ನಿರ್ಮಿಸೋಣ. ಇದು ದೇಶಕ್ಕೆ ಸ್ಫೂರ್ತಿಯಾಗುವಂತಿರಬೇಕು ಎಂದು ಹೇಳಿದರು.

ಇಂದು ಬೇರೆ ರೂಪ ತಾಳಿದ ಇಕ್ಮತ್: ಚಿಂತಕ ದೇವನೂರು ಬಸವರಾಜು ಮಾತನಾಡಿ, ನಮ್ಮ ಸುತ್ತಮುತ್ತ ನಡೆಯುತ್ತಿರುವ ಘಟನೆಗಳನ್ನು ನೆನೆಸಿಕೊಂಡರೆ ನೋವಾಗುತ್ತದೆ. ಇಂದು ಜಾತಿ, ಧರ್ಮದ ಅಸಹನೆ ನಡುವೆ ಹೇಗೋ ಕಾಲ ಕಳೆಯುತ್ತಿದ್ದೇವೆ. ಇನ್ನಾದರೂ ಪ್ರೀತಿ–ವಿಶ್ವಾಸ ಬೆಳೆಸದೇ ಹೋದರೆ ನಾಳೆ ಯಾರಿಗೂ ನೆಮ್ಮದಿ ಇರೋಲ್ಲ ಎಂದರು.

ಅವಿದ್ಯಾವಂತರು ಪ್ರತಿಯೊಂದನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಅದಕ್ಕೆ ನಿಮಗೊಂದು ಉದಾಹರಣೆ ಹೇಳುತ್ತೇನೆ. ನನ್ನೂರು ದೇವನೂರಿನಲ್ಲಿ ಕನಕೇಬಸವಯ್ಯ ಎಂಬ ಅಜ್ಜ ಇದ್ದರು. ಮಾರಿಗುಡಿ ಮೂಲೆಯಲ್ಲಿ ಕುಳಿತುಕೊಳ್ಳುವ ಹವ್ಯಾಸ ಅವರದು. ಬಹಳ ಹಿಂದೆ ಶ್ರೀರಾಮನ ದೇವಸ್ಥಾನ ಕಟ್ಟಿಸಲು ಇಟ್ಟಿಗೆ ಸಂಗ್ರಹಕ್ಕೆ ಕೆಲ ಹುಡುಗರು ಮುಂದಾಗಿದ್ದ ಸನ್ನಿವೇಶ. ಇದನ್ನು ಕಂಡ ಕನಕೇಬಸವಯ್ಯ, 'ತಮ್ಮಯ್ಯ ಏನಪ್ಪ ಇವರು ಮಾಡುತ್ತಿರುವ ಕೆಲಸ' ಎಂದು ನನ್ನನ್ನು ಕೇಳಿದರು. ಅದಕ್ಕೆ ನಾನು, 'ದೇವಸ್ಥಾನ ಕಟ್ಟುತ್ತಿದ್ದರಂತೆ, ಇಟ್ಟಿಗೆಗಳನ್ನು ಎಲ್ಲೆಡೆ ಸಂಗ್ರಹ ಮಾಡುತ್ತಿದ್ದಾರಂತೆ' ಎಂದು ಹೇಳಿದ್ದೆ. ಅದಕ್ಕವರು, 'ಅಲ್ಲಕಪ ಆ ಊರನ್ ದಿಕ್ಕಿಗೆ ಮನೆಗಿನೆ ಕಟ್ಟಿಲ್ವ, ಅಲ್ಲೇ ಇಟ್ಟಿಗೆ ಕುಯ್ಯುಸಬಹುದಲ್ಲ' ಎಂದರಲ್ಲದೆ, 'ಇದರ ಹಿಂದೆ ಏನೋ ಇಕ್ಮತ್ ಅದೆಕಪ' ಎಂದಿದ್ದರು. ಅಂತಹ ಇಕ್ಮತ್‌ಗಳು ಇಂದು ಬೇರೆ ಬೇರೆ ರೂಪದಲ್ಲಿ ನಡೆಯುತ್ತಿದೆ ಎಂದು ಹೇಳಿದರು. ನಿರಂತರ ಫೌಂಡೇಷನ್‌ನ ಎಂ.ಎಂ. ಸುಗುಣ ಮತ್ತಿತರರಿದ್ದರು.

ಮೃಗಾಲಯ, ಕಾರಂಜಿಕೆರೆ ವೀಕ್ಷಣೆಗೆ ಇಂದು ಅವಕಾಶ

ಮೈಸೂರು, ಡಿ.30– ಹೊಸ ವರ್ಷದ ಪ್ರಯುಕ್ತ ಪ್ರವಾಸಿಗರು, ಜನಸಾಮಾನ್ಯರು ಹಾಗೂ ಸ್ಥಳೀಯರಿಗೆ ಮೃಗಾಲಯವನ್ನು ವೀಕ್ಷಿಸಲು ಅನುವಾಗುವಂತೆ ಡಿ.31 ರಂದು ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನವನವನ್ನು ಸಾರ್ವಜನಿಕರ ವೀಕ್ಷಣೆಗೆ ತೆರೆದಿರಲಾಗುವುದು ಎಂದು ಮೃಗಾಲಯ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದರ್ಶನ್ ಜಾಮೀನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಕೆಗೆ ಗೃಹ ಇಲಾಖೆ ಅಸ್ತು



ದರ್ಶನ್

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಿಗೆ ಹೈಕೋರ್ಟ್ ನೀಡಿರುವ ಜಾಮೀನು ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಗೃಹ ಇಲಾಖೆ ನಗರ ಪೊಲೀಸರಿಗೆ ಅನುಮತಿ ನೀಡಿದೆ.

ದರ್ಶನ್, ಪವಿತ್ರಗೌಡ ಸೇರಿದಂತೆ ಏಳು ಆರೋಪಿಗಳಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿರುವ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಅನುಮತಿ ಕೋರಿ ನಗರ ಪೊಲೀಸರು, ಗೃಹ ಇಲಾಖೆಗೆ ಕಳೆದ ವಾರ ಪತ್ರ ಬರೆದಿದ್ದರು. ಅನುಮತಿ ನೀಡಿ ಆದೇಶ ಸೋಮವಾರ ಹೊರಡಿಸಲಾಗಿದೆ.

ಸರ್ಕಾರದ ಪರವಾಗಿ ಸುಪ್ರೀಂಕೋರ್ಟ್‌ನಲ್ಲಿ ವಾದ ಮಂಡಿಸಲು ಹಿರಿಯ ವಕೀಲ ಸಿದ್ಧಾರ್ಥ್ ಲೂಥ್ರಾ ಅವರನ್ನು ನೇಮಿಸಲಾಗಿದೆ. ಅನಿಲ್ ಸಿ. ನಿಶಾನಿ ಹಾಗೂ ಹೈಕೋರ್ಟ್‌ನ ಪಬ್ಲಿಕ್ ಪ್ರಾಸಿಕ್ಯೂಟರ್ ಅವರಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಜವಾಬ್ದಾರಿ ನೀಡಿ ಆದೇಶಿಸಲಾಗಿದೆ. ಮೇಲ್ಮನವಿ ಸಲ್ಲಿಸಲು ಅನುಮತಿ ನೀಡಿರುವ ಕಡತಗಳನ್ನು ಗೃಹ ಇಲಾಖೆಯಿಂದ ಪೊಲೀಸರಿಗೆ ರವಾನಿಸಲಾಗಿದೆ. ಕನ್ನಡದಿಂದ ಇಂಗ್ಲಿಷ್‌ಗೆ ದೋಷಾರೋಪ ಪಟ್ಟಿ ಭಾಷಾಂತರ ಕೆಲಸವು ಪೂರ್ಣವಾಗಿದೆ. ಎರಡು ದಿನಗಳ ಒಳಗಾಗಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಕೆಎಎಸ್ ಪರೀಕ್ಷೆಯಲ್ಲಿ ಮತ್ತೆ ಅದ್ವಾನ; ರಾಜ್ಯ ಸರ್ಕಾರದ ಆಡಳಿತಕ್ಕೆ 'ಕೈ'ಗನ್ನಡಿ

ಸಂಸದ ಯದುವೀರ್ ಟಾಂಗ್



ಮೈಸೂರು, ಡಿ.30(ಎಸ್‌ಬಿಡಿ)– ಕೆಪಿಎಸ್‌ಸಿಯು ನಡೆಸಿದ ಕೆಎಎಸ್ ಮರುಪರೀಕ್ಷೆಯಲ್ಲೂ ಎಡವಟ್ಟು ಮರುಕಳಿಸಿರುವುದು ರಾಜ್ಯ ಸರ್ಕಾರದ ಬೇಜವಾಬ್ದಾರಿ ಆಡಳಿತಕ್ಕೆ ಹಿಡಿದ 'ಕೈ'ಗನ್ನಡಿ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಚಾಟಿ ಬೀಸಿದ್ದಾರೆ.

ಭಾನುವಾರ ಕೆಪಿಎಸ್‌ಸಿ ನಡೆಸಿದ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿನ ಭಾಷಾಂತರ ಲೋಪದ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡುವ ಮೂಲಕ ಬೇಸರ ವ್ಯಕ್ತಪಡಿಸಿದ್ದಾರೆ.

ಆಗಸ್ಟ್ ತಿಂಗಳಲ್ಲಿ ಕೆಪಿಎಸ್‌ಸಿ ನಡೆಸಿದ ಕೆಎಎಸ್ ಪರೀಕ್ಷೆಯ ಭಾಷಾಂತರದಲ್ಲಿ ಲೋಪವಾಗಿ ದೊಡ್ಡ ಎಡವಟ್ಟು ಮಾಡಿಕೊಂಡಿದ್ದು ಲಕ್ಷಾಂತರ ಪರೀಕ್ಷಾರ್ಥಿಗಳ ಆಕ್ರೋಶಕ್ಕೆ ಕಾರಣವಾಯಿತು. ಇಷ್ಟು ವಿಳಂಬದ ನಂತರವೂ ಭಾನುವಾರದ ಮರುಪರೀಕ್ಷೆಯಲ್ಲಿ ಭಾಷಾಂತರ ಲೋಪ ಮತ್ತು ಓಎಂಆರ್ ಶೀಟ್ ಸಂಖ್ಯೆಗಳು ಅದಲು–ಬದಲಾಗಿ ಮತ್ತೊಂದು ದೊಡ್ಡ ಅನಾಹುತಕ್ಕೆ ಎಡೆ ಮಾಡಿದೆ.

'ಕನ್ನಡದ ಅಸ್ಮಿತೆ' ಎಂದು ಸ್ವಯಂ ಘೋಷಿತವಾಗಿ ಬಡಾಯಿ ಕೊಚ್ಚಿಕೊಳ್ಳುವ ಕಾಂಗ್ರೆಸ್ ಸರ್ಕಾರ ಇಂದು ಲಕ್ಷಾಂತರ ಪರೀಕ್ಷಾರ್ಥಿಗಳ ಕನಸನ್ನು ನುಚ್ಚುನೂರು ಮಾಡಿದೆ. ಕರ್ನಾಟಕದ ಮಾತೃಭಾಷೆಯಲ್ಲೇ ಸರಿಯಾದ ಪ್ರಶ್ನೆಗಳನ್ನು ನೀಡುವಲ್ಲಿ ಮತ್ತು ಭಾಷಾಂತರಿಸುವುದರಲ್ಲಿ ಎರಡು ಬಾರಿ ವಿಫಲವಾಗಿರುವ ಸರ್ಕಾರ ಇನ್ನೆಷ್ಟು ಬಾರಿ ಉದ್ಯೋಗಾಕಾಂಕ್ಷಿಗಳ ಕನಸನ್ನು ನಾಶ ಮಾಡಲು ಹೊರಟಿದೆಯೋ?. ಇಂತಹ ಗೊಂದಲಗಳೇ ಬೇಜವಾಬ್ದಾರಿತನದ ಆಡಳಿತಕ್ಕೆ ಹಿಡಿದ 'ಕೈ'ಗನ್ನಡಿಯಾಗಿದೆ ಎಂದು ತಿಳಿಸಿದ್ದಾರೆ.

ನಿಮ್ಮ ಭಾವಚಿತ್ರಗಳ ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವ ಮುನ್ನ ಎಚ್ಚರ... ಎಚ್ಚರ...

ಅಪರಾಧ ತಡೆ ಮಾಸಾಚರಣೆ ಕಾರ್ಯಕ್ರಮದಲ್ಲಿ ಡಿಸಿಪಿ ಮುತ್ತುರಾಜ್ ಸಲಹೆ



ನರಸಿಂಹರಾಜ ಉಪವಿಭಾಗದ ವತಿಯಿಂದ ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಬೀದಿ ನಾಟಕದ ಮೂಲಕ ಅಪರಾಧ ತಡೆ ಮತ್ತು ಮಹಿಳಾ ಸುರಕ್ಷತೆ ಬಗ್ಗೆ ಜಾಗೃತಿ ಅಭಿಯಾನದಲ್ಲಿ ಡಿಸಿಪಿ ಮುತ್ತುರಾಜ್ ಸೇರಿದಂತೆ ಇತರರಿದ್ದರು.

ಮೈಸೂರು, ಡಿ.30(ಎಸ್‌ಪಿಎನ್)– ಹೊಸ ವರ್ಷಾಚರಣೆ ಅಥವಾ ಬೇರೆ ಬೇರೆ ಸಂದರ್ಭದಲ್ಲಿ ಪ್ರವಾಸಿ ಸ್ಥಳಗಳಿಗೆ ಕುಟುಂಬ ಸಮೇತ ಹೋಗುವವರು ತಮ್ಮ ಪ್ರವಾಸ ಕುರಿತ ಫೋಟೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವ ಮುನ್ನ ಎಚ್ಚರವಹಿಸಿ ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ಸಲಹೆ ನೀಡಿದರು.

ಮೈಸೂರು ದೇವರಾಜ ಮಾರುಕಟ್ಟೆ ಸಮೀಪದ ಚಿಕ್ಕಗಡಿಯಾರ ಬಳಿ ನರಸಿಂಹರಾಜ ಉಪವಿಭಾಗದ ವತಿಯಿಂದ ಅಪರಾಧ ತಡೆ ಮಾಸಾಚರಣೆ ಅಂಗವಾಗಿ 'ಬೀದಿ ನಾಟಕದ ಮೂಲಕ ಅಪರಾಧ ತಡೆ ಮತ್ತು ಮಹಿಳಾ ಸುರಕ್ಷತೆ ಬಗ್ಗೆ ಜಾಗೃತಿ' ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದರು.

ಪ್ರವಾಸದ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ಪ್ರದರ್ಶನವಾಗುತ್ತಿದ್ದಂತೆ ಇದನ್ನು ಗಮನಿಸುವ ಚಾಲಾಕಿ ಕಳ್ಳರು, ನಿಮ್ಮ ಮನೆಗೆ ನುಗ್ಗಿ ನಗ–ನಾಣ್ಯ ದೋಚುವ ಸಂಭವವಿರುತ್ತದೆ. ಇದರ ಬಗ್ಗೆ ಹೆಚ್ಚು ಗಮನಹರಿಸಬೇಕು. ಅಂತೆಯೇ ಇತ್ತೀಚಿನ ದಿನಗಳಲ್ಲಿ ಅವಿದ್ಯಾವಂತರಿಗಿಂತ ವಿದ್ಯಾವಂತರೇ ಹೆಚ್ಚು ಸೈಬರ್ ವಂಚನೆಗೆ ಒಳಗಾಗುತ್ತಿರುವುದು ಬೇಸರದ ಸಂಗತಿ ಎಂದರು.

ತಂತ್ರಜ್ಞಾನ ಮುಂದುವರೆದಂತೆ, ವಂಚನೆ ವಿಧಾನಗಳು ಬದಲಾಗುತ್ತಿವೆ. ವಿದ್ಯಾವಂತರು ಹೆಚ್ಚಾಗಿ ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡುವುದನ್ನು ಮನಗಂಡಿರುವ ಖದೀಮರು, ನೀವು ಅಪ್‌ಲೋಡ್ ಮಾಡುವ ಭಾವಚಿತ್ರಗಳು ನಿಮ್ಮ ಬ್ಯಾಂಕ್ ಖಾತೆ, ಮನೆಗಳ್ಳತನಕ್ಕೆ ಪ್ರೇರಣೆ ನೀಡುತ್ತವೆ. ಅಲ್ಲದೆ, ಮಹಿಳೆಯರು ಬೆಲೆಬಾಳುವ ಆಭರಣಗಳನ್ನು ಧರಿಸಿ, ಆ ಭಾವಚಿತ್ರ ತೆಗೆದು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಬಾರದು ಎಂದು ಸಲಹೆ ನೀಡಿದರು.

ಆನ್‌ಲೈನ್ ಮೂಲಕ ಷೇರುಪೇಟೆ ವ್ಯವಹಾರಗಳಲ್ಲಿ ನಿವೃತ್ತ ಸರ್ಕಾರಿ ನೌಕರರು, ವೃದ್ಧರು ಟಾರ್ಗೆಟ್ ಆಗುತ್ತಿದ್ದು, ಈ ಕುರಿತು ಹಲವು ಸೈಬರ್ ಪ್ರಕರಣಗಳು ದಾಖಲಾಗುತ್ತಿವೆ. ಇದರಿಂದ ಕೋಟ್ಯಾಂತರ ರೂ ವಂಚನೆ ಆಗುತ್ತಿದೆ. ಈ ಕುರಿತು ಎಚ್ಚರವಹಿಸಿ. ಯಾವುದೇ ಕಾರಣಕ್ಕೂ ಆನ್‌ಲೈನ್ ಷೇರುಪೇಟೆ ವ್ಯವಹಾರಗಳನ್ನು ನಡೆಸದಂತೆ ಮನವಿ ಮಾಡಿದರು.

ಇತ್ತೀಚಿಗೆ ಸಂಚಾರ ನಿಯಮ ಉಲ್ಲಂಘನೆಯಿಂದ ಅಪಘಾತ ಪ್ರಕರಣ ಹೆಚ್ಚಾಗುತ್ತಿವೆ. ಹಾಗಾಗಿ ಅಪ್ರಾಪ್ತರಿಗೆ ಬೈಕ್, ಕಾರು ಚಾಲನೆಗೆ ಅವಕಾಶ ನೀಡುವ ಪೋಷಕರಿಗೆ ದಂಡ ವಿಧಿಸಲಾಗುತ್ತಿದೆ. ಹಾಗಾಗಿ ಅಪ್ರಾಪ್ತ ಮಕ್ಕಳಿಗೆ ವಾಹನ ಚಾಲನೆಗೆ ಅವಕಾಶ ಕೊಡಬಾರದು ಎಂದರಲ್ಲದೆ, ಮಹಿಳೆಯರು ವಾಕಿಂಗ್ ಹೋಗುವಾಗ, ಮದುವೆ ಅಥವಾ ಶುಭ ಸಮಾರಂಭಗಳಿಗೆ ಹೋಗುವಾಗ ಆಭರಣಗಳನ್ನು ಕಾಣುವಂತೆ ಪ್ರದರ್ಶಿಸಬಾರದು. ಇದನ್ನು ಗಮನಿಸುವ ಖದೀಮರು ತಮ್ಮ ಕೈಚಳಕ ತೋರುತ್ತಾರೆ ಎಂದು ಎಚ್ಚರಿಸಿದರು

ತಮ್ಮ ಸುತ್ತಮುತ್ತಲ ಮನೆಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ದೌರ್ಜನ್ಯ ಕಂಡು ಬಂದರೆ, ಮಹಿಳಾ ಸಹಾಯವಾಣಿ 1091, ಮಕ್ಕಳ ಸಹಾಯವಾಣಿ 1098, ಪೊಲೀಸ್ ಕಂಟ್ರೋಲ್ ರೂಂ 100ಕ್ಕೆ ಕರೆ ಮಾಡಿ ಮಾಹಿತಿ ನೀಡಿ, ಅಪರಾಧ ತಡೆಗೆ ಪೊಲೀಸರೊಂದಿಗೆ ಸಹಕರಿಸುವಂತೆ ಡಿಸಿಪಿ ಮುತ್ತುರಾಜ್ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಬೀದಿನಾಟಕದ ಮೂಲಕ ಜಾಗೃತಿ: ನಂತರ ಸೈಬರ್ ವಂಚನೆ, ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಸೇರಿದಂತೆ ಇತರೆ ಅಪರಾಧ ಕೃತ್ಯಗಳ ತಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಿಂಬಿಸುವ ಬೀದಿನಾಟಕವನ್ನು ಮಹಾಬೆಳಕು ತಂಡದ ಕಲಾವಿದರು ಪ್ರದರ್ಶಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಈ ವೇಳೆ ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ, ನರಸಿಂಹರಾಜ ಉಪವಿಭಾಗದ ಎಸಿಪಿ ಅಶ್ವತ್‌ನಾರಾಯಣ್, ಕೃಷ್ಣರಾಜ ಉಪ ವಿಭಾಗದ ಎಸಿಪಿ ರಮೇಶ್, ವಿಜಯನಗರ ಉಪ ವಿಭಾಗದ ಎಸಿಪಿ ಗಜೇಂದ್ರಪ್ರಸಾದ್, ಸಂಚಾರ ವಿಭಾಗದ ಎಸಿಪಿ ಹಾಗೂ ದೇವರಾಜ, ನರಸಿಂಹರಾಜ, ವಿವಿ ಪುರಂ, ಜಯಲಕ್ಷ್ಮೀಪುರಂ, ಮಂಡಿ ಮೊಹಲ್ಲಾ ಠಾಣೆ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಜೈಲರ್ : ಏನಪ್ಪಾ, ನಿನ್ನ ನೋಡ್ಡೋಕೆ ಯಾರೂ ಬರ್ತಾ ಇಲ್ವಲ್ಲಾ ಯಾಕೆ?
ಕೈದಿ : ಹೇಗೆ ಬರ್ತಾರೆ ಸಾರ್, ನನ್ನ ಇಡೀ ಫ್ಯಾಮಿಲಿ ಇಲ್ಲೇ ಇದೆ!

ಮೈಸೂರು ಮಿತ್ರ
ಮಂಗಳವಾರ, 31 ಡಿಸೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ತಿರಸ್ಕಾರಕ್ಕೆ ತಿರಸ್ಕಾರವೇ ಮದ್ದಲ್ಲ ಪ್ರೀತಿಯೇ ದಿವ್ಯೌಷಧ.
–ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಕ್ಕಣ್ಣ ತನಗೆ ಹತ್ತು ಕಣ್ಣು ಅಂತಿದ್ನಂತೆ.

ನಿಮ್ಮ ಪತ್ರಗಳು

ಕೆಆರ್‌ಎಸ್ ರಸ್ತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರು ಸಮಂಜಸವಲ್ಲ

ಮಾನ್ಯರೆ,

ಮೈಸೂರಿನ ಕೆಆರ್‌ಎಸ್ ರಸ್ತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೆಸರು ಇಡುವ ಬಗ್ಗೆ ಚರ್ಚೆಗಳು ನಡೆಯುತ್ತಿದ್ದು, ಇದು ಅಷ್ಟಾಗಿ ಸಮಂಜಸವೆನಿಸಲಾರದು. ಹೇಳಿ–ಕೇಳಿ ಮೈಸೂರು, ರಾಜಪರಂಪರೆಯ ನಗರವಾಗಿದ್ದು ಅಂದಿನ ರಾಜ ವಂಶಸ್ಥರ ದೂರದೃಷ್ಟಿಯ ಪರಿಕಲ್ಪನೆಯಿಂದಾಗಿ ಮೈಸೂರು ಸುಂದರ ನಗರವೆಂಬ ಖ್ಯಾತಿಯನ್ನು ಮುಂದುವರೆಸಿಕೊಂಡು ಬರುತ್ತಿದೆ. ಅಂದಿನ ರಾಜ–ಮಹಾರಾಜರು ಕೈಗೊಂಡ ಹಲವಾರು ಕ್ರಾಂತಿಕಾರಕ ನಿರ್ಧಾರಗಳಿಂದಾಗಿಯೇ ಭಾರತದ ಭೂಪಟದಲ್ಲಿ ಮೈಸೂರು ನಗರಕ್ಕೆ ತನ್ನದೇ ಆದ ವೈಶಿಷ್ಟ್ಯತೆ ಇದ್ದು ಸುರಕ್ಷಿತ–ಸುಂದರ ನಗರವೆಂಬ ಖ್ಯಾತಿಯನ್ನು ಪಡೆದಿದೆ. ಈ ಹಿನ್ನೆಲೆಯಲ್ಲಿ ಮೈಸೂರು ನಗರದ ಯಾವುದೇ ಪ್ರದೇಶ, ಬಡಾವಣೆ, ರಸ್ತೆ ಹಾಗೂ ಕಟ್ಟಡಗಳಿಗೆ ರಾಜವಂಶಸ್ಥರ ಹೆಸರನ್ನೇ ನಾಮಕರಣ ಮಾಡಿದಲ್ಲಿ ಮಾತ್ರ ಯದುಕುಲಕ್ಕೆ ನಾವು ನೀಡುವ ನಿಜವಾದ ಗೌರವವಾಗುತ್ತದೆ. ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಕೆ.ಆರ್.ಎಸ್ ರಸ್ತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೆಸರು ಇಡಬೇಕೆಂದು ಅವರ ಪರ ಬ್ಯಾಟಿಂಗ್ ಬೀಸಿರುವುದು ಅಚ್ಚರಿಯ ಸಂಗತಿಯಾಗಿದೆ. ಈ ಹಿಂದೆ ಪ್ರತಾಪ್ ಸಿಂಹ, ಅನೇಕ ಭಾಷಣಗಳಲ್ಲಿ ಯದುವಂಶಸ್ಥರನ್ನು ಹಾಡಿಹೊಗಳಿದ ನಿದರ್ಶನಗಳಿವೆ. ಸಿದ್ದರಾಮಯ್ಯನವರ ಸಿದ್ಧಾಂತಗಳನ್ನು ಸದಾ ವಿರೋಧಿಸಿಕೊಂಡೇ ಬರುತ್ತಿದ್ದ ಪ್ರತಾಪ್ ಸಿಂಹ ಅವರ ಈ ದಿಢೀರ್ ಹೇಳಿಕೆ ಹಿಂದೆ ಯಾವ ರಹಸ್ಯ ಅಡಗಿದೆ ಎಂಬುದೇ ನಿಗೂಢ ರಹಸ್ಯವಾಗಿದೆ.

ಯಾವುದೇ ರಾಜಕೀಯ ದೊಂಬರಾಟಗಳಿದ್ದರೂ ರಸ್ತೆಗಳಿಗೆ ಹೆಸರಿಡುವ ವಿಚಾರದಲ್ಲಿ ಇದನ್ನು ಥಳುಕು ಹಾಕುವುದು ಸರಿಯಲ್ಲ. ಬಹುತೇಕ ನಾಗರಿಕರ ಒತ್ತಾಸೆಯಂತೆ ಕೆಆರ್‌ಎಸ್ ರಸ್ತೆಗೆ ರಾಜವಂಶಸ್ಥರ ಹೆಸರನ್ನೇ ನಾಮಕರಣ ಮಾಡುವುದು ಸೂಕ್ತವೆನಿಸುತ್ತದೆ. **–ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು.**

ಆಯಿಷ್‌ಗೆ ಮೊಟ್ಟ ಮೊದಲ ರಾಷ್ಟ್ರೀಯ ಪುರಸ್ಕಾರ ಶ್ಲಾಘನೀಯ

ಮಾನ್ಯರೆ,

ಮೈಸೂರಿನಲ್ಲಿರುವ, ಏಷ್ಯಾ ಉಪಖಂಡದಲ್ಲೇ ಒಂದು ವಿಶಿಷ್ಟ ಸಂಸ್ಥೆಯಾದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಸ್ಥಾಪನೆಯಾದ 59 ವರ್ಷಗಳ ನಂತರ ಮೊಟ್ಟ ಮೊದಲ ಬಾರಿಗೆ ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆಯಾಗಿರುವುದು ಶ್ಲಾಘನೀಯ. ಸಮಾಜದ ನಾನಾ ಕ್ಷೇತ್ರಗಳಲ್ಲಿ ವಿಶೇಷಚೇತನರ ಕಲ್ಯಾಣಕ್ಕಾಗಿ ಜೋಜನೆ ರೂಪಿಸಿ ಅವುಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ನೀಡುವ ಪ್ರಶಸ್ತಿ ಇದಾಗಿದ್ದು, ಈ ವರ್ಷ ಪ್ರಶಸ್ತಿ ಪಡೆದ 33 ವ್ಯಕ್ತಿ ಹಾಗೂ ಸಂಸ್ಥೆಗಳಲ್ಲಿ ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯೂ ಒಂದಾಗಿದ್ದು, ಸಂಸ್ಥೆಯು ಅಭಿವೃದ್ಧಿಯತ್ತ ಸಾಗಲು ಅವಿರತವಾಗಿ ಶ್ರಮಿಸಿ ಪುರಸ್ಕಾರ ಪಡೆಯಲು ಕಾರಣಕರ್ತರಾದ ಎಲ್ಲರೂ ಅಭಿನಂದನಾರ್ಹರು.

ರಾಜ್ಯ ಸರ್ಕಾರ ವರುಣ ಸಮೀಪ 10 ಎಕರೆ ಜಮೀನನ್ನು ಆಯಿಷ್ ಸಂಸ್ಥೆಗೆ ನೀಡಿದ್ದು, ಆ ಸ್ಥಳದಲ್ಲಿ ಹೊರಗಿನಿಂದ ಚಿಕಿತ್ಸೆಗಾಗಿ ಬರುವ ಹಾಗೂ ಅವರ ಜೊತೆಗೆ ಬರುವವರಿಗೆ ಉಳಿದುಕೊಳ್ಳಲು ಅನುವು ಮಾಡಿಕೊಟ್ಟು, ಉನ್ನತ ಚಿಕಿತ್ಸೆಗಳಿಗಾಗಿ ಇಲ್ಲಿ ವ್ಯವಸ್ಥೆ ಮಾಡಬೇಕು ಎನ್ನುವ ಆಲೋಚನೆ ಇದ್ದು, ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಚರ್ಚಿಸಿ ಒಪ್ಪಿಗೆ ಪಡೆದು ನಂತರ ಡಿಪಿಆರ್ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಆಲೋಚಿಸುತ್ತಿದ್ದೇವೆ ಎಂದು ಸಂಸ್ಥೆಯ ನಿರ್ದೇಶಕಿಯಾದ ಪ್ರೊ.ಎಂ.ಪುಷ್ಪವತಿ ಅವರ ಹೇಳಿಕೆ ಪ್ರತಿಯೊಬ್ಬರೂ ಮೆಚ್ಚುವಂತದ್ದು. **–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**

ದಿವಾಳಿಯಾಗಿರುವ ಸಿದ್ದರಾಮಯ್ಯನವರ ಸರ್ಕಾರ

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಆರ್ಥಿಕ ದಿವಾಳಿಯತ್ತ ಸಾಗಿದೆ ಎಂದು ದೃಶ್ಯ ಹಾಗೂ ಪತ್ರಿಕಾ ಮಾಧ್ಯಮಗಳಲ್ಲಿ ಪ್ರಕಟವಾಗಿರುವುದು ಸರಿಯಷ್ಟೆ. ಈ ಆರ್ಥಿಕ ಅವ್ಯವಸ್ಥೆಯಿಂದ ಉಂಟಾಗಿರುವ ಆರ್ಥಿಕ ನಷ್ಟವನ್ನು ಸರಿದೂಗಿಸಿಕೊಳ್ಳಲು ಅವರ ಸರ್ಕಾರ ಎಲ್‌ಪಿಜಿ ದರವನ್ನು ಹೆಚ್ಚಿಸುವುದಾಗಿ ಹೇಳಿದೆ. ಇದಲ್ಲದೆ ಕಾರುಗಳ ಬೆಲೆಯನ್ನೂ ಹೆಚ್ಚಿಸುವುದಾಗಿ ಹೇಳಿದೆ. ಇದೂ ಸಾಲ ದೆಂಬಂತೆ ನಿಷ್ಕ್ರಿಯ ಬ್ಯಾಂಕ್ ಖಾತೆಗಳನ್ನು ಬಂದ್ ಮಾಡಲು, ಬ್ಯಾಂಕ್ ಆಡಳಿತ ಮಂಡಳಿಗಳಿಗೆ ಸೂಚಿಸಿದೆ. ಈ ಚಮತ್ಕಾರದಿಂದ ಕೋಟ್ಯಾಂತರ ರೂಪಾಯಿಗಳು ಬಡವರ ಖಾತೆಯಿಂದ ಹಿಂಬಾಗಿಲ ಮೂಲಕ ಸರ್ಕಾರದ ಖಾತೆಗೆ ಜಮಾ ಆಗುವುದು. ನಿಷ್ಕ್ರಿಯ ಬ್ಯಾಂಕ್ ಖಾತೆಗಳನ್ನು ರದ್ದು ಮಾಡಿ ಆ ಹಣವನ್ನು ಒಂದು ಕಡೆ ಜಮಾ ಮಾಡಿ ಆ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಒಂದು ಬೇರೆ ವಿಶೇಷ ಖಾತೆಯಲ್ಲಿ ಜಮಾ ಮಾಡಿ ಶೇಖರಿಸುವುದು ಭಾರತೀಯ ರಿಸರ್ವ್ ಬ್ಯಾಂಕಿನ ಕೆಲಸ. ಆದರೆ ಇಷ್ಟಕ್ಕೇ ಮುಗಿಯಲಿಲ್ಲ. ಬ್ಯಾಂಕ್ ಗ್ರಾಹಕರು ಆ ಹಣವನ್ನು ಮರು ಪಾವತಿಸುವಂತೆ ಅರ್ಜಿಯನ್ನು ಕೊಟ್ಟಾಗ ಆ ಹಣವನ್ನು ಬಡ್ಡಿ ಸಮೇತ ಹಿಂದಿರುಗಿಸಬೇಕಾಗಿದೆ. ನಿಷ್ಕ್ರಿಯ ಖಾತೆಯನ್ನು ಪುನಃ ಪುನರುಜ್ಜೀವನಗೊಳಿಸಬೇಕು. ಹೀಗೆ ಮಾಡದೇ ಇದ್ದಲ್ಲಿ ಅದು ಕಾನೂನಿನ ಪ್ರಕಾರ ತಪ್ಪಾಗುವುದು. ಆದುದರಿಂದ ಮುಖ್ಯಮಂತ್ರಿಗಳಿಗೆ ಬ್ಯಾಂಕ್ ಕಾನೂನುಗಳ ಪರಿಚಯವಿಲ್ಲದಿದ್ದಲ್ಲಿ ಆರ್ಥಿಕ ತಜ್ಞರ ಅಭಿಪ್ರಾಯವನ್ನು ಪಡೆದು ಮುಂದುವರಿಯುವುದು ಅವಶ್ಯಕ. ತಮ್ಮ ಸರ್ಕಾರದ ಆರ್ಥಿಕ ಕೊರತೆಯನ್ನು ಬೇರೆ ಬೇರೆ ವಿಧಗಳಲ್ಲಿ ತುಂಬಿಸಿಕೊಳ್ಳಬೇಕು. ಹೆಂಗಳೆಯರ ಮತಗಳನ್ನು ಪಡೆಯಲೂ, ಚೀಪ್ ಪಾಪ್ಯುಲಾರಿಟಿ ದೃಷ್ಟಿಯಿಂದ ಸರ್ಕಾರ ಶಕ್ತಿ ರೂಪದಲ್ಲಿ ಕೊಡಲಾಗುತ್ತಿರುವ ಪುಕ್ಕಟೆ ಬಸ್ ಪ್ರಯಾಣದ ಸೌಲಭ್ಯವನ್ನು ಹಿಂಪಡೆದರೂ ಪರವಾಗಿಲ್ಲ. ತಮ್ಮ ರಾಜ್ಯದ ಆರ್ಥಿಕ ಕೊರತೆಯನ್ನು ನಿವಾರಿಸಿಕೊಳ್ಳಲು ಬೇರೆ ಬೇರೆ ವಿಧಗಳಲ್ಲಿ ತೆರಿಗೆ ವಸೂಲಿ ಮಾಡಿ ರಾಜ್ಯದ ಖಜಾನೆಯನ್ನು ಭರ್ತಿ ಮಾಡುವುದರತ್ತ ಗಮನ ನೀಡಲಿ. **–ಬೇಲೂರು ದ.ಶಂ. ಪ್ರಕಾಶ್, ಮೈಸೂರು**

ನಿವೃತ್ತ ಹಿರಿಯ ಅಧಿಕಾರಿಗಳು ಸಂಘದ ಸದಸ್ಯರಾಗಿರಲಿಲ್ಲ

ಮಾನ್ಯರೆ,

'ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ'ಯ ಸದಸ್ಯರಾಗಲು ಕಳೆದ ಡಿಸೆಂಬರ್‌ನಲ್ಲಿ ನಿವೃತ್ತ ಹಿರಿಯ ಅಧಿಕಾರಿಗಳು ಬಂದಿದ್ದರು. ಆದರೆ, ಅವರಿಗೆ ಸಂಸ್ಥೆಯಿಂದ ಈವರೆಗೂ ಸದಸ್ಯತ್ವ ನೀಡಿರಲಿಲ್ಲ. ಹೀಗಾಗಿ ಅವರು ಯಾವ ಸಮಯದಲ್ಲೂ ಸಂಸ್ಥೆಯ ಸದಸ್ಯರಾಗಿರಲಿಲ್ಲ. ಇದಕ್ಕೆ ಮೈಸೂರು ಜಿಲ್ಲೆಯ ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕ ಆದೇಶವೇ ಸಾಕ್ಷಿ. **–ಎಸ್.ಪ್ರಕಾಶ್‌ಬಾಬು, ಕಾರ್ಯಕಾರಿ ಸಮಿತಿ ಸದಸ್ಯ, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಮೈಸೂರು**



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಗೆಲುವೆಂಬ ಮಾಯಾಬಜಾರು

ತೀಕ್ಷ್ಣವಾದ ಕಣ್ಣುಗಳಿಗೆ ಶೋಕ ಮತ್ತು ಶ್ಲೋಕ ಎರಡರ ಚಿತ್ರಣವೂ ದಕ್ಕಿ ಬಿಡುತ್ತದೆ. ಹಾಗೆ ದಕ್ಕಿದ ಕಾರಣದಿಂದಲೇ ಶೋಕಸಾಗರ ರಾಮಾಯಣದ ಕತೆಯನ್ನ ಕವಿ ವಾಲ್ಮೀಕಿ, ಜಗದ್ವಿಖ್ಯಾತಗೊಳಿಸುವ ದೃಷ್ಟಿಪಥದಲ್ಲಿ ಕೈಹಿಡಿದು ನಡೆಸಲು ಸಾಧ್ಯವಾಯಿತು. ಯಾವತ್ತೂ ನಾವು ನಮ್ಮ ಪಾಂಡಿತ್ಯ ತೋರಿಸಿ ಎದುರಿಗಿದ್ದವರಿಗೆ ಪಾಠ ಹೇಳಲು ಶುರು ಮಾಡಬಾರದು. ಮೊದಲು ನಮಗೆ ನಾವು ಸಂದರ್ಭೋಚಿತ ಸಂಗತಿಗಳನ್ನ ಮನಸ್ಸೋಯಿಚ್ಛೆ ಅನುಭವಿಸಬೇಕು. ನಮ್ಮ ಆತ್ಮಾನಂದದ ಅನುಭೂತಿಗಳು ಅಂಗೈಯಲ್ಲಿ ಆಕಾಶ ಚಿತ್ರಿಸುವಷ್ಟು ಹೃದಯಸ್ಪರ್ಶಿ ಭಾವಸಂವೇದನೆಯಿಂದ ಕೂಡಿರಬೇಕು. ಆಗ ನೋಡಿ ಅಲ್ಲೊಂದು ಜೀವಂತಿಕೆ ಸೃಷ್ಟಿಯಾಗುತ್ತದೆ.

ಒಬ್ಬ ಚಿತ್ರಕಲಾ ಶಿಕ್ಷಕ ಒಂದು ಶಾಲೆಯಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ಅವರ ತರಗತಿಯ ಕೊಠಡಿಯ ಕಿಟಕಿಯೆಡಗೆ ಕೈ ತೋರಿಸಿ ಅದರ ಚಿತ್ರ ಬರೆಯಿರಿ ಎಂದರು. ಕೂಡಲೇ ಆ ಇಬ್ಬರು ಹುಡುಗರು ಶಿಕ್ಷಕರು ಹೇಳಿದ ಕಿಟಕಿಯ ಚಿತ್ರ ಬರೆದುಕೊಂಡು ತಮ್ಮ ತಮ್ಮ ಚಿತ್ರದೊಂದಿಗೆ ಶಿಕ್ಷಕರ ಬಳಿ ಬಂದರು. ಶಿಕ್ಷಕ ಎರಡು ಚಿತ್ರಗಳನ್ನು ಗಮನಿಸಿದ. ಅವರಿಬ್ಬರಲ್ಲಿ ಒಬ್ಬ ವಿದ್ಯಾರ್ಥಿ ತುಂಬಾ ಬುದ್ಧಿವಂತ. ತರಗತಿಯಲ್ಲಿ ಆತ ಎಲ್ಲಾ ವಿಷಯಗಳಲ್ಲೂ ಪ್ರಥಮ ಸ್ಥಾನದಲ್ಲಿದ್ದ. ಅವನು ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಕರಾರುವಾಕ್ಕಾಗಿ ಬರೆದು ಸೈ ಎನ್ನಿಸಿಕೊಂಡ ಧೀರ. ಅವನು ಬರೆದ ಚಿತ್ರವನ್ನೇ ಶಿಕ್ಷಕ ಮೊದಲು ಗಮನಿಸಿದ. ಆ ಬುದ್ಧಿವಂತ ಹುಡುಗ ಕಿಟಕಿ, ಕಿಟಕಿಯ ಬಣ್ಣವನ್ನೇ ಹೋಲುವ ಸ್ಕೆಚ್ ಪೆನ್ನಿನಿಂದ ತುಂಬಿದ ಬಣ್ಣ, ಕರಾರುವಾಕ್ಕಾದ ಸರಳುಗಳ ಸಂಖ್ಯೆ, ಅದರ ಸರಿಯಾದ ವಿಸ್ತೀರ್ಣ, ಕಿಟಕಿಯ ಚೌಕಟ್ಟಿನ ಸುತ್ತಳತೆ, ಒಟ್ಟಾರೆ ಎಂಜಿನಿಯರಿಂಗ್ ಪ್ರಾಕ್ಟಿಕಾಲಿಟಿಯನ್ನೇ ಬಟ್ಟಿಯಿಳಿಸಿ ಮನೆ ಕಟ್ಟಲು ಬೇಕಾಗುವ ಕ್ಯಾಡ್ ಮಾದರಿಯ ಎಲ್ಲಾ ಲಕ್ಷಣಗಳನ್ನು ಹೋಲಬಲ್ಲ Professional architechtural ಥರ ಮ್ಯಾಥಮೆಟಿಕಲ್ ಆಗಿ ಕಿಟಕಿ–ಎಂಬ ಶೀರ್ಷಿಕೆ ಕೊಟ್ಟು ಚಿತ್ರ ಬರೆದಿದ್ದ.

ಎರಡನೆಯ ವಿದ್ಯಾರ್ಥಿ ಇವನಷ್ಟು ಬುದ್ಧಿವಂತ ಅಲ್ಲ. ಆತ ತರಗತಿಯಲ್ಲಿ ಕೊನೆ ಬೆಂಚಿನ ವಿದ್ಯಾರ್ಥಿ. ಆತನಿಗೆ ಅಂಕಪಟ್ಟಿಗಿಂತ ಕಿಟಕಿಯಾಚೆ ನಡೆಯುವ ಕಬಡ್ಡಿ ಪಂದ್ಯಾವಳಿಯ ಕಡೆಗೆ ನೋಡುವ ಪರಿಪಾಠ. ಅಂದರೆ ಶಿಕ್ಷಕರ ಪಾಠ ಅವನ ಕಿವಿಯ ಪಾಲು, ಕಬಡ್ಡಿಯಡೆಗಿನ ಅವನ ನೋಟ ಮನದ ಪಾಲು. ಅಂದರೆ ಕಿಟಕಿಯಾಚೆಗೆ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಆತನಿಗೆ ಕುತೂಹಲ. ಆತ ಬರೆದು ತಂದ ಚಿತ್ರವನ್ನು ಶಿಕ್ಷಕ ಕನ್ನಡಕ ಸರಿ ಮಾಡಿಕೊಂಡು ದೃಷ್ಟಿಯಿಟ್ಟು ನೋಡಿದ. ಆತ ಬರೆದ ಚಿತ್ರ ನೋಡಿದ ಕೂಡಲೇ ಮನದೊಳಗೇ ಮುಗುಳ್ನಕ್ಕ ದೇವರು ಸಾಮಾನ್ಯ ವಿದ್ಯಾರ್ಥಿಗಳ ದೃಷ್ಟಿಗೆ ತೀಕ್ಷ್ಣತೆ, ಸಂವೇದನಾಶೀಲತೆಯನ್ನ ಹೇಗೆ ತುಂಬಿರುತ್ತಾನೆ ಅಂತ ಆತನಿಗೆ ಸೋಜಿಗವೆನಿಸಿತು. ಕಾರಣ ಇಷ್ಟೆ, ಆತ ಬರೆದ ಚಿತ್ರದಲ್ಲಿ ಕಿಟಕಿಯಿತ್ತು, ಕಿಟಕಿಯ ಸರಳುಗಳಿದ್ದವು. ಆದರೆ ಸರಳುಗಳು ಲೆಕ್ಕ ತಪ್ಪಿದ್ದವು ಬಣ್ಣಮಾಸಿತ್ತು ಕಿಟಕಿಗಿಂತ ಕಿಟಕಿಯಾಚೆಗಿದ್ದ ದೂರದಬೆಟ್ಟ, ಬೆಟ್ಟದ ಅಂಚಿನಲ್ಲೇ ಮುಳುಗುತ್ತಿದ್ದ ಸಂಜೆ ಸೂರ್ಯ, ಬಾಲ ಮೇಲೆತ್ತಿಕೊಂಡು ದೂಳೆಬ್ಬಿಸಿ ತಮ್ಮ ಗೊಂತಿನ ಕಡೆಗೆ ಓಡುತ್ತಿದ್ದ ಗೋಧೂಳಿ, ಹೂವಿನ ಮಕರಂದ ಹೀರಿ ಸೊಂಪಾಗಿ ಹೂವಿನಪಕಳೆಯಿಂದ ಆಗತಾನೇ ಮೇಲೆದ್ದ ಜೇನ್ನೊಣ, ಅಪ್ಪನ ಹಿಂದೆ ಮೇಕೆ ಮರಿಯನ್ನು ಹೆಗಲಿಗೇರಿಸಿಕೊಂಡು ಹೊರಟ ಹಳ್ಳಿಹೈದ, ಬೆಟ್ಟಕ್ಕೆ ದನ ಮೇಯಿಸಲು ಹೋದ ಮನೆಯ ಗಂಡಸರು, ವಾಪಸ್ಸು ಬರುವ ಕಡೆ ಹಣೆಯ ಮೇಲೆ ಕೈಯಿಟ್ಟು ಬೆಟ್ಟದ ಕಡೆಗೆ ದೃಷ್ಟಿನೆಟ್ಟ ಮುಸ್ಸಂಜೆಯ ಮುತ್ತೈದೆಯರು–ಹೀಗೆ ಕಿಟಕಿಗಿಂತ ಕಿಟಕಿಯಾಚೆಗಿನ ನಿಸರ್ಗದ ವೈವಿಧ್ಯಗಳೇ ಆ ಹುಡುಗನ ಚಿತ್ರದ ತುಂಬೆಲ್ಲಾ ಮಾರ್ದನಿಸುತ್ತಿತ್ತು. ಶಿಕ್ಷಕ ಆ ಇಬ್ಬರೂ ವಿದ್ಯಾರ್ಥಿಗಳಿಗೆ ಕೊಟ್ಟ ಟಾಸ್ಕ್ ಒಂದೆ, ಕಿಟಕಿ ತೋರಿಸಿ ಚಿತ್ರಬರೆಯಲು ಹೇಳಿದ್ದು, ಅದರಲ್ಲಿ ವ್ಯಕ್ತವಾಗಿದ್ದು ಮಾತ್ರ ಒಬ್ಬ ಅಂತರ್ಮುಖಿ, ಮತ್ತೊಬ್ಬ ಬಹಿರ್ಮುಖಿ. ಒಬ್ಬನದು 'Answer to the point'. ಮತ್ತೊಬ್ಬನದು ಕಿಟಕಿ, ಸರಳು, ವಿಸ್ತಾರ, ವಿನ್ಯಾಸ ಹೀಗೆ ಶಿಕ್ಷಕ ಕೇಳಿದ ಕಿಟಕಿಯನ್ನೂ ಬರೆದ, ಜೊತೆಗೆ ತಾನು ಕಂಡ ನಿಸರ್ಗದ ಜಗತ್ತನ್ನೂ ಬರೆದ ಅಂದರೆ ಅವನ ತೀಕ್ಷ್ಣವಾದ ಕಣ್ಣಿಗೆ ಬುದ್ಧಿವಂತಿಕೆಯಿರಲಿಲ್ಲ, ಅರ್ಥವಂತಿಕೆ ಇತ್ತು. ನಿಸರ್ಗದ ಸಹಜ ಸೌಂದರ್ಯದ ನಿಜವಾದ ಸೃಷ್ಟಿ ವೈವಿಧ್ಯವಿತ್ತು. ಅಂಕಗಳಿಕೆಯ ಲೆಕ್ಕಾಚಾರಕ್ಕಿಂತ, ಹೃದಯ ಸಂವೇದನೆಯ ಸಾಕ್ಷಾತ್ಕಾರವಿತ್ತು. ಅದು ಕವಿ ಹೃದಯ! ಕವಿತೆ ಅದರ ಆಲಯ. ಕನ್ನಡಕ್ಕೆ ಜ್ಞಾನಪೀಠ ತಂದು ಕೊಟ್ಟ ಮೊದಲ ಮಹನೀಯರಾದ ಡಾ.ಕೆ.ವಿ.ಪುಟ್ಟಪ್ಪನವರ ಕನ್ನಡ ಎಂ.ಎ ಯ ಮೊದಲ ಬ್ಯಾಚಿನಲ್ಲಿ ಮೊದಲ ಶ್ರೇಣಿ ಪಡೆದ ಬುದ್ಧಿವಂತ ವಿದ್ಯಾರ್ಥಿಯಾರು ಅಂತ ನಮಗೆ ಗೊತ್ತಿಲ್ಲ. ಅದರೆ ಕರುನಾಡ ಆತ್ಮಚರಿತ್ರೆಯಲ್ಲಿ ತಮ್ಮ ಆಟೋಬಯಾಗ್ರಫಿಯನ್ನು ಬಿಟ್ಟುಹೋದ ರಾಷ್ಟ್ರಕವಿ ಕುವೆಂಪು ಕರುನಾಡಿಗೆ ಗೊತ್ತು. ಹಾಗಂತ ಸೃಷ್ಟಿಯ ವೈವಿಧ್ಯತೆಯಲ್ಲಿ ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ, ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ ಎಂಬ ಮಾತನ್ನ ಸ್ವತಃ ಕುವೆಂಪು ಅವರೇ ತಮ್ಮ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಆರಂಭದಲ್ಲೇ ಹೇಳಿಕೊಳ್ಳುತ್ತಾರೆ.

> ಜಗತ್ತು ನನ್ನನ್ನು ಗುರುತಿಸಬೇಕು, ಗೌರವಿಸಬೇಕು ಎಂಬ ನಿರೀಕ್ಷೆಯಲ್ಲೆ ಕೊರಗದಿರು, ಹೆತ್ತವರಿಗಷ್ಟೇ ನೀನು ಮಗು, ಈ ಜಗತ್ತಿಗೆ ನೀನು ಸ್ಪರ್ಧಿ, ಈ ಸ್ಪರ್ಧಾತ್ಮಕ ಯುಗದಲ್ಲಿ ಗೆಲುವು ಸಾಧಿಸಿದವನನ್ನು ಮಾತ್ರ ಜಗತ್ತು ಗೌರವಿಸುತ್ತದೆ. ಅದೇ ಜಗದ ನಿಯಮ! ಇಲ್ಲಿ ಗೆಲುವೇ ಮಾನದಂಡ. ಅದಕ್ಕಾಗಿ ನಮ್ಮ ಗುಣ ನಮ್ಮ ಶಕ್ತಿ, ನಮ್ಮ ದೃಷ್ಟಿಪಥವನ್ನು ನಾವು ಒಂದೋ ವಿಸ್ತರಿಸಿಕೊಳ್ಳಬೇಕು ಇಲ್ಲವೇ ಬದಲಿಸಿಕೊಳ್ಳಬೇಕು.

ಸೃಷ್ಟಿ ಸೌಂದರ್ಯದ ಸ್ನಿಗ್ಧ ಸ್ವರೂಪಕ್ಕೆ ಮಾರುಹೋದ ರಾಷ್ಟ್ರಕವಿ ಕನ್ನಡದ ವರ್ಡ್ಸ್‌ವರ್ತ್ ಎನ್ನಿಸಿಕೊಂಡು ಪ್ರಕೃತಿ ಕವಿಯೇ ಆಗಿ ಹೋದರು, ಜೀವ ವಿಜ್ಞಾನದ ಅಕ್ಯೂರೆಸಿಯ ಜಾಡು ಹಿಡಿದು ಹೊರಟು ಪರಿಸರದ ಕತೆಗಳು ಎಂದು ಟೈಟಲ್ ಕೊಟ್ಟು ಬರೆದ ತೇಜಸ್ವಿಯವರು ನಿಸರ್ಗ ಆರಾಧನೆಗಿಂತ ಆಲೋಚನೆಯೆಡೆಗೆ ಚಿತ್ರ ಬಿಡಿಸಿದಂತೆ ಬರೆದರು. ಒಂದು ದೃಷ್ಟಿಯಂತೆ ಸೃಷ್ಟಿ ಎಂಬುದು ಕವಿವಾಣಿ. ಇಲ್ಲಿ ಚಿತ್ರ ಬರೆದ ಇಬ್ಬರು ಮಕ್ಕಳು ಪ್ರತಿಭಾವಂತರೆ. ಇಲ್ಲಿ ಒಂದು ಚಿತ್ರ ಕ್ರಿಯೇಟಿವಿಟಿ, ಮತ್ತೊಂದು ಆಕ್ಟಿವಿಟಿ, ಇಬ್ಬರು ಈ ಸಮಾಜದ ಕಣ್ಣುಗಳೆ, ಅವರಿಬ್ಬರ ದೃಷ್ಟಿ ವೈವಿಧ್ಯವೇ ಸೊಗಸು ಭಾರತೀಯ ಕಾವ್ಯ ಮೀಮಾಂಸೆ ಇಂಥವರನ್ನು ನೋಡಿಯೇ ಪಾರಮಾರ್ಥಿಕ ಪ್ರತಿಭೆ, ನಿರುಪಾಧಿಕ ಪ್ರತಿಭೆ ಎಂದು ಗುರುತಿಸುವುದು.

ಒಮ್ಮೆ ಹೀಗೆ ಭಾರತದ ಖ್ಯಾತ ಉದ್ಯಮಿ ಇತ್ತೀಚೆಗೆ ಅಸ್ತಂಗತರಾದ ರತನ್ ಟಾಟಾ ಮತ್ತು ಒಬ್ಬ ವೈದ್ಯ ಹಾಗೂ ಸಾಫ್ಟ್‌ವೇರ್ ಎಂಜಿನಿಯರ್ ಮಾತಾಡುತ್ತಾ ಕುಳಿತ್ತಿದ್ದಾಗ ಬೆಂಜ್ ಎಂಬ ಪ್ರತಿಷ್ಠಿತ ಕಾರು ಖರೀದಿಯ ಬಗ್ಗೆ ಒಬ್ಬರು ಪ್ರಶ್ನೆ ಕೇಳಿದರಂತೆ, ಅವರ ಪ್ರಶ್ನೆ ಮೊದಲು ಸಾಫ್ಟ್‌ವೇರ್ ಎಂಜಿನಿಯರ್‌ಗೆ! ಬೆಂಜ್ ಕೊಳ್ಳಲು ನಿಮಗೆ ಎಷ್ಟು ಸಮಯ ಬೇಕಾಗಬಹುದು? ಕೂಡಲೇ ಅವರು ತಮ್ಮ ಸಂಬಳ ಸಾರಿಗೆ ಆದಾಯದ ಮಿತಿ ಲೆಕ್ಕ ಹಾಕಿಕೊಂಡು ಒಂದಾರು ತಿಂಗಳು ಬೇಕಾದೀತು ಎಂದರು. ಪಕ್ಕದಲ್ಲೇ ಇದ್ದ ವೈದ್ಯರು ಅದೇ ಪ್ರಶ್ನೆ ಹಾಕಿದ ಗೆಳೆಯನಿಗೆ ನನಗೆ ಮೂರು ತಿಂಗಳು ಸಾಕು ಎಂದರು, ಇನ್ನು ಕೊನೆಯವರ ಸರದಿ ರತನ್ ಟಾಟಾ ಅವರದ್ದು. ಟಾಟಾ ಹೇಳಿದ ಮಾತಿಗೆ ವೈದ್ಯರು ಮತ್ತು ಎಂಜಿನಿಯರ್ ಇಬ್ಬರು ಸುಸ್ತಾಗಿ ಹೋದರು, ಕಾರಣ ಇಷ್ಟೆ, ಟಾಟಾ ಹೇಳಿದ್ದೇನು ಗೊತ್ತ? ಬೆಂಜ್ ಕೊಳ್ಳಲು ನನಗೆ ಕನಿಷ್ಠ ಐದರಿಂದ ಆರು ವರ್ಷಗಳು ಬೇಕಾಗಬಹುದು. ಏಕೆಂದರೆ ಅದು ಬಹುದೊಡ್ಡ ಪ್ರತಿಷ್ಠಿತ ಕಾರು ತಯಾರಿಕಾ ಸಂಸ್ಥೆ ಅಲ್ಲವೆ? ಎಂದರು.

ಅಂದರೆ ನೀವು ಗಮನಿಸಿ, ಬೆಂಜ್ ಕೊಳ್ಳಲು ನಿಮಗೆ ಎಷ್ಟು ಸಮಯ ಬೇಕು ಎಂಬ ಪ್ರಶ್ನೆ ಸರಳ ಮತ್ತು ನಿಖರ, ಆದರೆ ತೀಕ್ಷ್ಣಮತಿಯಾದ ರತನ್ ಟಾಟಾಗೆ ಮಾತ್ರ ಐದರಿಂದ ಆರು ವರ್ಷಗಳು ಯಾಕೆ ಬೇಕಾಯಿತು? ವೈದ್ಯರು ಮತ್ತು ಎಂಜಿನಿಯರ್‌ಗೆ ಆರು ತಿಂಗಳು ಮತ್ತು ಮೂರು ತಿಂಗಳು ಮಾತ್ರ ಏಕೆ ಸಾಕಾಯಿತು? ಎಂದರೆ ವೈದ್ಯರು ಮತ್ತು ಎಂಜಿನಿಯರ್ ಇಬ್ಬರ ದೃಷ್ಟಿಯಲ್ಲಿ ಬೆಂಜ್ ಎಂದರೆ ತಮ್ಮ ಸ್ವಂತಕ್ಕೆ ಒಂದು ಕಾರು ಕೊಳ್ಳುವ 'Micro'–ದೃಷ್ಟಿಕೋನ ರತನ್ ಟಾಟಾಗೆ ಆ ಕಂಪನಿಯನ್ನೇ ಕೊಂಡುಕೊಳ್ಳುವ 'Macro' ಜಾಯಮಾನ! ಹೇಗಿದೆ ನೋಡಿ ದೃಷ್ಟಿಯಂತೆ ಸೃಷ್ಟಿ ಅದಕ್ಕೆ ನೋಡುವ ಕಣ್ಣಿಗೆ ತೀಕ್ಷ್ಣತೆಯಿದ್ದರೆ ಶೋಕವೂ ಶ್ಲೋಕವಾಗುತ್ತದೆ. ಅಲ್ಲಿ ಜಗದ್ವಿಖ್ಯಾತ ರಾಮಾಯಣ ಸೃಷ್ಟಿಯಾಗುತ್ತದೆ. ಅಲ್ಲಿ ವಾಲ್ಮೀಕಿ ಹುಟ್ಟುತ್ತಾರೆ ಕಣ್ಣು ಚಿಕ್ಕದಾದರೂ ಕನಸುಗಳು ದೊಡ್ಡದಿರಬೇಕು.

ನಾವೆಲ್ಲಾ ಒಂದಲ್ಲಾ ಒಂದು ರೀತಿಯಲ್ಲಿ ಸೋಲಿನ ಸರತಿಯಲ್ಲಿ ಗಲ್ಲಿ ಸುತ್ತಿದವರು, ಗೆಲುವೆಂಬ ಮಹಾಮಂತ್ರದ ಪಠನಕ್ಕೆ ನಮ್ಮ ದೃಷ್ಟಿಗೊಂದು ಮ್ಯಾಕ್ರೋ–ಸೈರನ್ ಕಟ್ಟಬೇಕು ಆಗಷ್ಟೇ ನಮ್ಮ ಸೃಷ್ಟಿ ತನ್ನ ದೃಷ್ಟಿಯ ಪಥ ಬದಲಿಸುತ್ತದೆ. ನಮ್ಮ ಪಾಲಿಗೆ ಯಶಸ್ವಿಗಳನ್ನು ಕಂಡು ಹಲ್ಲಿ ಲೊಚಗುಟ್ಟಿದಂತೆ ಚ್ಚ್ ಎನ್ನುವುದನ್ನು ನಿಲ್ಲಿಸುತ್ತೇವೆ. ನಮ್ಮ ಸ್ಪರ್ಧೆ, ನಮ್ಮ ಜಾಣ್ಮೆಗಳಿಗೆ ಹೊಸತನದ ಪೂರ್ಣ ದೃಷ್ಟಿ, ತೀಕ್ಷ್ಣ ನೋಟದ ಪರಾಕಾಷ್ಠೆ ಕಲಿಸಬೇಕು. ಡಿ.ವಿ.ಜಿಯವರ ಮಂಕುತಿಮ್ಮನ ಕಗ್ಗದ 649ನೇ ಕಗ್ಗದಲ್ಲಿ ವ್ಯಾಖ್ಯಾನಿಸಿದಂತೆ


ಜಗವೆನ್ನ ಮುದ್ದಿಸದದೇಕೆಂದು ಕೊರಗದಿರು।
ಮಗುವು ನೀಂ ಪೆತ್ತರ್ಗ ಲೋಕಕೆ ಸ್ಪರ್ಧಿ॥
ಹೆಗಲಹೊರೆ ಹುಟ್ಟಿದರ್ಗೆಲ್ಲಮಿರುತಿರೆ ನಿನ್ನ।
ರಗಳೆಗಾರಿಗೆ ಬಿಡುವೋ? ಮಂಕುತಿಮ್ಮ॥

ಅಂದರೆ ಜಗತ್ತು ನನ್ನನು ಗುರುತಿಸಬೇಕು, ಗೌರವಿಸಬೇಕು ಎಂಬ ನಿರೀಕ್ಷೆಯಲ್ಲೆ ಕೊರಗದಿರು, ಹೆತ್ತವರಿಗಷ್ಟೇ ನೀನು ಮಗು, ಈ ಜಗತ್ತಿಗೆ ನೀನು ಸ್ಪರ್ಧಿ, ಈ ಸ್ಪರ್ಧಾತ್ಮಕ ಯುಗದಲ್ಲಿ ಗೆಲುವು ಸಾಧಿಸಿದವನನ್ನು ಮಾತ್ರ ಜಗತ್ತು ಗೌರವಿಸುತ್ತದೆ. ಅದೇ ಜಗದ ನಿಯಮ! ಇಲ್ಲಿ ಗೆಲುವೇ ಮಾನದಂಡ. ಅದಕ್ಕಾಗಿ ನಮ್ಮ ಗುಣ ನಮ್ಮ ಶಕ್ತಿ, ನಮ್ಮ ದೃಷ್ಟಿಪಥವನ್ನು ನಾವು ಒಂದೋ ವಿಸ್ತರಿಸಿಕೊಳ್ಳಬೇಕು ಇಲ್ಲವೇ ಬದಲಿಸಿಕೊಳ್ಳಬೇಕು. ವಿನೋದ್ ಕಾಂಬ್ಳಿ ಒಬ್ಬ ಸ್ಲಂಬಾಯ್, ಸಚಿನ್ ತೆಂಡೂಲ್ಕರ್, ಇರ್ಫಾನ್ ಪಠಾಣ್ ಮುಂತಾದವರು ಸಾಮಾನ್ಯನ ಸರತಿಯ ಸಾಲಿನಲ್ಲಿ ನಿಂತು ತನ್ನ ತಮ್ಮ ದೃಷ್ಟಿಯಂತೆ ಅವಕಾಶಗಳನ್ನು ಸೃಷ್ಟಿಸಿಕೊಂಡವರು. ಅಜಯ್ ಜಡೇಜ, ಸೌರವ್ ಗಂಗೂಲಿಯಂಥ ಶ್ರೀಮಂತ ಹಿನ್ನೆಲೆಯಿಂದ ಬಂದ ಆಟಗಾರರ ನಡುವೆ ಸರತಿಸಾಲಿನಲ್ಲಿ ನಿಂತ ಇವರೆಲ್ಲರು ಅಸಾಮಾನ್ಯವಾದುದನ್ನು ಕ್ರಿಕೆಟ್ ಕ್ರೀಡಾಂಗಣದಲ್ಲಿ ಸಾಧಿಸಲು ಸಾಧ್ಯವಾಗಿದ್ದು ಅವರ ಕಣ್ಣುಗಳಲ್ಲಿದ್ದ, ತೀಕ್ಷ್ಣತೆ, ಕೆಲಸದಲ್ಲಿದ್ದ ತಲ್ಲೀನತೆ, ಗೆಲುವಿಗಾಗಿ ತೆಗೆದುಕೊಳ್ಳುವ ದೊಡ್ಡ ರಿಸ್ಕ್‌ಗಳು ನಮ್ಮ ದೃಷ್ಟಿಪಥವನ್ನೇ ಅವಲಂಬಿಸಿದೆ. ಗೆಲುವು ತುಂಬಾ ದುಬಾರಿ. ಸಿಕ್ಕ ಸಿಕ್ಕವರಿಗೆಲ್ಲಾ ಪೆಪ್ಪರ್ಮಿಂಟ್ ಹಂಚಿದ ಹಾಗೆ ಅದು ಕುಳಿತು ನಿಂತವರಿಗೆಲ್ಲಾ ಹಂಚುವುದಿಲ್ಲ. ಬವಣೆಯ ದಾರಿಯುದ್ದಕ್ಕೂ ಈ ಬದುಕು ಗೆಲುವಿಗಾಗಿ ಹುಡುಕು ಅಂತ ಇಷ್ಟೋ ಆಷ್ಟೋ ಆಯಸ್ಸುಕೊಟ್ಟು ಪ್ರಯಾಣ ಪ್ರಾರಂಭಿಸಿದೆ. ನೆಟ್ಟ ನೋಟ ತೀಕ್ಷ್ಣವಾದರೆ, ಗೆಲುವೆಂಬ ಮಾಯಾಬಜಾರು ಎಷ್ಟನೇ ಮೈಲಿಗಲ್ಲಿನಲ್ಲಿ ನಮಗಾಗಿ ಕಾಯುತ್ತಿಹುದೋ ಯಾರು ಬಲ್ಲರು ಏನಂತೀರಿ?

ದೆಹಲಿಯಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ ಅರ್ಚಕರು, ಗ್ರಂಥಿಗಳಿಗೆ ತಿಂಗಳಿಗೆ ರೂ. 18,000: ಕೇಜ್ರಿವಾಲ್

ನವದೆಹಲಿ: ದೆಹಲಿಯಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ ತಮ್ಮ ಪಕ್ಷವು 'ಪೂಜಾರಿ–ಗ್ರಂಥಿ ಸಮ್ಮಾನ್ ಯೋಜನೆ'ಯನ್ನು ಪ್ರಾರಂಭಿಸಲಿದೆ. ದೇವಾಲಯದ ಅರ್ಚಕರು ಮತ್ತು ಗುರುದ್ವಾರಗಳ ಗ್ರಂಥಿಗಳಿಗೆ ಮಾಸಿಕ 18,000 ರೂ. ಭತ್ಯೆ ನೀಡಲಾಗುವುದು ಎಂದು ಆಮ್ ಆದ್ಮಿ ಪಾರ್ಟಿ (ಎಎಪಿ) ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಸೋಮವಾರ ಘೋಷಿಸಿದ್ದಾರೆ.

ಮುಂದಿನ ವರ್ಷ ಫೆಬ್ರವರಿಯಲ್ಲಿ ದೆಹಲಿ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಚುನಾವಣೆಗೆ ಮುನ್ನ ಈ ಘೋಷಣೆ ಹೊರಬಿದ್ದಿದ್ದು, ಸತತ ನಾಲ್ಕನೇ ಅವಧಿಗೆ ಅಧಿಕಾರವನ್ನು ಉಳಿಸಿಕೊಳ್ಳಲು ಎಎಪಿ ಪ್ರಯತ್ನ ನಡೆಸುತ್ತಿದೆ. ಹಲವು ವಿಶೇಷ ಯೋಜನೆಗಳನ್ನು ಘೋಷಿಸುತ್ತಿದೆ.



'ಪೂಜಾರಿಗಳು ಮತ್ತು ಗ್ರಂಥಿಗಳು ನಮ್ಮ ಸಮಾಜದ ಪ್ರಮುಖ ಭಾಗವಾಗಿದ್ದಾರೆ. ಆದರೆ, ಅವರನ್ನು ನಿರ್ಲಕ್ಷಿಸಲಾಗಿದೆ. ದೇಶದಲ್ಲಿ ಮೊದಲ ಬಾರಿಗೆ, ನಾವು ಅವರನ್ನು ಬೆಂಬಲಿಸಲು ಈ ಯೋಜನೆಯನ್ನು ಪರಿಚಯಿಸುತ್ತಿದ್ದೇವೆ. ಈ ಯೋಜನೆ ಅಡಿಯಲ್ಲಿ ಅವರಿಗೆ ತಿಂಗಳಿಗೆ 18,000 ರೂ. ಭತ್ಯೆಯನ್ನು ನೀಡಲಾಗುತ್ತದೆ. ಈ ಯೋಜನೆಗೆ ನಾಳೆಯಿಂದಲೇ ನೋಂದಣಿ ಪ್ರಾರಂಭವಾಗುತ್ತದೆ ಎಂದು ಕೇಜ್ರಿವಾಲ್ ಹೇಳಿದರು. ಮಂಗಳವಾರ ಕನ್ನಾಟ್ ಪ್ಲೇಸ್‌ನಲ್ಲಿರುವ ಹನುಮಾನ್ ಮಂದಿರಕ್ಕೆ ಭೇಟಿ ನೀಡಿ, ಅಲ್ಲಿನ ಅರ್ಚಕರ ನೋಂದಣಿ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸುವುದಾಗಿ ತಿಳಿಸಿದರು.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ಮೈಸೂರು ನಗರಪಾಲಿಕೆಯ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾ ಸಂಘದ 2025ನೇ ವರ್ಷದ ಕ್ಯಾಲೆಂಡರನ್ನು ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಪಾಲಿಕೆ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಸಂಘದ ಪದಾಧಿಕಾರಿಗಳು ಬಿಡುಗಡೆ ಮಾಡಿದರು. ಸಂಘದ ಗೌರವ ಅಧ್ಯಕ್ಷ ಎಂ.ವಡಿವೇಲು, ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ, ಉನ್ನತ ಸಮಿತಿ ಪ್ರಧಾನ ಕಾರ್ಯದರ್ಶಿ ಟಿ.ಶ್ರೀನಿವಾಸ್, ಅಧ್ಯಕ್ಷ ಆರ್.ನರಸಿಂಹ, ಪ್ರಧಾನ ಕಾರ್ಯದರ್ಶಿ ಜಿ.ಮಂಜುನಾಥ್, ಮುಖಂಡರಾದ ಡಿ.ಆರ್.ರಾಜು, ಉಪಾಧ್ಯಕ್ಷ ರಾಜೀವ್ (ದೊರೆ), ಸಂಘಟನಾ ಕಾರ್ಯದರ್ಶಿ ಅಮಾಸೆ, ನಿರ್ದೇಶಕ ಶಿವ, ಕಚೇರಿ ಸಿಬ್ಬಂದಿ ಸಾಗರ್ ಇತರರಿದ್ದಾರೆ.


ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣ ಸಂಬಂಧ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆಗ್ರಹ

ಬೆಂಗಳೂರು,ಡಿ.30(ಕೆಎಂಶಿ)–ಗುತ್ತಿಗೆದಾರ ಸಚಿನ್ ಪಾಂಚಾಳ್ ಸಾವು ಪ್ರಕರಣದ ಸಂಬಂಧ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ಪಡೆದು, ಘಟನೆಯನ್ನು ಸಿಬಿಐನಿಂದ ತನಿಖೆ ಮಾಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಖರ್ಗೆ ಕುಟುಂಬದ ಆಪ್ತ ರಾಜು ಕಪನೂರ್ ಟೆಂಡರ್ ಮಾಡಿಕೊಡಲು ಶೇ.5ರಷ್ಟು ಹಣಕ್ಕೆ ಬೇಡಿಕೆ ಇಟ್ಟಿದ್ದು, ಪ್ರಿಯಾಂಕ್ ಖರ್ಗೆ ನಾನು ಹೇಳಿದ ಮಾತನ್ನು ಮೀರುವುದಿಲ್ಲ, ಸಚಿವರ ಬೆಂಬಲ ಇದೆ ಎಂಬುದಾಗಿ ಹೇಳಿದ್ದರೆಂದು ಸಚಿನ್ ತಮ್ಮ ಡೆತ್‌ನೋಟ್‌ನಲ್ಲಿ ಬರೆದಿಟ್ಟಿದ್ದಾರೆ ಎಂದು ಮಾಹಿತಿ ನೀಡಿದರು.

ಸಿಬಿಐ ತನಿಖೆಗೆ ಸಚಿನ್ ಕುಟುಂಬವೂ ಒತ್ತಾಯಿಸಿದೆ. ಈ ಹಿಂದೆ, ಸಚಿವ ನಾಗೇಂದ್ರ ವಾಲ್ಮೀಕಿ ನಿಗಮದ ಹಗರಣದಲ್ಲಿ ಸಿಲುಕಿ ರಾಜೀನಾಮೆ ಕೊಟ್ಟಿದ್ದು, ಒಂದು ಕ್ಷಣವೂ ತಡ ಮಾಡದೆ, ಪ್ರಿಯಾಂಕ್ ಖರ್ಗೆ ರಾಜೀನಾಮೆ ಪಡೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದಾಗ ಸಚಿವ ಕೆ.ಎಸ್. ಈಶ್ವರಪ್ಪ ಅವರ ಮೇಲೆ ಆರೋಪ ಬಂದಾಗ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದನ್ನು ಪ್ರಿಯಾಂಕ್ ಖರ್ಗೆ ಮರೆಯಬಾರದು. ಮಡಿಕೇರಿಯಲ್ಲಿ ಪೊಲೀಸ್ ಅಧಿಕಾರಿ ಗಣಪತಿ ಆತ್ಮಹತ್ಯೆ ಮಾಡಿಕೊಂಡಾಗಲೂ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದರು. ಅಲ್ಲದೆ, ಅಂದಿನ ಗೃಹ ಸಚಿವ ಜಾರ್ಜ್ ಸಹ ರಾಜೀನಾಮೆ ನೀಡಿ, ಸಿಬಿಐ ತನಿಖೆ ಎದುರಿಸಿದ್ದರು. ಸಚಿನ್ ಕುಟುಂಬಕ್ಕೆ ಕೂಡಲೇ ಭದ್ರತೆ ಕೊಡಬೇಕು, ಒಂದು ಕೋಟಿ ರೂ. ಪರಿಹಾರ ನೀಡಬೇಕು, ಕುಟುಂಬದಲ್ಲಿ ಹಲವರು ವಿದ್ಯಾವಂತರಿದ್ದು, ಒಬ್ಬ ಸದಸ್ಯರಿಗೆ ಸರ್ಕಾರಿ ನೌಕರಿ ಕೊಡಬೇಕು ಎಂದರು.



ಡೆತ್‌ನೋಟ್‌ನಲ್ಲಿ ಸಿದ್ಧಲಿಂಗ ಸ್ವಾಮೀಜಿ, ಶಾಸಕ ಬಸವರಾಜ ಮತ್ತಿಮೂಡ, ಕಲಬುರಗಿಯ ಬಿಜೆಪಿ ನಾಯಕರಾದ ಚಂದುಪಾಟೀಲ್, ಮಣಿಕಂಠ ರಾಠೋಡ್ ಕೊಲೆಗೆ ಸಂಚು ರೂಪಿಸಿದ್ದಾಗಿ ತಿಳಿಸಲಾಗಿದೆ. ಆದ್ದರಿಂದ, ಇದು ಗಂಭೀರ ವಿಚಾರ. ಸಿಬಿಐ ತನಿಖೆ ಅಗತ್ಯವಾಗಿದೆ, ರಾಜ್ಯ ಪೊಲೀಸ್ ಇಲಾಖೆ ರಾಜಕೀಯವಾಗಿ ಪ್ರಬಲವಾಗಿರುವ ಖರ್ಗೆ ಕುಟುಂಬದ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆಸಲು ಸಾಧ್ಯವಿಲ್ಲ.

ಆರೋಪ ಎದುರಿಸುತ್ತಿರುವ ಪ್ರಿಯಾಂಕ್ ಖರ್ಗೆ ಹಲವು ಇಲಾಖೆಗೆ ಸಚಿವರು, ಬಹಳ ಜ್ಞಾನಿ, ಮೇಧಾವಿ, ಬುದ್ಧಿವಂತರು, ಪ್ರಭಾವಿ, ಶಕ್ತಿಶಾಲಿ ಮುಖಂಡರೂ ಆಗಿದ್ದಾರೆ, ಸುಪ್ರೀಂಕೋರ್ಟ್, ಹೈಕೋರ್ಟ್ ತೀರ್ಪಿನಂತೆ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ವಿಜಯೇಂದ್ರ ಟೀಕಿಸಿದರು.

ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಸಚಿನ್ ಪಾಂಚಾಳ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದಾಗ, ಇಬ್ಬರು ಸಹೋದರಿಯರಾದ ಸವಿತಾ, ಸುನೀತಾ ಮಧ್ಯಾಹ್ನ 2–15ಕ್ಕೆ ಪೊಲೀಸ್ ಠಾಣೆಗೆ ಧಾವಿಸಿ, ಅವರ ಪ್ರಾಣ ಉಳಿಸುವಂತೆ ಗೋಗರೆದರೂ ಕಿಂಚಿತ್ತೂ ಲೆಕ್ಕಿಸದೆ, ಪಿಎಸ್‌ಐ ಅಮಾನವೀಯವಾಗಿ ನಡೆದುಕೊಂಡಿದ್ದಾರೆ, ಅಲ್ಲದೆ, ಸಹೋದರಿಯರನ್ನು ಇತರೆ ಪೊಲೀಸ್ ಠಾಣೆಗಳಿಗೆ ತಿರುಗಾಡಿಸಿದ್ದಾರೆ. ಠಾಣೆಗೆ ಹೋಗಿದ್ದ ಹೆಣ್ಮಕ್ಕಳ ಜೊತೆ ಕೆಟ್ಟದಾಗಿ ನಡೆದುಕೊಳ್ಳಲಾಯಿತು, ದೂರು ದಾಖಲಿಸಿಕೊಂಡು ಮೊಬೈಲ್ ಟ್ರ್ಯಾಕ್ ಮಾಡಿದ್ದರೆ ನನ್ನ ತಮ್ಮ ಉಳಿಯುತ್ತಿದ್ದ ಎಂದು ಆ ಸೋದರಿಯರು ತಿಳಿಸಿದ್ದಾರೆ. ಹೆಣ್ಮಕ್ಕಳಿಗೆ ಹೀಯ್ಯಾಳಿಸಿ, ಅಪಮಾನ ಮಾಡಿ ನಿಂದಿಸಿದ್ದು ಅಕ್ಷಮ್ಯ ಅಪರಾಧ, ಅಧಿಕಾರಿಗಳ ಕಾಲಹರಣದಿಂದ ಘಟನೆ ಸಂಭವಿಸಿದೆ, ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಾಗಿವೆ, ರಿಪಬ್ಲಿಕ್ ಆಫ್ ಗುಲ್ಬರ್ಗ ಜಿಲ್ಲೆ ಯಾರ ಕಪಿಮುಷ್ಟಿಯಲ್ಲಿದೆ ಎಂಬುದನ್ನು ಅಲ್ಲಿನ ಜನ ಹೇಳುತ್ತಿದ್ದಾರೆ.

ಜಿಲ್ಲೆಯಲ್ಲಿ ಅನೇಕ ಆತ್ಮಹತ್ಯೆ, ಕೊಲೆ ಪ್ರಕರಣಗಳು ನಡೆದಿವೆ, ಅವುಗಳನ್ನು ಮುಚ್ಚಿಹಾಕಿದ ಷಡ್ಯಂತ್ರವೂ ಹಿಂದೆ ನಡೆದಿದೆ, ಕಾಂಗ್ರೆಸ್ ನಾಯಕರು ಬೆಳಗಿನ ಜಾವ 3 ಗಂಟೆಗೆ ನೊಂದ ಕುಟುಂಬವನ್ನು ಭೇಟಿ ಮಾಡಿ, ಸಮಾಧಾನ ಹೇಳಿ, ಸುಮ್ಮನಾಗುವಂತೆ ಬೆದರಿಕೆ ಹಾಕಿದ್ದಾರೆ, ಜಿಲ್ಲೆಯ ಪೊಲೀಸ್ ಇಲಾಖೆ ಖರ್ಗೆ ಕುಟುಂಬದ ಹಿಡಿತದಲ್ಲಿದೆ ಎಂದು ಆರೋಪಿಸಿದರು.

ಭ್ರಷ್ಟಾಚಾರ ಹಗರಣ ಹಿನ್ನೆಲೆ ವಾಲ್ಮೀಕಿ ನಿಗಮದ ಅಕೌಂಟೆಂಟ್ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡರು, ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪಿ.ಎ. ಹೆಸರು ಬರೆದಿಟ್ಟು ರುದ್ರಣ್ಣ ಯಡವಣ್ಣವರ್ ಆತ್ಮಹತ್ಯೆ ಮಾಡಿಕೊಂಡರು, ದಾವಣಗೆರೆಯಲ್ಲಿ ಗುತ್ತಿಗೆದಾರರೊಬ್ಬರು ಬಾಕಿ ಹಣ ಸಿಗದೆ ಆತ್ಮಹತ್ಯೆ ಮಾಡಿಕೊಂಡರು, ಮಾಗಡಿಯಲ್ಲಿ ಕ್ರಷರ್ ಲಾರಿ ಮಾಲೀಕರೊಬ್ಬರು ಲಂಚ ಕೊಡಲಾಗದೆ ಆತ್ಮಹತ್ಯೆ ಮಾಡಿಕೊಂಡರು, ಯಾದಗಿರಿ ಪಿಎಸ್‌ಐ ಪರಶುರಾಮ್, ಸ್ಥಳೀಯ ಶಾಸಕರ ಪುತ್ರನ ಒತ್ತಡ ತಡೆಯಲಾಗದೆ ಆತ್ಮಹತ್ಯೆ ಮಾಡಿಕೊಂಡರು. ಕಾಂಗ್ರೆಸ್ ಆಡಳಿತದಲ್ಲಿ ಸರ್ಕಾರಿ ಪ್ರಾಯೋಜಿತ ಆತ್ಮಹತ್ಯೆಗಳು ದಿನೇ ದಿನೇ ಹೆಚ್ಚುತ್ತಿವೆ, ಸರ್ಕಾರ, ಸಚಿವರು, ಆಡಳಿತ ಶಾಸಕರ ಕುಮ್ಮಕ್ಕಿನಿಂದ ಸರಣಿ ಆತ್ಮಹತ್ಯೆ ಪ್ರಕರಣಗಳು ಘಟಿಸುತ್ತಿವೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಕರ್ನಾಟಕಕ್ಕೆ ಆತ್ಮಹತ್ಯೆ ಭಾಗ್ಯ ದಯಪಾಲಿಸಿದೆ ಎಂದು ಆರೋಪಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಮಂಗಳವಾರ 31 ಡಿಸೆಂಬರ್ 2024

ಮೈಸೂರು ಕೆಆರ್‌ಎಸ್ ರಸ್ತೆಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ನಾಮಕರಣ ಪ್ರಸ್ತಾಪ ವಿವಾದ

ಎರಡೇ ದಿನಕ್ಕೆ ಪ್ರತಾಪ್ ಸಿಂಹ ಯೂ ಟರ್ನ್; ಪ್ರಿನ್ಸೆಸ್ ಹೆಸರೇ ಇರಲಿ ಬಿಡಿ

ಚರ್ಚೆ ಮಾಡದೆ ವಿವಾದಕ್ಕೆ ತೆರೆ ಎಳೆಯೋಣ; ಸಭ್ಯತೆಯ ಗೆರೆ ಮೀರಿ ನಾನು ಮಾತನಾಡಲ್ಲ

ಮೈಸೂರು, ಡಿ.30(ಬಿಎಲ್‌ಯು)– ಮೈಸೂರಿನ ಕೆಆರ್‌ಎಸ್ ರಸ್ತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುವ ಪ್ರಸ್ತಾಪ ಬೆಂಬಲಿಸಿದ್ದ ಮಾಜಿ ಸಂಸದ ಪ್ರತಾಪ್ ಸಿಂಹ, ಎರಡೇ ದಿನಕ್ಕೆ ಉಲ್ಟಾ ಹೊಡೆದಿದ್ದಾರೆ.

ಸರ್ಕಾರದ ದಾಖಲೆಗಳಲ್ಲಿ ಪ್ರಿನ್ಸೆಸ್ ರಸ್ತೆ ಎಂಬ ಹೆಸರಿದ್ದರೆ ಬದಲಾವಣೆ ಮಾಡುವುದು ಬೇಡವೆಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕೆಆರ್‌ಎಸ್ ರಸ್ತೆಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಹೆಸರು ನಾಮಕರಣ ಮಾಡುವ ಬಗ್ಗೆ ಪರ ವಿರೋಧ ವ್ಯಕ್ತವಾಗಿದ್ದು, ಹಗ್ಗ ಜಗ್ಗಾಟ ನಡೆಯುತ್ತಿದೆ. ಇದು ರಾಜಕೀಯವಾಗಿ ಆಡಳಿತ ಹಾಗೂ ವಿರೋಧ ಪಕ್ಷಗಳ ನಡುವೆ ಕೆಸರೆರಚಾಟಕ್ಕೂ ಕಾರಣವಾಗಿದೆ.

ಕೆಆರ್‌ಎಸ್ ರಸ್ತೆಗೆ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುವ ಬಗ್ಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಬಹುತೇಕ ಬಿಜೆಪಿ ನಾಯಕರು ವಿರೋಧಿಸಿದ್ದರು. ಆದರೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಪ್ರತಾಪ್ ಸಿಂಹ ಮಾತ್ರ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುವುದರಲ್ಲಿ ತಪ್ಪಿಲ್ಲ ಎಂದು ಹೇಳಿದ್ದರು.

ಇತ್ತೀಚೆಗೆ ಪ್ರತಾಪ್ ಸಿಂಹ ಕೆಲವು ವಿಚಾರಗಳಲ್ಲಿ ಸಿದ್ದರಾಮಯ್ಯ ಪರ ಬ್ಯಾಟ್ ಬೀಸುತ್ತಿದ್ದು, ಅವರ ಈ ಹೇಳಿಕೆಗಳು ರಾಜಕೀಯವಾಗಿ ಹಲವು ಅನುಮಾನಗಳಿಗೆ ಕಾರಣವಾಗಿತ್ತು. ಪ್ರತಾಪ್ ಸಿಂಹ ಶೀಘ್ರದಲ್ಲೇ ಕಾಂಗ್ರೆಸ್ ಸೇರುತ್ತಾರೆ ಎಂಬ ಗುಸು ಗುಸು ಕೇಳಿ ಬಂದಿತ್ತು. ಆದರೆ ಈಗ ಪ್ರತಾಪ್ ಸಿಂಹ ದಿಢೀರ್ ತಮ್ಮ ಹೇಳಿಕೆ ಹಿಂಪಡೆದಿದ್ದಾರೆ.


ಪ್ರತಾಪ್ ಸಿಂಹ

ಕೆಆರ್‌ಎಸ್ ರಸ್ತೆಗೆ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುವ ಸರ್ಕಾರದ ನಿರ್ಧಾರ ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಜಯನಗರದ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೆಆರ್‌ಎಸ್ ರಸ್ತೆಗೆ ಪ್ರಿನ್ಸೆಸ್ ರಸ್ತೆ ಎಂದು ಮಹಾರಾಜರ ಕಾಲದಲ್ಲೇ ಇತ್ತಾದರೆ ಅದನ್ನು ಈಗ ಬದಲಿಸುವುದು ಬೇಡ ಎಂದು ಹೇಳಿದ್ದಾರೆ.

'ಪ್ರಿನ್ಸೆಸ್ ರಸ್ತೆ' ಹೆಸರು ಬದಲಿಸಿ, ಸಿದ್ದರಾಮಯ್ಯ ಆರೋಗ್ಯ ಮಾರ್ಗ ನಾಮಕರಣ ಮಾಡದಂತೆ ಸ್ಥಳೀಯ ಶಾಸಕ ಕೆ.ಹರೀಶ್‌ಗೌಡ ಅವರಿಗೆ ನಾನೇ ಮನವಿ ಮಾಡುತ್ತೇನೆ. ಆ ರಸ್ತೆಗೆ ಯಾವುದೇ ಹೆಸರಿಲ್ಲದೆ ಇದ್ದಿದ್ದರೆ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುವುದರಲ್ಲಿ ತಪ್ಪೇನಿಲ್ಲ ಎಂದು ಹೇಳಬಹುದಿತ್ತು. ಆದರೆ ಮಹಾರಾಣಿ ಅವರ ಹೆಸರು ಈ ಮೊದಲೇ ಇದ್ದಿದ್ದರಿಂದ ಈಗ ಆ ಹೆಸರು ಬದಲಾಯಿಸಿ ಸಿದ್ದರಾಮಯ್ಯರ ಹೆಸರು ನಾಮಕರಣ ಮಾಡುವುದು ಸೂಕ್ತವಲ್ಲ ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ಹೆಸರು ಬದಲಾಯಿಸುವ ಸಂಬಂಧ ಮೈಸೂರು ನಗರಪಾಲಿಕೆ ಹೊರಡಿಸಿರುವ ನೋಟಿಫಿಕೇಷನ್ ವಾಪಸು ಪಡೆಯಬೇಕು. ಈ ಮೂಲಕ ವಿವಾದಕ್ಕೆ ತೆರೆ ಎಳೆಯಬೇಕು ಎಂದು ಪ್ರತಾಪ್ ಸಿಂಹ ಸಲಹೆ ನೀಡಿದರು.

ಮೈಸೂರಿಗೆ ಮಹಾರಾಜರ ಕೊಡುಗೆ ಬಹಳಷ್ಟಿದೆ. ಹಾಗೆಯೇ ಜನಪ್ರತಿನಿಧಿಗಳ ಕೊಡುಗೆ ಕೂಡ ಇದೆ. ಆದರೆ ಈಗಾಗಲೇ ನಾಮಕರಣ ಮಾಡಿರುವ ಹೆಸರನ್ನು ತೆಗೆದು ಮತ್ತೊಂದು ಹೆಸರು ನಾಮಕರಣ ಮಾಡುವುದು ಬೇಡ. ಇದರ ಬದಲು ಹೊಸ ಬಡಾವಣೆ ಮಾಡಿ ಅದಕ್ಕೆ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡಿದರೆ ಅದು ಅರ್ಥಪೂರ್ಣವಾಗುತ್ತದೆ ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ಮೈಸೂರು ಜನರು ಈಗಾಗಲೇ ನಾಮಕರಣ ಮಾಡಿರುವ ಹೆಸರನ್ನೇ ಬಳಸುವುದಿಲ್ಲ. ಇದರ ಬದಲು ರೂಢಿಗತವಾಗಿ ಬಂದಿರುವ ಹೆಸರನ್ನೆ ಬಳಸುತ್ತಾರೆ. ಹೀಗಿರುವಾಗ ವಿವಾದ ಏಕೆ ಎಂದು ಪ್ರಶ್ನಿಸಿದರು. ನಾನು ಸಿದ್ದರಾಮಯ್ಯ ಅವರಿಗೆ ಬಕೆಟ್ ಹಿಡಿಯುತ್ತೇನೆ ಎಂಬ ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಟೀಕೆಗೆ ಪ್ರತಾಪ್ ಸಿಂಹ ಆಕ್ರೋಶ ವ್ಯಕ್ತಪಡಿಸಿದರು.

ಇಂತಹ ಹೇಳಿಕೆ ಕೊಟ್ಟವರು ಯಾವ ಪಕ್ಷದಿಂದ ಬಂದಿದ್ದಾರೆ, ಸ್ಥಾನಮಾನಗಳಿಗಾಗಿ ಯಾವ ದಾರಿ ಹಿಡಿದಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಸಭ್ಯತೆಯ ಗೆರೆ ಮೀರಿ ಅವರಂತೆ ನಾನು ಮಾತನಾಡುವುದಿಲ್ಲ. ನನಗೆ ಕಾಂಗ್ರೆಸ್ ಪಕ್ಷದಿಂದ ಟಿಕೆಟ್‌ಗೆ ಯಾರು ಆಫರ್ ಮಾಡಿದ್ದರು ಎಂಬುದನ್ನು ಅವರೇ ಬಹಿರಂಗಪಡಿಸಲಿ ಎಂದು ಪ್ರತಾಪ್ ಸಿಂಹ ತಿರುಗೇಟು ನೀಡಿದರು.

ಕೆಂಪೇಗೌಡರ ಪ್ರತಿಮೆ ಸ್ಥಾಪನೆಗೆ ಸಿದ್ದರಾಮಯ್ಯ ತಡೆ

ಮೈಸೂರಿನ ಕಲಾಮಂದಿರದ ಬಳಿ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಸ್ಥಾಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ತಡೆಯೊಡ್ಡಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪಿಸಿದ್ದಾರೆ.

25 ಲಕ್ಷ ವೆಚ್ಚ ಮಾಡಿ ಪ್ರತಿಮೆ ನಿರ್ಮಾಣ ಮಾಡಲಾಗಿದೆ. ಆದರೆ ಪ್ರತಿಮೆ ಸ್ಥಾಪಿಸಲು ಕಳೆದ ಒಂದೂವರೆ ವರ್ಷದಿಂದ ಸಿದ್ದರಾಮಯ್ಯ ಸರ್ಕಾರ ಬಿಡುತ್ತಿಲ್ಲ ಎಂದು ಆಪಾದಿಸಿದರು. ಕೆಂಪೇಗೌಡರ ಪ್ರತಿಮೆ ಕೆತ್ತನೆ ಮಾಡುವುದ ತಡೆದರು, ಈಗ ಪ್ರತಿಮೆ ಸ್ಥಾಪನೆಗೂ ತಡೆಯೊಡ್ಡುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸೇರುವುದಿಲ್ಲ, ಆ ಅನಿವಾರ್ಯತೆ ನನಗೆ ಬಂದಿಲ್ಲ

ಮೈಸೂರು: ಕಾಂಗ್ರೆಸ್ ಸೇರುವ ಅನಿವಾರ್ಯತೆ ನನಗೆ ಬಂದಿಲ್ಲ, ಆದರೆ ಕಾಂಗ್ರೆಸ್‌ನಿಂದ ಬಿಜೆಪಿಗೆ ಬರುವ ಅನಿವಾರ್ಯತೆ ಬೇರೆಯವರಿಗೆ ಇದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಸ್ಪಷ್ಟಪಡಿಸಿದ್ದಾರೆ.

ನಮ್ಮ ತಂದೆ ಜನಸಂಘದಲ್ಲಿದ್ದವರು. ಜನ ಸಂಘದ ಹೊಸ ಅವತಾರವಾದ ಬಿಜೆಪಿಯಲ್ಲಿ ನಾನಿದ್ದೇನೆ. ನಾನು ಸೈದ್ಧಾಂತಿಕ ಬದ್ಧತೆಯಿಂದ ಬಂದವನು ಎಂದು ತಿಳಿಸಿದರು.

ಕಾಂಗ್ರೆಸ್ ಸೇರುವುದಾದರೆ ಚುನಾವಣೆ ಸಂದರ್ಭದಲ್ಲೇ ಹೋಗುತ್ತಿದ್ದೆ. ಈಗ ಕಾಂಗ್ರೆಸ್‌ಗೆ ಹೋಗುವ ಯಾವುದೇ ದರ್ದು ನನಗೆ ಇಲ್ಲ. ಇದರಿಂದ ನಾನು ಕಾಂಗ್ರೆಸ್ ಸೇರುತ್ತೇನೆ ಎಂಬ ಮಾತುಗಳು ಶುದ್ಧ ಸುಳ್ಳು ಎಂದು ಸ್ಪಷ್ಟಪಡಿಸಿದರು.

ಕೆಆರ್ ಎಸ್ ರಸ್ತೆಗೆ ಸಿದ್ದರಾಮಯ್ಯ ಹೆಸರಿಡುವ ಪ್ರಸ್ತಾಪ ಬಂದ ಸಂದರ್ಭದಲ್ಲಿ ನಾನು ನಗರಪಾಲಿಕೆ ಅಧಿಕಾರಿಗಳಿಂದ ಸ್ಪಷ್ಟೀಕರಣ ಕೇಳಿದೆ. ನಗರಪಾಲಿಕೆ ಅಸ್ತಿತ್ವಕ್ಕೆ ಬಂದ ನಂತರ ಯಾವ ಹೆಸರನ್ನು ಇಟ್ಟಿಲ್ಲ ಎಂದು ತಿಳಿಸಿದ್ದರು. ಆದ ಕಾರಣ ಕೆಆರ್‌ಎಸ್ ರಸ್ತೆಗೆ ಸಿದ್ದರಾಮಯ್ಯ ಹೆಸರಿಟ್ಟರೆ ಏನು ತಪ್ಪು ಎಂದು ಹೇಳಿದ್ದೆ ಅಷ್ಟೇ ಎಂದರು.

ಈ ಹೇಳಿಕೆ ಸಾಕಷ್ಟು ಟ್ವಿಸ್ಟ್ ಅಂಡ್ ಟರ್ನ್ ತೆಗೆದುಕೊಂಡಿತು. ನಾನು ಕಾಂಗ್ರೆಸ್ ಸೇರುತ್ತೇನೆ ಎಂಬ ಮಾತುಗಳು ಕೇಳಿ ಬಂದಿತು. ಸಿದ್ದರಾಮಯ್ಯ ಪರವಾಗಿದ್ದೇನೆ, ಸಿದ್ದರಾಮಯ್ಯ ವಿಚಾರವಾಗಿ ನಾನು ಸಾಫ್ಟ್ ಆಗಿದ್ದೇನೆ ಎಂದು ಚರ್ಚೆಗಳಾಯಿತು. ಆದರೆ ಯಾವುದೇ ಕಾರಣಕ್ಕೂ ನಾನು ಕಾಂಗ್ರೆಸ್ ಸೇರುವುದಿಲ್ಲ ಎಂದು ಪ್ರತಾಪ್‌ಸಿಂಹ ಪುನರುಚ್ಚರಿಸಿದರು.

ಕಳೆದ 11 ವರ್ಷಗಳಿಂದ ಸಿದ್ದರಾಮಯ್ಯ ಅವರನ್ನು ಸೈದ್ಧಾಂತಿಕವಾಗಿ ಧರ್ಮದ ವಿಚಾರವಾಗಿ ನಾನು ವಿರೋಧ ಮಾಡುತ್ತಾ ಬಂದಿದ್ದೇನೆ. ಅವರ ಜಾತಿವಾದದ ಬಗ್ಗೆ ಖಡಾಖಂಡಿತವಾಗಿ ವಿರೋಧ ಮಾಡಿದ್ದು ನಾನೊಬ್ಬನೆ ಎಂದರು.

ಸಿದ್ದರಾಮಯ್ಯ ಅವರಿಂದ ಅತಿ ಹೆಚ್ಚು ತೊಂದರೆಗೊಳಗಾದ ಹಳೆ ಮೈಸೂರು ಭಾಗದ ರಾಜಕಾರಣಿ ನಾನು. ಚುನಾವಣೆ ವೇಳೆ ವರುಣದಲ್ಲಿ ಪ್ರಚಾರ ಮಾಡುವಾಗ ಎರಡು ಕೇಸ್ ಹಾಕಿಸಿದ್ದಾರೆ. ಮೂರು ತಿಂಗಳಲ್ಲಿ ಐದು ಎಫ್‌ಐಆರ್ ಹಾಕಿಸಿದ್ದಾರೆ. ಹೀಗೆ ಯಾವ ನಾಯಕನಿಗೂ ಎಫ್‌ಐಆರ್ ಹಾಕಿಲ್ಲ. ಈ ಮೂಲಕ ಸಿದ್ದರಾಮಯ್ಯ ಹಿಂದೂ ವಿರೋಧಿ, ಜಾತಿವಾದಿ ಎಂದು ಕಿಡಿಕಾರಿದರು.

ಪ್ರಧಾನಿ ನರೇಂದ್ರ ಮೋದಿ ಹೆಸರು ಹೇಳಿಕೊಂಡು ನಾನು ರಾಜಕಾರಣಕ್ಕೆ ಬಂದಿದ್ದೇನೆ. ನನ್ನ ನಿಷ್ಠೆ ಹಾಗೂ ಬದ್ಧತೆ ಬಗ್ಗೆ ಚರ್ಚೆ ಮಾಡಲು ಯಾರೂ ಹೋಗಬೇಡಿ. ಕಡೆ ಘಳಿಗೆ ತನಕ ಬಿಜೆಪಿಯಲ್ಲೇ ಇರುತ್ತೇನೆ ಎಂದು ತಮ್ಮ ವಿರೋಧಿಗಳಿಗೆ ಟಾಂಗ್ ನೀಡಿದರು. ಮೈಸೂರು ಏರ್‌ಪೋರ್ಟ್‌ಗೆ ಟಿಪ್ಪು ಹೆಸರಿಡಲು ಸಿದ್ದರಾಮಯ್ಯ ಮುಂದಾಗಿದ್ದರು. ಆದ ಕಾರಣ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ 311 ಕೋಟಿ ಹಣ ಬಿಡುಗಡೆ ಮಾಡಿಸಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣ ಮಾಡುವ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಲು ನಾನು ಕಾರಣಕರ್ತನಾದೆ. ಇದಕ್ಕೆ ಮಹಾರಾಣಿ ಅವರಿಂದ ಕೂಡ ಮೆಚ್ಚುಗೆ ವ್ಯಕ್ತವಾಯಿತು ಎಂದರು. ರೈಲಿಗೆ ಟಿಪ್ಪು ಹೆಸರಿಟ್ಟಿದ್ದರು. ನಾನು ಸಂಸದನಾಗಿ ಬಂದ ನಂತರ ಆ ಹೆಸರು ಬದಲಾವಣೆ ಮಾಡಿಸಿದೆ. ಇತಿಹಾಸದಲ್ಲಿ ಯಾರೂ ಈ ಕೆಲಸ ಮಾಡಲಿಲ್ಲ. ಇದಕ್ಕೆ ಮೈಸೂರು ಅರಮನೆಯಿಂದ ಮೆಚ್ಚುಗೆ ವ್ಯಕ್ತವಾಯಿತು ಎಂದರು. ಮಹಿಷ ದಸರಾ ಆಚರಣೆಯನ್ನು ನಾನು ಬಲವಾಗಿ ವಿರೋಧಿಸಿದೆ. ಇದಕ್ಕೆ ನಮ್ಮ ಪಕ್ಷದ ಯಾವ ನಾಯಕನು ನನ್ನ ಜೊತೆ ಬರಲಿಲ್ಲ. ಇದು ನನ್ನ ಬದ್ಧತೆ ಎಂದು ಪ್ರತಾಪ್ ಸಿಂಹ ತಿಳಿಸಿದರು.

ಲಾ ಗೈಡ್ ವೆಂಕಟೇಶ್‌ಗೆ ಯುವ ಒಕ್ಕಲಿಗ ಗ್ರೂಪ್‌ನಿಂದ ಸನ್ಮಾನ


ಜಿಲ್ಲಾ ಮಟ್ಟದ ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾದ ಹಿರಿಯ ವಕೀಲ, ಲಾ ಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಸಂಪಾದಕ ಎಚ್.ಎನ್.ವೆಂಕಟೇಶ್ ಅವರನ್ನು ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಗ್ರೂಪ್‌ನಿಂದ ಮೈಸೂರು ಪೇಟ ತೊಡಿಸಿ, ಹಾರ ಹಾಕಿ, ಶಾಲು ಹೊದಿಸಿ ಸನ್ಮಾನಿಸಲಾಯಿತು. ಇದೇ ವೇಳೆ ಬೆಂಗಳೂರಿನಲ್ಲಿ ಜನವರಿ 3ರಿಂದ 5ರವರೆಗೆ ನಡೆಯಲಿರುವ ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೋ–2025ರ ಆಹ್ವಾನ ಹಾಗೂ ಮಾಹಿತಿಯ ಕೈಪಿಡಿ ನೀಡಲಾಯಿತು. ಆಯೋಜಕರಾದ ಪ್ರಶಾಂತ್ ಗೌಡ, ಎ.ರವಿ, ಯಶವಂತ್, ಮನು, ಚೇತನ್ ಇದ್ದಾರೆ.

ಶ್ರೀ ವಿಶ್ವಕರ್ಮ ಪತ್ತಿನ ಸಹಕಾರ ಸಂಘದ ಕ್ಯಾಲೆಂಡರ್ ಬಿಡುಗಡೆ


ಶ್ರೀ ವಿಶ್ವಕರ್ಮ ಪತ್ತಿನ ಸಹಕಾರ ಸಂಘದ ನೂತನ ಕ್ಯಾಲೆಂಡರ್ ಅನ್ನು ಶಾಸಕ ಕೆ.ಹರೀಶ್‌ಗೌಡ ಜಲದರ್ಶಿನಿ ಆವರಣದಲ್ಲಿ ಬಿಡುಗಡೆಗೊಳಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಜಯರಾಮಾಚಾರ್, ಉಪಾಧ್ಯಕ್ಷೆ ಭಾಗ್ಯಲಕ್ಷ್ಮಿ, ನಿರ್ದೇಶಕರಾದ ಶ್ರೀಕಾಂತ್ ಆಚಾರ್, ಮೊಗಣ್ಣಾಚಾರ್, ಬಸವರಾಜು, ಮಂಜುನಾಥ್, ನರಸಿಂಹಚಾರ್, ದಿನೇಶ್, ವಿಜಯಕುಮಾರ್, ಲತಾ ಹಾಗೂ ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ಮಂಚೇಗೌಡನಕೊಪ್ಪಲು ರವಿ ಸೇರಿ ಮತ್ತಿತರರು ಉಪಸ್ಥಿತರಿದ್ದರು.

ಕೆಎಎಸ್ ಪೂರ್ವಭಾವಿ ಮರು ಪರೀಕ್ಷೆಯಲ್ಲೂ ಅಧ್ವಾನ

ಲಕ್ಷಾಂತರ ಉದ್ಯೋಗಾಕಾಂಕ್ಷಿಗಳ ಭವಿಷ್ಯ ಅತಂತ್ರ

ಮರು ಪರೀಕ್ಷೆಯಲ್ಲೂ ಭಾಷಾಂತರದಲ್ಲಿ ಲೋಪ, ಓಎಂಆರ್ ಶೀಟ್ ನೋಂದಣಿ ಸಂಖ್ಯೆ ಅದಲು–ಬದಲು

ಬೆಂಗಳೂರು, ಡಿ. 30(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಹಸ್ತಕ್ಷೇಪದಿಂದಾಗಿ ಕೆಎಎಸ್ ಪೂರ್ವಭಾವಿ ಮರುಪರೀಕ್ಷೆಯಲ್ಲಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಮತ್ತೆ ಎಡವಟ್ಟು ಮಾಡಿದ್ದು, ಲಕ್ಷಾಂತರ ಉದ್ಯೋಗಾಕಾಂಕ್ಷಿಗಳ ಭವಿಷ್ಯ ಅತಂತ್ರವಾಗಿದೆ ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕಾಂಗ್ರೆಸ್ ಸರ್ಕಾರ ಮರುಪರೀಕ್ಷೆಯಲ್ಲೂ ಮುಗ್ಗರಿಸಿದೆ, ಆಗಸ್ಟ್‌ನಲ್ಲಿ ನಡೆದ 2023–24ನೇ ಸಾಲಿನ ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರ್ ಪೂರ್ವಭಾವಿ ಪರೀಕ್ಷೆಯಲ್ಲಿ ಭಾರಿ ಎಡವಟ್ಟು ಕಂಡುಬಂದಿತ್ತು. ಅಭ್ಯರ್ಥಿಗಳ ಆಕ್ರೋಶಕ್ಕೆ ಮಣಿದು ಮರು ಪರೀಕ್ಷೆ ನಡೆಸಲಾಗಿತ್ತು ಎಂದಿದ್ದಾರೆ. ಭಾನುವಾರ ನಡೆದ ಮರು ಪರೀಕ್ಷೆಯಲ್ಲೂ ಭಾಷಾಂತರದಲ್ಲಿ ಲೋಪ, ಓಎಂಆರ್ ಶೀಟ್ ಮತ್ತು ನೋಂದಣಿ ಸಂಖ್ಯೆ ಅದಲು–ಬದಲು, ಕೆಲವೆಡೆ 45 ನಿಮಿಷ ತಡವಾಗಿ ಪರೀಕ್ಷೆ ಆರಂಭ ಸೇರಿದಂತೆ ಸಾಲು ಸಾಲು ಲೋಪಗಳು ಅಭ್ಯರ್ಥಿಗಳ ಅಸಮಾಧಾನಕ್ಕೆ ಕಾರಣವಾಗಿವೆ.

ಮರುಪರೀಕ್ಷೆಗೆ ನೋಂದಣಿಯಾಗಿದ್ದ 2.10 ಲಕ್ಷ ಅಭ್ಯರ್ಥಿಗಳ ಪೈಕಿ ಕೇವಲ 1 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಆಗಸ್ಟ್‌ನಲ್ಲಿ ನಡೆದ ಪೂರ್ವಭಾವಿ ಪರೀಕ್ಷೆಯಲ್ಲಿ ಶೇ.62.52ರಷ್ಟಿದ್ದ ಹಾಜರಾತಿ, ಮರುಪರೀಕ್ಷೆಯಲ್ಲಿ ಶೇ.47.7ಕ್ಕೆ ಕುಸಿದಿದೆ, ಇದರರ್ಥ, ಅಭ್ಯರ್ಥಿಗಳು ಕಾಂಗ್ರೆಸ್ ಸರ್ಕಾರ ಮತ್ತು ಕೆಪಿಎಸ್‌ಸಿ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ ಎಂದರು.

ಕಾಂಗ್ರೆಸ್ ಸರ್ಕಾರಕ್ಕೆ ಸರಿಯಾಗಿ ಪರೀಕ್ಷೆ ನಡೆಸಲು ಯೋಗ್ಯತೆ ಇಲ್ಲ ಎನ್ನುವ ಅಭಿಪ್ರಾಯ ಅಭ್ಯರ್ಥಿಗಳಲ್ಲಿ ಮೂಡಿದ್ದರಿಂದ ಹಾಜರಾತಿ ಗಣನೀಯವಾಗಿ ಕುಸಿದಿದೆ.

ಸಿದ್ದರಾಮಯ್ಯ ಸರ್ಕಾರದ ರಾಜಕೀಯ ಹಸ್ತಕ್ಷೇಪ, ಭ್ರಷ್ಟಾಚಾರ, ಸ್ವಜನಪಕ್ಷಪಾತವೇ ಕೆಪಿಎಸ್‌ಸಿ ಪರೀಕ್ಷೆಗಳಲ್ಲಿನ ಎಡವಟ್ಟಿಗೆ ಕಾರಣವಾಗಿದೆ. ಪೂರ್ವಭಾವಿ ಪರೀಕ್ಷೆಗೆ 13.40 ಕೋಟಿ ರೂ. ವೆಚ್ಚವಾಗಿದೆ, ಮರು ಪರೀಕ್ಷೆಗೂ ಅಷ್ಟೇ ಮೊತ್ತ ಅಥವಾ ಅದಕ್ಕಿಂತ ಹೆಚ್ಚು ಖರ್ಚಾಗಿದೆ. ಇದರಲ್ಲಿ 5.3 ಕೋಟಿ ರೂ. ಪರೀಕ್ಷಾ ಗೌಪ್ಯತೆಗೆ ವೆಚ್ಚ ಮಾಡಲಾಗಿದೆ ಎಂಬ ಅಂದಾಜಿದೆ. ಪೂರ್ವಭಾವಿ ಪರೀಕ್ಷೆ ಲೋಪಕ್ಕೆ ಕಾರಣರಾದ ಪರೀಕ್ಷಾ ನಿಯಂತ್ರಕರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೆ ಅದೇ ಹುದ್ದೆಯಲ್ಲಿ ಮುಂದುವರಿಸಲಾಗಿದೆ, ಕಾರ್ಯದರ್ಶಿಗಳನ್ನು ಮಾತ್ರ ಎತ್ತಂಗಡಿ ಮಾಡಲಾಗಿದೆ.

16 ಸದಸ್ಯರಿರುವ ಕೆಪಿಎಸ್‌ಸಿ ದೇಶದಲ್ಲೇ ದೊಡ್ಡ ಆಯೋಗವಾಗಿದೆ. ಇವರ ಸಂಬಳ, ಸಾರಿಗೆಗೆ ಸರ್ಕಾರ ಕೋಟ್ಯಂತರ ರೂ. ತೆರಿಗೆ ಹಣ ವ್ಯಯ ಮಾಡುತ್ತದೆ. ಇಷ್ಟಾದರೂ ಗೊಂದಲಮುಕ್ತ ಪೂರ್ವಭಾವಿ ಪರೀಕ್ಷೆ ನಡೆಸಲು ವಿಫಲವಾಗಿದೆ. ಲಕ್ಷಾಂತರ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಾಕಷ್ಟು ಹಣ, ಸಮಯ ಸಮರ್ಪಿಸುತ್ತಾರೆ, ಭವಿಷ್ಯವನ್ನೇ ಪಣಕ್ಕಿಟ್ಟು ತಯಾರಿ ನಡೆಸುತ್ತಾರೆ. ಬಡ ಅಭ್ಯರ್ಥಿಗಳು ಸಾಲ ಮಾಡಿ ಕೋಚಿಂಗ್ ಪಡೆಯುತ್ತಾರೆ. ಪರೀಕ್ಷೆಯಲ್ಲಿ ಇಂತಹ ಗೊಂದಲಗಳಾದರೆ ಅಭ್ಯರ್ಥಿಗಳ ಭವಿಷ್ಯದೊಂದಿಗೆ ಸರ್ಕಾರ ಚೆಲ್ಲಾಟ ಆಡಿದಂತಾಗಿರುತ್ತದೆ.

ಅಭ್ಯರ್ಥಿಗಳು ಹಾಗೂ ಆಡಳಿತದ ಹಿತದೃಷ್ಟಿಯಿಂದ ಸರ್ಕಾರ ಇನ್ನಾದರೂ ಎಚ್ಚೆತ್ತುಕೊಂಡು ಕೆಪಿಎಸ್‌ಸಿಯಲ್ಲಿ ಆಮೂಲಾಗ್ರ ಸುಧಾರಣೆ ತಂದು ನೇಮಕಾತಿ ವ್ಯವಸ್ಥೆಗೆ ಹೊಸ ಕಾಯಕಲ್ಪ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಅಮೆರಿಕದ ಮಾಜಿ ಅಧ್ಯಕ್ಷ, ಶತಾಯುಷಿ ಜಿಮ್ಮಿ ಕಾರ್ಟರ್ ನಿಧನ

ವಾಷಿಂಗ್ಟನ್: ಅಮೆರಿಕದ 39ನೇ ಅಧ್ಯಕ್ಷರಾಗಿದ್ದ ಶತಾಯುಷಿ ಜಿಮ್ಮಿ ಕಾರ್ಟರ್ ನಿಧನರಾಗಿದ್ದಾರೆ. ಜಾರ್ಜಿಯಾದ ಪ್ಲೇನ್ಸ್‌ನಲ್ಲಿರುವ ಅವರ ನಿವಾಸದಲ್ಲಿ ಕಾರ್ಟರ್ ನಿಧನರಾದರು ಎಂದು ಕಾರ್ಟರ್ ಸೆಂಟರ್ ತಿಳಿಸಿದೆ.

ಭಾರತಕ್ಕೆ ಭೇಟಿ ನೀಡಿದ್ದ ಅಮೆರಿಕದ ಮೂರನೇ ಅಧ್ಯಕ್ಷ ಜಿಮ್ಮಿ ಕಾರ್ಟರ್ ಅವರ ಗೌರವಾರ್ಥವಾಗಿ ಹರಿಯಾಣದ ಗ್ರಾಮಕ್ಕೆ ಕಾರ್ಟರ್ ಪುರಿ ಎಂದು ಹೆಸರಿಡಲಾಗಿದೆ. 100ನೇ ವಯಸ್ಸಿನಲ್ಲಿ ಅವರು ನಿಧನರಾಗಿದ್ದಾರೆ. ಅಮೆರಿಕದ ಇತಿಹಾಸದಲ್ಲಿ ಅತ್ಯಂತ ಹೆಚ್ಚುಕಾಲ ಬದುಕಿದ ಅಧ್ಯಕ್ಷರಾಗಿದ್ದಾರೆ. ಇಂದು ಅಮೆರಿಕ ಮತ್ತು ಜಗತ್ತು ಅಸಾಧಾರಣ ನಾಯಕ, ರಾಜಕಾರಣಿ ಮತ್ತು ಮಾನವತಾವಾದಿಯನ್ನು ಕಳೆದುಕೊಂಡಿದೆ ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜಾಕ್, ಚಿಪ್, ಜೆಫ್, ಆ್ಯಮಿ ಎಂಬ ನಾಲ್ವರು ಮಕ್ಕಳನ್ನು ಅಗಲಿರುವ ಜಿಮ್ಮಿ ಅವರಿಗೆ 11 ಮಂದಿ ಮೊಮ್ಮಕ್ಕಳು, 14 ಮಂದಿ ಮರಿ ಮೊಮ್ಮಕ್ಕಳಿದ್ದಾರೆ. ಕಾರ್ಟರ್ ಅವರನ್ನು ಸೈದ್ಧಾಂತಿಕ ಹಾಗೂ ರಾಜಕೀಯವಾಗಿ ವಿರೋಧಿಸುತ್ತಿದ್ದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ಕಾರ್ಟರ್ ಅವರು ನಮ್ಮ ದೇಶದ ಬಗ್ಗೆ ನೈಜ ಪ್ರೇಮ ಹಾಗೂ ಗೌರವ ಇಟ್ಟುಕೊಂಡಿದ್ದರು. ಅಮೆರಿಕವನ್ನು ಒಂದು ಅತ್ಯುತ್ತಮವಾಗಿಸುವ ನಿಟ್ಟಿನಲ್ಲಿ ಅವರು ಶ್ರಮಿಸಿದ್ದಾರೆ. ಅದಕ್ಕಾಗಿ ಅವರಿಗೆ ಅತ್ಯುನ್ನತ ಗೌರವ ನೀಡುತ್ತೇನೆ. ಅವರು ಒಳ್ಳೆಯ ವ್ಯಕ್ತಿಯಾಗಿದ್ದರು ಎಂದು ಹೇಳಿದ್ದಾರೆ.


ಜಿಮ್ಮಿ ಕಾರ್ಟರ್

ಕಾರ್ಟರ್ ಭಾರತ ಭೇಟಿ: ಕಾರ್ಟರ್ ಅವರನ್ನು ಭಾರತದ ಸ್ನೇಹಿತ ಎಂದು ಪರಿಗಣಿಸಲಾಗಿತ್ತು. 1977ರಲ್ಲಿ ತುರ್ತು ಪರಿಸ್ಥಿತಿಯನ್ನು ತೆಗೆದುಹಾಕಿ, ಜನತಾ ಪಕ್ಷ ಗೆದ್ದ ಭಾರತಕ್ಕೆ ಭೇಟಿ ನೀಡಿದ ಮೊದಲ ಅಮೇರಿಕನ್ ಅಧ್ಯಕ್ಷರಾಗಿದ್ದರು. ಭಾರತಕ್ಕೆ ಭೇಟಿ ನೀಡಿದ್ದ ಅಮೆರಿಕದ ಮೂರನೇ ಅಧ್ಯಕ್ಷ ಜಿಮ್ಮಿ ಕಾರ್ಟರ್ ಅವರ ಗೌರವಾರ್ಥವಾಗಿ ಹರಿಯಾಣದ ಗ್ರಾಮಕ್ಕೆ ಕಾರ್ಟರ್‌ಪುರಿ ಎಂದು ಹೆಸರಿಡಲಾಗಿದೆ. ಜನವರಿ 3, 1978ರಂದು, ಜಿಮ್ಮಿ ಕಾರ್ಟರ್, ಆಗಿನ ಪ್ರಥಮ ಮಹಿಳೆ ರೊಸಾಲಿನ್ ಕಾರ್ಟರ್ ಜೊತೆಗೆ, ದೆಹಲಿಯಿಂದ ಒಂದು ಗಂಟೆ ದೂರದಲ್ಲಿರುವ ಹರಿಯಾಣದ ಹಳ್ಳಿಯಾದ ದೌಲತ್‌ಪುರ ನಾಸಿರಾಬಾದ್‌ಗೆ ಬಂದಿದ್ದರು. ಕಾರ್ಟರ್ ಸೆಂಟರ್, ಶ್ರೀ ಕಾರ್ಟರ್ ಸ್ಥಾಪಿಸಿದ ಎನ್‌ಜಿಒ ಪ್ರಕಾರ, ಅವರ ಭೇಟಿ ಯಶಸ್ವಿಯಾಗಿದ್ದರಿಂದ ಅಲ್ಲಿನ ನಿವಾಸಿಗಳು ಅಧ್ಯಕ್ಷರ ಗೌರವಾರ್ಥವಾಗಿ ಪ್ರದೇಶವನ್ನು 'ಕಾರ್ಟರ್‌ಪುರಿ' ಎಂದು ಮರುನಾಮಕರಣ ಮಾಡಿದರು.


ಅಲ್ಲಿನ ಜನರು ಕಾರ್ಟರ್ ಅವರ ಉಳಿದ ಅವಧಿಯವರೆಗೆ ಶ್ವೇತಭವನದೊಂದಿಗೆ ಸಂಪರ್ಕದಲ್ಲಿದ್ದರು. ಅಂದಿನಿಂದ 'ಕಾರ್ಟರ್‌ಪುರಿ'ಯಲ್ಲಿ ಜನವರಿ 3 ರಂದು ರಜೆ ಘೋಷಿಸಲಾಯಿತು.

ಶ್ರೀ ಕಾರ್ಟರ್ 2002 ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಗೆದ್ದಾಗ, ಗ್ರಾಮಸ್ಥರು ಬೃಹತ್ ಮೆರವಣಿಗೆ ನಡೆಸಿ ಸಂಭ್ರಮಿಸಿದರು. ಜನವರಿ 2, 1978 ರಂದು ಭಾರತೀಯ ಸಂಸತ್ತನ್ನು ಉದ್ದೇಶಿಸಿ ಮಾತನಾಡಿದ್ದ ಕಾರ್ಟರ್ ಸರ್ವಾಧಿಕಾರಿ ಆಡಳಿತವನ್ನು ವಿರೋಧಿಸಿದ್ದರು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ವಿಶಿಷ್ಟವಾದವು. ಮುಂದೆ ಇರುವ ಕಾರ್ಯಗಳ ಬಗ್ಗೆ ನೆನಪಿಸಿಕೊಳ್ಳಬೇಕು. ಸರ್ವಾಧಿಕಾರಿ ಮಾರ್ಗವಲ್ಲ ಎಂದು ಹೇಳಿದ್ದರು.

ಮಹಾನಾಯಕ ದಿನಸೂಚಿ ಬಿಡುಗಡೆ


ಮೈಸೂರಿನ ಅಶೋಕಪುರಂ ಜಯರಾಜ್ ಗ್ರೂಪ್ಸ್‌ನ ಮಹಾನಾಯಕ ದಿನಸೂಚಿ (ಕ್ಯಾಲೆಂಡರ್)ಯನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬಿಡುಗಡೆ ಮಾಡಿದರು. ಅಶೋಕಪುರಂನ ಆರ್.ಸಿ.ಜಯರಾಜ್, ಮಂಜುನಾಥ್, ಪ್ರಸಾದ್, ಕೃಷ್ಣಮೂರ್ತಿ, ತನುರಾಜ್, ಆದರ್ಶ್, ಸತೀಶ್, ವಿಶ್ವ ಗುಣಶೇಖರ್, ಮಹಮ್ಮದ್ ಫಾರೂಕ್, ಮಧುರಾಜ್, ಗೋವಿಂದರಾಜು ಇನ್ನಿತರರಿದ್ದಾರೆ.

ಪಾದಯಾತ್ರೆ


ಕೆಲ ಭಕ್ತರು ಮೈಸೂರು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಹಿಟ್ಟುವಳ್ಳಿ ಶ್ರೀ ವೇಣು ಗೋಪಾಲಸ್ವಾಮಿ ದೇವಸ್ಥಾನಕ್ಕೆ (30 ಕಿ.ಮೀ) ಪಾದಯಾತ್ರೆ ನಡೆಸಿ, ಶ್ರೀ ಕೃಷ್ಣ ವಿಶೇಷ ದರ್ಶನ ಪಡೆದು, ಪ್ರಸಾದ ಸ್ವೀಕರಿಸಿದರು. ಪ್ರಧಾನ ಆರಾಧಕರಾದ ಟಿ.ಎನ್.ಅಭಿಜಿತ್, ಟಿ.ಎ.ಶ್ರೀಧರ್, ಟಿ.ಎಸ್.ಅರುಣ್, ನಾಗಮಣಿ ನಾಗರಾಜನ್, ಹಿಟ್ಟುವಳ್ಳಿ ಗ್ರಾಮಸ್ಥರಾದ ಶ್ರೀನಿವಾಸ್, ರವಿ, ಮಧು, ನಂಜುಂಡಸ್ವಾಮಿ, ರಮೇಶ್, ಸ್ವಾಮಿ, ಭಾರತ್ ಇದ್ದರು.

ಕನ್ನಡ ಚಿತ್ರರಂಗ ಕಂಡ ಶ್ರೇಷ್ಠ ಕಲಾವಿದ ವಿಷ್ಣುವರ್ಧನ್: ಶಾಸಕ ಟಿ.ಎಸ್.ಶ್ರೀವತ್ಸ


ಡಾ.ವಿಷ್ಣುವರ್ಧನ್ ಪುಣ್ಯ ಸ್ಮರಣೆ ಅಂಗವಾಗಿ ನಡೆದ ಅನ್ನಸಂತರ್ಪಣೆ.

ಮೈಸೂರು, ಡಿ. 30– ಕನ್ನಡ ನಾಡು–ನುಡಿ ಬಗೆಗೆ ಅಪಾರ ಕಳಕಳಿ ಹೊಂದಿದ್ದ ಡಾ.ವಿಷ್ಣುವರ್ಧನ್ ಅವರು ಕನ್ನಡ ಚಿತ್ರರಂಗ ಕಂಡ ಶ್ರೇಷ್ಠ ಕಲಾವಿದ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಶ್ಲಾಘಿಸಿದರು.

ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಲಕ್ಷ್ಮಿ ಚಿತ್ರಮಂದಿರದ ಮುಂಭಾಗ ಸಾಹಸಸಿಂಹ ಡಾ.ವಿಷ್ಣುವರ್ಧನ್ 15ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು. ಈ ವೇಳೆ ಹಿರಿಯ ಸಮಾಜ ಸೇವಕರಾದ ಕೆ ರಘುರಾಮ್ ವಾಜಪೇಯಿ, ನಗರಪಾಲಿಕಾ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಮದನ್, ಪಾಪು, ಟಿ.ಎಸ್.ಅರುಣ್, ನವೀನ್, ರಮೇಶ್, ಕುಮಾರ್, ರಾಜು, ರವಿ, ಶ್ರೀಧರ್, ಚೇತನ್‌ಗೌಡ, ಇನ್ನಿತರರು ಹಾಜರಿದ್ದರು.

ಫಲಾನುಭವಿಗಳಿಗೆ ಸರ್ಕಾರದ ಪಂಚ ಗ್ಯಾರಂಟಿಗಳ ತಲುಪಿಸಿ

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಸ್.ಅರುಣ್‌ಕುಮಾರ್ ಸೂಚನೆ

ಮೈಸೂರು,ಡಿ.30(ಆರ್‌ಕೆ)–ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಕ್ರಮ ವಹಿಸಿ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷ ಎಸ್. ಅರುಣ್‌ಕುಮಾರ್ ಇಂದಿಲ್ಲಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿದ ಅವರು, ಜನರ ಕಲ್ಯಾಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಗೃಹಲಕ್ಷ್ಮಿ, ಅನ್ನಭಾಗ್ಯ, ಶಕ್ತಿ, ಗೃಹಜ್ಯೋತಿ ಹಾಗೂ ಯುವನಿಧಿ ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕು ಎಂದರು.

ಈ ಪಂಚ ಗ್ಯಾರಂಟಿಗಳನ್ನು ಪಡೆಯಲು ಅರ್ಜಿ ಸಲ್ಲಿಸುವ ಸಂದರ್ಭ ಸಾರ್ವಜನಿಕರು ಹಲವು ತಾಂತ್ರಿಕ ತೊಂದರೆಗಳನ್ನು ಎದುರಿಸುತ್ತಿರುವ ಮಾಹಿತಿ ಬಂದಿರುವುದರಿಂದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಗಮನಿಸಿ ಫಲಾನುಭವಿಗಳಿಗೆ ಸಹಾಯ ಮಾಡಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಮಾತನಾಡಿ, ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಫಲಾನುಭವಿಗಳಿಗೆ ತಲುಪಿಸುವ ಕೆಲಸ ಮಾಡಬೇಕು. ಫಲಾನುಭವಿಗಳಿಗೆ ಸಮಸ್ಯೆ ಉಂಟಾದರೆ ಅಧಿಕಾರಿಗಳು ಅದನ್ನು ಬಗೆಹರಿಸುವ ಕಾರ್ಯ ಮಾಡಬೇಕು. ತಾಲೂಕುವಾರು ಯಾವುದೇ ಯೋಜನೆಯ ಫಲಾನುಭವಿ, ಯೋಜನೆಯಿಂದ ಹೊರಗೆ ಉಳಿಯುದಂತೆ


ಮೈಸೂರು ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಯುವನಿಧಿ ಪೋಸ್ಟರ್, ಬ್ಯಾನರ್ ಬಿಡುಗಡೆ ಮಾಡಿದರು.

ಅಧಿಕಾರಿಗಳು ಜಾಗೃತಿಯಿಂದ ಕೆಲಸ ನಿರ್ವಹಿಸಬೇಕು. ಪ್ರತಿ ತಾಲೂಕು ಪಂಚಾಯತ್‌ಗಳಲ್ಲಿ ಸಾಮಾನ್ಯ ಸಭೆಗಳನ್ನು ನಡೆಸಿ, ತಳಮಟ್ಟದಲ್ಲಿರುವ ಲೋಪದೋಷಗಳನ್ನು ಸರಿಪಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಶಕ್ತಿಯೋಜನೆಯಡಿ ಈವರೆಗೆ ಜಿಲ್ಲೆಯಲ್ಲಿ ಶೇ. 65.91ರಷ್ಟು ಮಹಿಳೆಯರು ಸರ್ಕಾರಿ ಬಸ್‌ನಲ್ಲಿ ಪ್ರಯಾಣಿಸಿದ್ದು, ಈ ಯೋಜನೆಯಲ್ಲಿ 52,789 ಲಕ್ಷ ರೂ. ಸಾರಿಗೆ ಸಂಸ್ಥೆಗೆ ಆದಾಯ ಸಂದಿದೆ ಎಂದು ತಿಳಿಸಿದರು. ಯುವನಿಧಿ ಯೋಜನೆಯಡಿ 2023 ಹಾಗೂ 2024 ಶೈಕ್ಷಣಿಕ ವರ್ಷದಲ್ಲಿ ಡಿಗ್ರಿ–ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿ ಯುವಕ ಯುವತಿಯರು ಆನ್ಲೈನ್‌ನಲ್ಲಿ ಸೇವಾಸಿಂಧು ವೆಬ್ಸೈಟ್ ಮೂಲಕ ಈಗಲೂ ನೋಂದಣಿಯಾಗಬಹುದಾಗಿದ್ದು, ಪ್ರತಿ ತಿಂಗಳು ಸ್ವಯಂ ಘೋಷಣೆ ಮಾಡಿಸುವುದು ಕಡ್ಡಾಯ. ಜಿಲ್ಲೆಯಲ್ಲಿ ಒಟ್ಟು 7453 ಡಿಪ್ಲೋಮಾ, ಪದವೀಧರರು ಯುವನಿಧಿ ಯೋಜನೆಗೆ ನೋಂದಣಿ ಮಾಡಿಸಿಕೊಂಡಿದ್ದಾರೆ. ಯುವನಿಧಿ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಅರ್ಹ ನಿರುದ್ಯೋಗಿ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಇನ್ನೂ ಬಾಕಿ ಇರುವ ಅರ್ಹ ಫಲಾನುಭವಿಗಳನ್ನು ನೋಂದಾಯಿಸುವಂತೆ ತಿಳಿಸಿದರು.

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಅನ್ನಭಾಗ್ಯ ಯೋಜನೆಯಡಿ 2023ರ ಜುಲೈ ಮಾಹೆಯಿಂದ ಡಿ.ಪಿ.ಟಿ. ಮೂಲಕ ನೇರ ಹಣದ ವರ್ಗಾವಣೆಯಾಗುತ್ತಿದ್ದು, ಜುಲೈ 2023 ರಿಂದ ಆಗಸ್ಟ್–2024ರವರೆಗೆ ಒಟ್ಟು 471 ಕೋಟಿ ರೂ.ಗಳು ಪಡಿತರ ಚೀಟಿದಾರರ ಮುಖ್ಯಸ್ಥರ ಖಾತೆಗೆ ನೇರವಾಗಿ ಹಣ ಜಮಾ ಆಗಿರುತ್ತದೆ. ನ್ಯಾಯಬೆಲೆ ಅಂಗಡಿಗಳಲ್ಲಿ ನಿಗದಿತ ಸಮಯದಲ್ಲಿ ಪಡಿತರವನ್ನು ನೀಡಬೇಕು ಎಂಬುದರ ಬಗ್ಗೆ ಅಧಿಕಾರಿಗಳು ಗಮನವಹಿಸಬೇಕು. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪುವಲ್ಲಿ ಪ್ರತಿ ತಾಲೂಕಿನಲ್ಲಿ ಸಭೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಎಸ್.ಅರುಣ್‌ಕುಮಾರ್ ಯುವನಿಧಿ ಪೋಸ್ಟರ್ ಮತ್ತು ಬ್ಯಾನರ್ ಬಿಡುಗಡೆ ಮಾಡಿದರು.

ಮೈನವಿರೇಳಿಸಿದ ಜೋಡಿ ಎತ್ತಿನ ಗಾಡಿ ಸ್ಪರ್ಧೆ



ಪಾಂಡವಪುರ ತಾಲೂಕಿನ ಶ್ಯಾದನಹಳ್ಳಿ ಗ್ರಾಮದಲ್ಲಿ ನಡೆದ ಅಂತರ ರಾಜ್ಯಮಟ್ಟದ ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆಯ ಫೈನಲ್ ಪಂದ್ಯದಲ್ಲಿ ವಿಜೇತರಾದ ಶ್ಯಾದನಹಳ್ಳಿಯ ಶಂಭು ಮತ್ತು ಕಾಲ ಎಂಬ ಜೋಡೆತ್ತುಗಳ ಮಾಲೀಕರಾದ ಅಕ್ಷಯ್ ಅವರಿಗೆ ಪ್ರಥಮ ಬಹುಮಾನ ವಿತರಣೆ ಮಾಡಲಾಯಿತು.

ಪಾಂಡವಪುರ, ಡಿ.30– ತಾಲೂಕಿನ ಶ್ಯಾದನಹಳ್ಳಿ ಗ್ರಾಮದ ದಣ್ಣಾಯ ಯುವಕರ ಬಳಗ ದೋಸ್ತಿ ದರ್ಬಾರ್ ಸಹಯೋಗ ದಲ್ಲಿ ನಡೆದ ಪ್ರಥಮ ಬಾರಿಯ ಅಂತರ ರಾಜ್ಯಮಟ್ಟದ ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆಯಲ್ಲಿ ಶ್ಯಾದನಹಳ್ಳಿಯ ಶಂಭು ಮತ್ತು ಕಾಲ ಎಂಬ ಜೋಡಿ ಎತ್ತುಗಳು ಪ್ರಥಮ ಸ್ಥಾನವನ್ನು ಪಡೆಯುವ ಮೂಲಕ ಚಾಂಪಿ ಯನ್‌ಗಳಾಗಿ ಹೊರಹೊಮ್ಮಿದರು.

ಶ್ಯಾದನಹಳ್ಳಿ ಗ್ರಾಮದ ಹೊರವಲಯ ದಲ್ಲಿ ಎರಡು ದಿನಗಳ ಕಾಲ ನಡೆದ ಅಂತರ ರಾಜ್ಯಮಟ್ಟದ ಎತ್ತಿನ ಗಾಡಿ ಓಟದ ಸ್ಪರ್ಧೆಯಲ್ಲಿ ಮಂಡ್ಯ, ಮೈಸೂರು, ಹಾಸನ, ಚಿಕ್ಕಮಗಳೂರು, ಬೆಂಗಳೂರು ಸೇರಿ ದಂತೆ ವಿವಿಧ ಜಿಲ್ಲೆಗಳಿಂದ ಸುಮಾರು 50ಕ್ಕೂ ಅಧಿಕ ಜೋಡಿ ಎತ್ತುಗಳು ಭಾಗ ವಹಿಸಿದ್ದರು. ಸ್ಪರ್ಧೆಯಲ್ಲಿ ಒಂದು ಹಳ್ಳಿ ಕಾರ್ ತಳಿ ಹಾಗೂ ಒಂದು ಗೂಳಿ ಭಾಗವ ಹಿಸಲು ಅವಕಾಶ ನೀಡಲಾಗಿತ್ತು.

ಶ್ಯಾದನಹಳ್ಳಿಯ ಶಂಭು ಮತ್ತು ಕಾಲ ಎಂಬ ಜೋಡಿ ಎತ್ತುಗಳು ಸ್ಪರ್ಧೆಯ ಐದು ರೌಂಡ್‌ಗಳಲ್ಲೂ ಪ್ರಥಮ ಸ್ಥಾನಗಳಿಸುವ ಮೂಲಕ ಪ್ರಥಮ ಸ್ಥಾನಗಳಿಸಿ 60 ಸಾವಿರ ನಗದು ಹಾಗೂ ಆಕರ್ಷಕ ಟ್ರೋಫಿಯನ್ನು ಪಡೆದುಕೊಂಡವು. ಫೈನಲ್ ರೌಂಡ್‌ನಲ್ಲಿ ಶ್ಯಾದನಹಳ್ಳಿ ಶಂಭು ಮತ್ತು ಕಾಲ ಎದುರು ಸ್ಪರ್ಧಿ ಸೋಲುಂಡ ಚಿನಕುರಳಿಯ ಹಳ್ಳಿದೊರೆ ಕೃಪೆ ಕಾವೇರಿ ರಾಕಿ ಹಾಗೂ ಹಾವೇರಿ ಎತ್ತುಗಳು ದ್ವಿತೀಯ ಸ್ಥಾನವನ್ನು ಪಡೆದು 40 ಸಾವಿರ ನಗದು, ಟ್ರೋಫಿ ಪಡೆದುಕೊಂಡರು.

ಅರಕಲಗೂಡಿನ ರಾಕ್ ಹಾಗೂ ಜಲ್ಲ ಎತ್ತುಗಳು ತೃತೀಯ ಸ್ಥಾನ ಪಡೆದು 30 ಸಾವಿರ ನಗದು ಟ್ರೋಫಿ, ತರಿಕೆರೆಯ ಕೊಯ್ಯಿ ಮತ್ತು ಡೆವಿಲ್ ಜೋಡೆತ್ತುಗಳು ನಾಲ್ಕನೇ ಸ್ಥಾನಪಡೆದು 15 ಸಾವಿರ ನಗದು, ಟ್ರೋಫಿ ಪಡೆದವು. ಐದನೇ ಸ್ಥಾನವನ್ನು ಕ್ಯಾತನಹಳ್ಳಿಯ ಹೊನ್ನ ದೇವಿ ಕೃಪೆಯ ಕಿರಣ್, ಮೈಲಾರಿಲಿಂಗೇಶ್ವರ ಪ್ರಸನ್ನ ಸರ್ದಾರ್ ಬಸ್ಯ ಹಾಗೂ ಜಾಗಟೇಮ ಲ್ಲೇನಹಳ್ಳಿಯ ಶ್ರೀಲಕ್ಷ್ಮೀದೇವಿ ಕಿರಣ್, ಬನ್ನಾರಿ ಎಕ್ಸ್‌ಪ್ರೆಸ್ ಬಾಲು, ಜಯ ರಾಮು ಅವರಿಗೆ ನೀಡಲಾಯಿತು.

ಚಾಂಪಿಯನ್ ಡ್ರೈವರ್‌ಗಳಾಗಿ ಹೊರ ಹೊಮ್ಮಿದ ಚಿಕ್ಕಾಡೆಯ ಮಾಚಿ ಹಾಗೂ ಪಾಟೀಲ್ ಅವರನ್ನು ಅಭಿನಂದಿ ಸಿದರು. ಎರಡು ದಿನಗಳ ಕಾಲ ನಡೆದ ಅಂತರ ರಾಜ್ಯಮಟ್ಟದ ಜೋಡಿ ಎತ್ತುಗಳ ಓಟದ ಸ್ಪರ್ಧೆಯಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಪೊಲೀಸ್ ಭದ್ರತೆ, ಆರೋಗ್ಯ ಇಲಾಖೆಯ ಸಿಬ್ಬಂದಿಗಳನ್ನು ನಿಯೋಜಿಸಲಾ ಗಿತ್ತು ಶ್ಯಾದನಹಳ್ಳಿ ಹಾಗೂ ಸುತ್ತ ಮುತ್ತಲಿನ ಗ್ರಾಮಸ್ಥರು ಸಹಕಾರ ನೀಡುವ ಮೂಲಕ ಸ್ಪರ್ಧೆಯ ಯಶಸ್ಸಿಗೆ ಶ್ರಮಿಸಿದಕ್ಕೆ ಆಯೋಜನಕರು ಅಭಿನಂಧನೆ ಸಲ್ಲಿಸಿದರು.

ಮನೆಯಲ್ಲಿ ಗುರು–ಹಿರಿಯರಿದ್ದರೆ ಮಕ್ಕಳು ಸುಸಂಸ್ಕೃತರಾಗಲು ಸಾಧ್ಯ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿಮತ



ಪಾಂಡವಪುರ ಪಟ್ಟಣದ ಕಸಾಪ ಭವನದಲ್ಲಿ ನಡೆದ ನಿವೃತ್ತ ಅಧ್ಯಾಪಕ ಎನ್.ಟಿ.ರಂಗನಾಥನ್ ಅವರ 'ಭರತ' ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಎನ್.ಟಿ.ರಂಗನಾಥನ್ ಅವರನ್ನು ಅಭಿನಂಧಿಸಿದರು.

ಪಾಂಡವಪುರ,ಡಿ.30– ಮನೆಗಳಲ್ಲಿ ಮಕ್ಕಳಿಗೆ ಒಳ್ಳೆಯ ಬುದ್ಧಿಮಾತು ಹೇಳುವಂ ತಹ ಗುರು–ಹಿರಿಯರು ಇದ್ದಾಗ ಮಾತ್ರ, ಮಕ್ಕಳು ಸುಸಂಸ್ಕೃತರಾಗಿ ಉತ್ತಮ ಬದುಕು ನಡೆಸಲು ಸಾಧ್ಯವಾಗುತ್ತದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟ ರಾಜು ಅವರು ಹೇಳಿದರು.

ಪಟ್ಟಣದ ಕಸಾಪ ಭವನದಲ್ಲಿ ಕಸಾಪ, ಎನ್‌ಟಿಆರ್ ಅಭಿಮಾನಿ ಬಳಗದ ಸಹಯೋಗ ದಲ್ಲಿ ನಡೆದ ನಿವೃತ್ತ ಅಧ್ಯಾಪಕ ಎನ್.ಟಿ. ರಂಗನಾಥನ್ ಅವರ 'ಭರತ' ಕೃತಿ ಲೋಕಾ ರ್ಪಣೆ ಸಮಾರಂಭ ಹಾಗೂ ಎನ್‌ಟಿಆರ್ ಅವರ 95ರ ಸಂಭ್ರಮ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎನ್.ಟಿ.ರಂಗನಾಥನ್ ಅವರು ವಿದ್ಯಾ ಪ್ರಚಾರ ಸಂಘದಲ್ಲಿ ಅಧ್ಯಾಪಕರಾಗಿ ಹಲವಾರು ವರ್ಷಗಳ ಕಾಲ ಸೇವೆ ಮಾಡುವ ಮೂಲಕ ಸಾವಿರಾರು ಮಕ್ಕಳಿಗೆ ಉಜ್ವಲವಾದ ಭವಿಷ್ಯ ರೂಪಿಸಿದ್ದಾರೆ. ವಿದ್ಯಾ ಪ್ರಚಾರ ಸಂಘವು ಸ್ಥಾಪನೆಗೊಂಡು 75ನೇ ವರ್ಷದ ಸಂಭ್ರಮಾ ಚರಣೆಯಲ್ಲಿದ್ದು ಆ ಕಾರ್ಯಕ್ರಮದಲ್ಲಿ ಎನ್.ಟಿ.ರಂಗನಾಥನ್ ಅವರು ಅಭಿನಂಧಿಸ ಲಾಗುವುದು ಎಂದರು. ಎನ್.ಟಿ.ರಂಗನಾಥನ್ ಅವರಂತಹ ಗುರುಗಳ ಆಶೀರ್ವಾದ ದಿಂದಲೇ ನಾನು ಈ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕನಾಗಿ, ಸಚಿವ, ಸಂಸದನಾಗಿ ಕೆಲಸ ಮಾಡಲು ಸಾಧ್ಯವಾಗಿದೆ ಹಾಗಾಗಿ ಪ್ರತಿಯೊ ಬ್ಬರು ವಿದ್ಯೆ ಕೊಟ್ಟಂತಹ ಗುರುಗಳನ್ನು ಗೌರವದಿಂದ ಕಾಣಬೇಕು ಎಂದು ತಿಳಿಸಿದರು.

ಇದೇ ವೇಳೆ ನಿವೃತ್ತ ಅಧ್ಯಾಪಕ ಎನ್.ಟಿ. ರಂಗನಾಥನ್ ಅವರು ಬರೆದ ಭರತ ಕೃತಿ ಯನ್ನು ಲೋಕಾರ್ಪಣೆ ಮಾಡಿದರು. ಎನ್.ಟಿ.ರಂಗನಾಥನ್ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಸೇರಿದಂತೆ ಗಣ್ಯರು ಅಭಿನಂದಿಸಿದರು.

ಸಂದರ್ಭದಲ್ಲಿ ವೈದ್ಯ ಸಾಹಿತಿ ಡಾ.ಎಚ್. ಆರ್.ಮರೀಕೇಶ್, ಪ್ರಾಧ್ಯಾಪಕ ಡಾ.ಎಚ್. ಆರ್.ತಿಮ್ಮೇಗೌಡ, ಎನ್.ಟಿ.ರಂಗನಾಥನ್, ಎಸ್.ನಾಗರಾಜು ಇನ್ನಿತರರಿದ್ದರು.

ಶ್ರೀಘ್ರದಲ್ಲೇ ಮಂಡ್ಯದಲ್ಲಿ ಎಸ್.ಎಂ.ಕೃಷ್ಣಗೆ ಶ್ರದ್ಧಾಂಜಲಿ ಸಭೆ



ಪತ್ರಿಕಾಗೋಷ್ಠಿಯಲ್ಲಿ ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಮಾತನಾಡುತ್ತಿರುವುದು.

ಮಂಡ್ಯ: ಅಮರ ಚೇತನ ಎಸ್.ಎಂ. ಕೃಷ್ಣರವರಿಗೆ ಮಂಡ್ಯದಲ್ಲಿ ಶೀಘ್ರದಲ್ಲೇ ವಿಜೃಂಭಣೆಯಿಂದ ಡಾ.ಬಿ.ಆರ್.ಅಂಬೇಡ್ಕರ್ ಭವನ ಅಥವಾ ಜಿಲ್ಲಾ ಕ್ರೀಡಾಂಗಣದಲ್ಲಿ ಶ್ರದ್ಧಾಂಜಲಿ ಸಭೆ ನಡೆಸಲು ನಿರ್ಧರಿಸಲಾಗಿದೆ ಎಂದು ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ತಿಳಿಸಿದರು.

ನಗರದ ಹರಿಪ್ರಿಯ ಹೋಟೆಲ್‌ನ ಚಾಣಕ್ಯ ಸಭಾಂಗಣದಲ್ಲಿ ದಿವ್ಯ ಚೇತನ ಎಸ್.ಎಂ. ಕೃಷ್ಣ ಸಂಸ್ಮರಣ ವೇದಿಕೆ ವತಿಯಿಂದ ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದ ಅವರು, ಸಭೆಯಲ್ಲಿ ಒಕ್ಕೊರಲಿನಿಂದ ಕೋರ್ ಕಮಿಟಿ ಮಾಡಿದ್ದಾರೆ. ಮುಂದೆ ಕಮಿಟಿಯವರು ತೀರ್ಮಾನ ಮಾಡಿ ಮುಂದಿನ ರೂಪುರೇಷೆ ಮಾಡಲು ಹೇಳಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು, ಮಾಜಿ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು.

ಮಂಡ್ಯದ ಪುಣ್ಯ ಭೂಮಿಯಲ್ಲಿ ಜನಿಸಿ ನಾಡಿನ ಅದ್ವಿತೀಯ ನಾಯಕರಾಗಿ ಬೆಳೆದು, ವಿಶ್ವಮಾನ್ಯರಾಗಿ ಮನ್ನಣೆಗಳಿಸಿ ಭೌತಿಕವಾಗಿ ನಮ್ಮನಗಲಿದ ಅಮರ ಚೇತನ ಎಸ್.ಎಂ. ಕೃಷ್ಣ ರವರಿಗೆ ನಮನ ಸಲ್ಲಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ ಮಾತನಾಡಿ, ದಿವಂಗತ ಎಸ್.ಎಂ.ಕೃಷ್ಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಮೂಲಕ ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿ ಆಗಿದೆ. ಎಸ್.ಎಂ.ಕೃಷ್ಣ ಅವರು ರಾಷ್ಟ್ರಮಟ್ಟದ ನಾಯಕರು ಸಜ್ಜನಿಕೆಗೆ ಹೆಸರುವಾಸಿಯಾದವರು ರಾಷ್ಟ್ರ ಕಂಡ ಅಪರೂಪದ ರಾಜಕಾರಣಿ ಎಂದು ಹೇಳಿದರು.

ಮಂಡ್ಯ ಜಿಲ್ಲೆಯ ರಾಜಕಾರಣ ಹಾಗೂ ಸಮಾಜ ಸೇವೆಗಳ ಬಗ್ಗೆ ದಾಖಲೆಯಾಗಿರುವಷ್ಟು ಕರ್ನಾಟಕದ ಯಾವ ಜಿಲ್ಲೆಯಲ್ಲಿ ಆಗಿಲ್ಲ, ಮಂಡ್ಯ ಜಿಲ್ಲೆಯಲ್ಲಿ ಇರುವಷ್ಟು ಪ್ರಶಸ್ತಿಗಳು ಎಲ್ಲೂ ಇಲ್ಲ ಎಂದು ಹೇಳಿದರು.

ವಕೀಲ ಟಿ.ಎಸ್.ಸತ್ಯಾನಂದ ಮಾತನಾಡಿ, ಮಂಡ್ಯದಲ್ಲಿ ಎಸ್.ಎಂ.ಕೃಷ್ಣ ಅವರಿಗೆ ವಿಭಿನ್ನ ರೀತಿಯಲ್ಲಿ ಶ್ರದ್ಧಾಂಜಲಿ ಸಭೆ ಮಾಡಲು ಹಲವಾರು ಪ್ರಮುಖರ ಸಭೆ ಕರೆಯಲಾಗಿದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ದಿನಾಂಕ ನಿಗಧಿ ಮಾಡಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ಜಿಲ್ಲೆಯ ಶಾಸಕರು ಹಾಗೂ ಮಾಜಿ ಶಾಸಕರ ನೇತೃತ್ವದಲ್ಲಿ ಶೀಘ್ರವಾಗಿ ಎಸ್.ಎಂ.ಕೃಷ್ಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಸಭೆ ಆಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಮಂಗಲ ಟಿ.ತಿಮ್ಮೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಮುಖಂಡರಾದ ಪ್ರೊ.ಬಿ.ಶಿವಲಿಂಗಯ್ಯ ಎಸಿ.ರಮೇಶ್ ಡಾ.ಸಿದ್ದರಾಮಯ್ಯ ಚಂದಗಾಲು ಶಿವಣ್ಣ, ಜಿ.ಟಿ.ವೀರಪ್ಪ, ಹಾಲ ಹಳ್ಳಿ ರಾಮಲಿಂಗಯ್ಯ ಇನ್ನಿತರರಿದ್ದರು.

ಮುಟ್ಟನಹಳ್ಳಿ ಡೇರಿ ಅಧ್ಯಕ್ಷರಾಗಿ ಎಂ.ಟಿ.ಯೋಗೇಶ್

ಭಾರತೀನಗರ,ಡಿ.30– ಇಲ್ಲಿಗೆ ಸಮೀಪದ ಮುಟ್ಟನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಟಿ.ಯೋಗೇಶ್ ಹಾಗೂ ಉಪಾಧ್ಯಕ್ಷರಾಗಿ ಚಿಕ್ಕತಾಯಮ್ಮ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ. ಈ ಹಿಂದೆ ಇದ್ದ ಅಧ್ಯಕ್ಷ ಎಂ.ಇ.ಮಧುಕುಮಾರ್, ಉಪಾಧ್ಯಕ್ಷೆ ಲಕ್ಷ್ಮಮ್ಮ ಅವರು ರಾಜಿನಾಮೆ ನೀಡಿದ್ದ ಹಿನ್ನೆಲೆಯಲ್ಲಿ ನಡೆದ ಚುನಾವಣೆಯಲ್ಲಿ ಎಂ.ಟಿ.ಯೋಗೇಶ್ ಮತ್ತು ಚಿಕ್ಕತಾಯಮ್ಮ ಅವರನ್ನು ಹೊರತುಪಡಿಸಿ ಬೇರ್‍ಯಾರು ನಾಮಪತ್ರ ಸಲ್ಲಿಸದ ಕಾರಣ ಅಧ್ಯಕ್ಷರಾಗಿ ಎಂ.ಟಿ.ಯೋಗೇಶ್ ಹಾಗೂ ಉಪಾಧ್ಯಕ್ಷರಾಗಿ ಚಿಕ್ಕತಾಯಮ್ಮ ಅವರನ್ನು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಗ್ರಾಪಂ ಮುಖಂಡರು ಮತ್ತು ಆಡಳಿತ ಮಂಡಳಿ ಸದಸ್ಯರು ಅಭಿನಂದಿಸಿ ಗೌರವಿಸಿದರು.

ಇದೇ ವೇಳೆ ಗ್ರಾಪಂ ಸದಸ್ಯರಾದ ಎಂ.ಇ. ಯತೀಶ್‌ಕುಮಾರ್, ಮಧು ಕುಮಾರ್, ಎಂ.ಸಿ.ವೀರಯ್ಯ, ಯು.ಡಿ.ಚಂದ್ರಶೇಖರ್, ಕಾಳೇಗೌಡ ಇನ್ನಿತರರಿದ್ದರು.

ಕೃಷಿಕ ಸಮಾಜದ ಅಧ್ಯಕ್ಷರಾಗಿ ಎನ್.ಎಸ್.ಗಂಗಾಧರ್



ತಾಲೂಕು ಕೃಷಿಕ ಸಮಾಜದ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ನಾಟನಹಳ್ಳಿ ಎನ್.ಎಸ್.ಗಂಗಾಧರ್ ಹಾಗೂ ನೂತನ ಪಧಾದಿಕಾರಿಗಳನ್ನು ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಮುಖಂಡರು ಅಭಿನಂದಿಸಿದರು.

ಕೆ.ಆರ್.ಪೇಟೆ,ಡಿ.30– ತಾಲೂಕು ಕೃಷಿಕ ಸಮಾಜದ ನೂತನ ಅಧ್ಯಕ್ಷರಾಗಿ ನಾಟನಹಳ್ಳಿ ಎನ್.ಎಸ್.ಗಂಗಾಧರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೆಆರ್.ಪೇಟೆ ಪಟ್ಟಣದ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ನಡೆದ ಪದಾಧಿಕಾರಿಗಳ ಆಯ್ಕೆಯ ಚುನಾವಣೆಯಲ್ಲಿ ತಾಲೂಕು ಕೃಷಿಕ ಸಮಾಜದ ನೂತನ ಅಧ್ಯಕ್ಷರಾಗಿ ನಾಟನಹಳ್ಳಿ ಎನ್.ಎಸ್. ಗಂಗಾಧರ್, ಉಪಾಧ್ಯಕ್ಷರಾಗಿ ಎಸ್.ಎನ್. ಪ್ರಭಾಕರ್, ಪ್ರಧಾನ ಕಾರ್ಯದರ್ಶಿಯಾಗಿ ಆರ್.ಕೆ.ಜಗದೀಶ್, ಖಜಾಂಚಿಯಾಗಿ ಬಿ.ಸಿ. ಸ್ವಾಮೀಗೌಡ, ಜಿಲ್ಲಾ ಪ್ರತಿನಿಧಿಯಾಗಿ ಹೆತ್ತಗೋನಹಳ್ಳಿ ಹೆಚ್.ಜೆ. ನಾರಾಯಣಗೌಡ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ತಾಲೂಕು ಸಹಾಯಕ ಕೃಷಿ ನಿರ್ದೇಶಕರಾದ ಹೆಚ್.ಜೆ. ಸಂತೋಷ್ ಕುಮಾರ್ ಪ್ರಕಟಿಸಿದ್ದಾರೆ.

ನೂತನ ಪದಾದಿಕಾರಿಗಳನ್ನು ನಿರ್ದೇಶಕರಾದ ಕೆ.ಬಿ.ಈಶ್ವರಪ್ರಸಾದ್, ಎನ್.ಮರಿಸ್ವಾಮೀಗೌಡ, ರಾಮಸ್ವಾಮಿ, ಮುಖಂಡರಾದ ಕೆ.ಎಸ್.ಬಸವೇಗೌಡ, ಎನ್.ಕೆ. ವಿಜಯಕುಮಾರ್, ಎನ್.ಜೆ. ಹೇಮಂತ್ ಕುಮಾರ್(ತಮ್ಮಣ್ಣ), ಬೋರೇಗೌಡ, ಕರ್ನಾಟಕ ರಕ್ಷಣಾ ವೇದಿಕೆಯ ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಎಸ್.ವೇಣು, ತಾಲೂಕು ಕರವೇ ಅಧ್ಯಕ್ಷ ಟೆಂಪೋ ಶ್ರೀನಿವಾಸಗೌಡ, ಪುರಸಭಾ ಸದಸ್ಯ ಪ್ರಮೋದ್, ಅಗ್ರಹಾರ ಬಾಚಹಳ್ಳಿ ಸ್ವಾಮಿ, ಅಮ್ಮ ಶ್ರೀಧರ್, ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯರಾದ ಎ.ಎನ್.ಜಾನಕೀರಾಂ, ಬಿ.ಎಲ್. ತೇಜಸ್ವಿ ಕಿರಣ್, ಎಸ್.ಆರ್.ನವೀನ್ ಕುಮಾರ್, ಎ.ಆರ್.ರಘು, ಎ.ಎಸ್.ರಮೇಶ್, ಸಿ.ಎಸ್. ರಾಮಕೃಷ್ಣೇಗೌಡ, ಸೇರಿದಂತೆ ಹಲವು ಗಣ್ಯರು ಅಭಿನಂದಿಸಿದರು.

ವಿಕಲಚೇತನರ ಬಸ್ ಪಾಸ್ ಅವದಿ ವಿಸ್ತರಣೆ

ಮಂಡ್ಯ: ವಿಕಲಚೇತನರ ರಿಯಾಯಿತಿ ದರದ ಬಸ್ ಪಾಸ್‌ಗಳು ಡಿ.31ರವರೆಗೆ ಮಾನ್ಯತೆ ಇದ್ದು, ಅವುಗಳನ್ನು ಫೆ.28ರವರೆಗೆ ಬಳಸಲು ಅನುಮತಿ ನೀಡಲಾಗಿದೆ. 2025ನೇ ಸಾಲಿನ ವಿಕಲಚೇತನರ ನವೀಕರಣ ಮತ್ತು ಹೊಸ ಪಾಸುಗಳಿಗೆ ರೂ 660/– ಶುಲ್ಕ ನಿಗದಿಪಡಿಸಿದ್ದು, ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿ ನವೀಕರಣ ಮತ್ತು ಹೊಸ ಬಸ್ ಪಾಸುಗಳನ್ನು ಪಡೆಯಬಹುದೆಂದು ಮಂಡ್ಯ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಹರುಷದಾಯಕವಾಗಿರಲಿ...

ಅಂದು ಮಧ್ಯರಾತ್ರಿ 1 ಗಂಟೆಯೊಳಗೆ ಕಡ್ಡಾಯವಾಗಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಬೇಕು. ತಮ್ಮ ಅಂಗಡಿ–ಮುಂಗಟ್ಟುಗಳ ಮುಂದೆ ಸಿಸಿ ಕ್ಯಾಮರಾಗಳನ್ನು ಸುಸ್ಥಿತಿಯಲ್ಲಿರಿಸಬೇಕು. ಧ್ವನಿವರ್ಧಕ ಗಳನ್ನು ತಮ್ಮ ಪ್ರದೇಶಕ್ಕೆ ಸೀಮಿತವಾಗುವಂತೆ ಅಳವಡಿಸಿಕೊಂಡು ನಿರ್ದಿಷ್ಟಪಡಿಸಿದ ಡೆಸಿಬಲ್‌ಗಳನ್ನು ಮೀರದಂತೆ ಕಡಿಮೆ ಧ್ವನಿಯಲ್ಲಿ ಸಂಗೀತ ಕಾರ್ಯಕ್ರಮ ಏರ್ಪಡಿಸಬೇಕು. ಸಾಂಸ್ಕೃತಿಕ ಕಾರ್ಯಕ್ರಮದ ನೆಪದಲ್ಲಿ ಅಶ್ಲೀಲ, ಅರೆಬೆತ್ತಲೆ ಪ್ರದರ್ಶನ, ಮಾದಕ ವಸ್ತುಗಳ ಸೇವನೆ, ಜೂಜಾಟವನ್ನು ನಿಷೇಧಿಸಲಾಗಿದೆ. ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರನ್ನು ತಡೆದು ನಿಲ್ಲಿಸಿ, ಅವರ ಇಚ್ಛೆಗೆ ವಿರುದ್ಧವಾಗಿ ಶುಭ ಕೋರುವ ನೆಪದಲ್ಲಿ ಕಿರಿಕಿರಿ ಉಂಟು ಮಾಡಿದಲ್ಲಿ ಕಟ್ಟುನಿಟ್ಟಿನ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸೀಮಾ ಲಾಟ್ಕರ್ ಎಚ್ಚರಿಸಿದ್ದಾರೆ.

ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟಕ್ಕೆ ಡಿ.31ರಂದು ರಾತ್ರಿ 7 ಗಂಟೆಯಿಂದ ಉತ್ತನಹಳ್ಳಿ ಕ್ರಾಸ್‌ಗೆ, ದೈವೀವನ ಗೇಟ್, ಚಾಮುಂಡಿಬೆಟ್ಟ ಪಾದದ ಗೇಟ್, ಲಲಿತಮಹಲ್ ಗೇಟ್ ಮೂಲಕ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ತಾವರೆಕಟ್ಟೆ ಗೇಟ್ ಮುಖಾಂತರ ಅಂದು ರಾತ್ರಿ 8 ಗಂಟೆ ನಂತರ ಪ್ರವೇಶವನ್ನು ನಿಷೇಧಿಸಲಾಗಿದೆ. ಬೆಟ್ಟಕ್ಕೆ ಯಾವುದೇ ರೀತಿಯ ಊಟ, ಮದ್ಯದ ಬಾಟಲಿಗಳನ್ನು ಕೊಂಡೊಯ್ಯಬಾರದು. ರಾತ್ರಿ 9 ಗಂಟೆಯ ನಂತರ ಸಾರ್ವಜನಿಕರು ಚಾಮುಂಡಿಬೆಟ್ಟದಿಂದ ನಿರ್ಗಮಿಸುವಂತೆ ಸೂಚಿಸಲಾಗಿದೆ. ಇದು ಚಾಮುಂಡಿಬೆಟ್ಟದಲ್ಲಿ ವಾಸಿಸುವವರಿಗೆ ಮತ್ತು ಸುತ್ತಮುತ್ತಲಿನ ನಿವಾಸಿಗಳಿಗೆ ಅನ್ವಯಿಸುವುದಿಲ್ಲ. ಚಾಮುಂಡಿಬೆಟ್ಟದಿಂದ ರಾತ್ರಿ 9 ಗಂಟೆ ನಂತರ ವಾಪಸ್ ಬರುವವರು ತಾವರೆಕಟ್ಟೆ ಗೇಟ್ ಮೂಲಕವೇ ಬರಬೇಕು ಎಂದು ಸೂಚಿಸಿದ್ದಾರೆ.

ರಸ್ತೆ, ಪಾರ್ಕ್, ವಾಹನಗಳಲ್ಲಿ ಕುಳಿತು ಮದ್ಯಪಾನ ಮಾಡುವುದು, ಸೋಶಿಯಲ್ ಮೀಡಿಯಾ ಮುಖಾಂತರ ಅಪಪ್ರಚಾರದಂತಹ ಪೋಸ್ಟ್ ಹಾಕುವುದು, ಸಾಮಾಜಿಕ ಜಾಲತಾಣಗಳ ಮೂಲಕ ಉಡುಗೊರೆ ನೀಡುವ ಅಥವಾ ಉಡುಗೊರೆ ಬಂದಿರುವ ನೆಪದಲ್ಲಿ ಕಳುಹಿಸುವ ಯಾವುದೇ ಅಪರಿಚಿತ ಲಿಂಕ್‌ಗಳಿಗೆ ಮರುಳಾಗಿ ಡಿಜಿಟಲ್ ಮೋಸಕ್ಕೆ ಒಳಗಾಗಬಾರದು. ಸಾರ್ವಜನಿಕರಿಗೆ ಶುಭ ಕೋರುವ ನೆಪದಲ್ಲಿ ಅಸಭ್ಯವಾಗಿ ವರ್ತಿಸುವವರನ್ನು ತಡೆಯಲು ಮೈಸೂರು ನಗರಾದ್ಯಂತ ಇನ್‌ಸ್ಪೆಕ್ಟರ್‌ಗಳ ನೇತೃತ್ವದಲ್ಲಿ ವಿಶೇಷ ಕಾರ್ಯಪಡೆ ರಚಿಸಲಾಗಿದ್ದು, ಅವರು ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಿದ್ದಾರೆ. ಮಹಿಳೆಯರ ರಕ್ಷಣೆ ಹಿತದೃಷ್ಟಿಯಿಂದ ಮಹಿಳಾ ಅಧಿಕಾರಿಗಳು, ಸಿಬ್ಬಂದಿಗಳನ್ನೊಳಗೊಂಡ ಸುರಕ್ಷತಾ ಪಿಂಕ್ ಗರುಡ(ಚಾಮುಂಡಿ ಪಡೆ)ಗಳು ಅಂದು ರಾತ್ರಿ ನಿರಂತರ ಗಸ್ತು ನಡೆಸಲಿವೆ ಎಂದೂ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಮೈಸೂರು ನಗರಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸಿಸಿ ಕ್ಯಾಮರಾಗಳ ಮೂಲಕ ನಿಗಾ ವಹಿಸಿ ಅಸಭ್ಯವಾಗಿ ವರ್ತಿಸುವವರ ವಿರುದ್ಧ ಕ್ರಮಕ್ಕೆ ಸೂಚನೆ ನೀಡಲಾಗಿದೆ. ವಾಹನಗಳನ್ನು ವ್ಹೀಲಿಂಗ್ ಮತ್ತು ಡ್ರ್ಯಾಗ್ ರೇಸ್ ಮಾಡುವುದು, ಕರ್ಕಶ ಶಬ್ದ ಮಾಡುವುದನ್ನು ತಡೆಗಟ್ಟಲು ಸಂಚಾರ ಪೊಲೀಸರನ್ನು ಒಳಗೊಂಡ ಕ್ಷಿಪ್ರ ಕಾರ್ಯಪಡೆ ರಚಿಸಲಾಗಿದ್ದು, ಕಾನೂನು ಉಲ್ಲಂಘಿಸುವ ಪ್ರಕರಣಗಳು ಕಂಡುಬಂದಲ್ಲಿ ಅಂತಹವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ವಹಿಸಲಾಗುವುದು. ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡುವವರು ಮತ್ತು ಕಿಡಿಗೇಡಿಗಳ ಬಗ್ಗೆ ನಿಗಾ ವಹಿಸಲು ಚೆಕ್‌ಪೋಸ್ಟ್‌ಗಳನ್ನು ತೆರೆಯುವುದರ ಜೊತೆಗೆ ಅಹಿತಕರ ಘಟನೆಗಳು ನಡೆಯದಂತೆ 112 ವಾಹನ, ಹೈವೇ ಪೆಟ್ರೋಲ್ ವಾಹನಗಳ ಗಸ್ತು ಕಾರ್ಯಾಚರಣೆಗೆ ಸೂಚನೆ ನೀಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಡಿ.31ರ ರಾತ್ರಿ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ನಾಲ್ವರು ಡಿಸಿಪಿಗಳು, 12 ಮಂದಿ ಎಸಿಪಿಗಳು, 32 ಪೊಲೀಸ್ ಇನ್‌ಸ್ಪೆಕ್ಟರ್‌ಗಳು, 53 ಸಬ್‌ಇನ್‌ಸ್ಪೆಕ್ಟರ್‌ಗಳು, 112 ಎಎಸ್‌ಐಗಳು, 895 ಪೊಲೀಸ್ ಸಿಬ್ಬಂದಿ, 79 ಮಹಿಳಾ ಸಿಬ್ಬಂದಿ, 8 ಸಿಎಆರ್ ತುಕಡಿಗಳು, 4 ಕೆಎಸ್‌ಆರ್‌ಪಿ ತುಕಡಿ, 2 ಕಮಾಂಡೋ ಪಡೆ, 2 ಆಂಟಿ ಸಬೋಟೆಕ್ ಚೆಕ್‌ಟೆಂಟ್ ಹಾಗೂ 1 ಶ್ವಾನದಳದ ತಂಡವನ್ನು ನಿಯೋಜಿಸಲಾಗಿದೆ. ಸಾರ್ವಜನಿಕರು ಅಂದು ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಹೊಸ ವರ್ಷವನ್ನು ಆಚರಿಸುವಂತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಸಿಐಡಿ ತನಿಖೆಗೆ ವಹಿಸಿದ ಸರ್ಕಾರ

ಸಚಿವರ ಹೆಸರು ಸಹ ಇಲ್ಲ ಎಂಬುದಾಗಿ ಇಲಾಖಾ ಅಧಿಕಾರಿಗಳು ಹೇಳಿದ್ದಾರೆ, ಸಚಿವರ ಹೆಸರನ್ನು ಎಳೆದು ತಂದು, ಸರ್ಕಾರಕ್ಕೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ, ಸತ್ಯಾಸತ್ಯತೆ ಹೊರ ಬರಲಿ ಎಂಬ ದೃಷ್ಟಿಯಿಂದ ಮುಖ್ಯಮಂತ್ರಿ ಜೊತೆ ಚರ್ಚಿಸಿ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದೆ ಎಂದರು. ತನಿಖಾ ವರದಿ ಬಂದ ನಂತರ ಸತ್ಯ ಏನೆಂಬುದು ತಿಳಿಯುತ್ತದೆ. ಸಚಿವ ಸ್ಥಾನಕ್ಕೆ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡುವ ಅಗತ್ಯ ಇಲ್ಲ. ಅನಾವಶ್ಯಕವಾಗಿ ರಾಜೀನಾಮೆಗೆ ಒತ್ತಾಯಿಸುತ್ತಿದ್ದಾರೆ. ಬಿಜೆಪಿ ಒತ್ತಾಯಿಸಿದಂತೆ ಎಲ್ಲಾ ಪ್ರಕರಣಗಳನ್ನೂ ಸಿಬಿಐ ತನಿಖೆಗೆ ವಹಿಸಲು ಸಾಧ್ಯವಿಲ್ಲ, ಸಿಐಡಿ ಸಮರ್ಥವಾಗಿದೆ. ಅನೇಕ ಪ್ರಕರಣಗಳಲ್ಲಿ ತನಿಖಾ ವರದಿ ಬಂದಿಲ್ಲವೇ, ಬಿಜೆಪಿ ಹೇಳಿದ್ದನ್ನೆಲ್ಲಾ ಕೇಳಲು ಸಾಧ್ಯವಿಲ್ಲ. ಸಕಾರಾತ್ಮಕ ಸಲಹೆ, ಸೂಚನೆ ನೀಡಿದರೆ ಕೇಳುತ್ತೇವೆ. ಎಲ್ಲದರಲ್ಲೂ ರಾಜಕೀಯ ಮಾಡಿದರೆ ಕೇಳುವುದಿಲ್ಲ. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಶಾಸಕ ಸಿ.ಟಿ.ರವಿ ಅವಾಚ್ಯ ಪದ ಬಳಕೆ ಪ್ರಕರಣದ ಸತ್ಯಾಸತ್ಯತೆ ಹೊರ ಬರಬೇಕಿದೆ. ಸಿಐಡಿ ತನಿಖೆ ಪ್ರಾರಂಭಿಸಿದೆ.

ನಾನು ರಾಜೀನಾಮೆ ಕೊಡಲ್ಲ

ಸರಿಯೇ ನಾನು ರಾಜೀನಾಮೆ ಕೊಡಲ್ಲ ಅಂದ್ರೆ ಕೊಡಲ್ಲ ಎಂದು ಪ್ರಿಯಾಂಕ್ ಖರ್ಗೆ ಖಡಾಖಂಡಿತ ವಾಗಿ ಹೇಳಿದ್ದಾರೆ. ನನ್ನ ವಿರುದ್ಧ ಆರೋಪಕ್ಕೆ ದಾಖಲೆ ಇದ್ದರೆ ಕೊಡಲಿ ಎಂದು ವಿಪಕ್ಷಗಳಿಗೆ ಸವಾಲು ಹಾಕಿದ್ದಾರೆ.

ಪ್ರಿಯಾಂಕ್ ಖರ್ಗೆ ಆಪ್ತ ರಾಜು ಕಪನೂರು ಹೆಸರು ಬರೆದಿಟ್ಟು ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹೀಗಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಿಯಾಂಕ್ ಖರ್ಗೆ ರಾಜೀನಾಮೆ ಕೊಡಬೇಕು ಎಂದು ಬಿಜೆಪಿ ಒತ್ತಾಯಿಸುತ್ತಿದೆ. ಆದರೆ ರಾಜು ಕಾಂಗ್ರೆಸ್ ಸೇರುವ ಮೊದಲು ಬಿಜೆಪಿಯಲ್ಲಿದ್ದವರು ಎಂದು ಪ್ರಿಯಾಂಕ್ ಹೇಳಿದ್ದಾರೆ. ನನ್ನ ರಾಜೀನಾಮೆ ಕೇಳಲು ವಿಜಯೇಂದ್ರ ಸುಪ್ರೀಂಕೋರ್ಟಾ? ವಿಜಯೇಂದ್ರ ವಿರುದ್ಧವೂ ಮನಿ ಲ್ಯಾಂಡರಿಂಗ್ ಪ್ರಕರಣವಿದೆ. ಅವರು ರಾಜೀನಾಮೆ ಕೊಟ್ಟರಾ? ಕಲಬುರಗಿಗೆ ಮುತ್ತಿಗೆ ಹಾಕಲು ಎಷ್ಟು ಜನ ಬರುತ್ತೀರಿ ಎಂದು ಹೇಳಿ, ಅಷ್ಟು ಜನಕ್ಕೆ ಟೀ ವ್ಯವಸ್ಥೆ ಮಾಡುತ್ತೇವೆ ಎಂದೂ ಪ್ರಿಯಾಂಕ್ ವ್ಯಂಗ್ಯ ಮಾಡಿದ್ದಾರೆ. ಬಿಜೆಪಿಯಲ್ಲೇ ವಿಜಯೇಂದ್ರ ಮಾತಿಗೆ ಬೆಲೆಯಿಲ್ಲ. ಇನ್ನು ನಾವ್ಯಾಕೆ ಬೆಲೆ ಕೊಡಬೇಕು? ಎಂದು ಪ್ರಶ್ನಿಸಿದ್ದಾರೆ.

ಸುಪಾರಿ ಕಿಲ್ಲರ್ ರೀತಿ ವರ್ತಿಸಿದರು!

ಫೇಕ್ ಎನ್‌ಕೌಂಟರ್ ಸಂಚು ಆರೋಪ ಮಾಡಿದ್ದಾರೆ. ಸದನದ ವ್ಯಾಪ್ತಿಯಲ್ಲಿ ನಡೆದ ಘಟನೆ ಬಗ್ಗೆ ತನಿಖೆ ನಡೆಸುವ ಅಧಿಕಾರ ಸಿಐಡಿಗಿಲ್ಲ. ಘಟನೆ ನಡೆದ ಸ್ಥಳ ಸಿಐಡಿ ವ್ಯಾಪ್ತಿಗೂ ಬರುವುದಿಲ್ಲ. ನನ್ನ ಬಂಧನ ಅಕ್ರಮ, ಕಾನೂನು ವಿರೋಧಿ ಅಂತ ಹೈಕೋರ್ಟ್ ಅಭಿಪ್ರಾಯ ಪಟ್ಟಿದೆ ಎಂದು ಸುದೀರ್ಘ ದೂರಿನಲ್ಲಿ ಹಲವು ಅಂಶಗಳನ್ನು ಉಲ್ಲೇಖಿಸಿದ್ದಾರೆ. ಇನ್ನು ಗವರ್ನರ್ ಭೇಟಿ ಬಳಿಕ ಮಾತಾಡಿದ್ದ ಸಿ.ಟಿ.ರವಿ, ನನ್ನ ಕಬ್ಬಿನ ಗದ್ದೆ, ಕ್ರಷರ್‌ಗೆ ಕರ್ಕೊಂಡು ಹೋಗಿ ಎನ್ ಕೌಂಟರ್ ಮಾಡಲು ಯತ್ನಿಸಿದ್ದರು. ಒಂದೋ ಹತ್ಯೆ ಮಾಡಬೇಕು. ಇಲ್ಲವೇ ಆತ್ಮಹತ್ಯೆಗೆ ಶರಣಾಗಬೇಕು ಅನ್ನುವಂತೆ ಕಾಟ ಕೊಟ್ಟರು ಎಂದು ಆರೋಪಿಸಿದ್ದಾರೆ. ಇತ್ತ ಎಂಎಲ್‌ಸಿ ರವಿ ಕುಮಾರ್ ಸಹ ಆಕ್ರೋಶ ಹೊರ ಹಾಕಿದ್ದಾರೆ.

ಮೂಲಸೌಲಭ್ಯ ಕಲ್ಪಿಸಿ

ಅಂದು (ಬುಧವಾರ) ಮಾತ್ರ ಆಟೋಗಳಿಗೆ ಚಾಮುಂಡಿ ಬೆಟ್ಟಕ್ಕೆ ತೆರಳದಂತೆ ನಿರ್ಬಂಧ ವಿಧಿಸುವಂತೆಯೂ ಸೂಚನೆ ನೀಡಿದರು. ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಭಕ್ತರ ಅಗತ್ಯಕ್ಕೆ ತಕ್ಕಂತೆ ಸಾರಿಗೆ ಬಸ್‌ಗಳನ್ನು ಓಡಿಸಿ, ಚಾಮುಂಡಿಬೆಟ್ಟಕ್ಕೆ ತೆರಳಲು ಅನುವು ಮಾಡಿಕೊಡಬೇಕು. ನಗರ ಮತ್ತು ಗ್ರಾಮಾಂತರ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣಗಳಿಂದ ನೇರವಾಗಿ ಚಾಮುಂಡಿ ಬೆಟ್ಟಕ್ಕೆ ಬಸ್ ಓಡಿಸಿ ಭಕ್ತರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಹೊಸ ವರ್ಷದ ದಿನ ಸಾರ್ವಜನಿಕರಿಗೆ ಬೆಳಗ್ಗೆ 6.30 ಗಂಟೆಯಿಂದಲೇ ತಾವರೆಕಟ್ಟೆ ಬಳಿ ಗೇಟ್ ತೆಗೆದು ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಬೆಟ್ಟದಲ್ಲಿ ವಾಹನ ನಿಲುಗಡೆ ಸ್ಥಳದಲ್ಲಿ ಪಾರ್ಕ್ ಮಾಡಿ, ನಡೆದುಕೊಂಡು ದೇವಸ್ಥಾನಕ್ಕೆ ಬರುವಂತೆ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಇದೇ ಸಂದರ್ಭ ಸೂಚಿಸಿದರು.

ಚಾಮುಂಡಿಬೆಟ್ಟದಲ್ಲಿ ಸ್ವಚ್ಛತೆ, ಕುಡಿಯುವ ನೀರು, ಶೌಚಾಲಯ ಹಾಗೂ ಮೆಟ್ಟಿಲುಗಳಲ್ಲಿ ತಾತ್ಕಾಲಿಕ ಮೊಬೈಲ್ ಶೌಚಾಲಯಗಳನ್ನು ಸ್ಥಾಪಿಸಿ, ಭಕ್ತರಿಗೆ ಅನುಕೂಲ ಮಾಡಿಕೊಡಬೇಕು. ಹಾಗೆಯೇ ದಾಸೋಹ ಭವನದಲ್ಲಿ ದಾಸೋಹಕ್ಕೆ ವ್ಯವಸ್ಥೆ ಮಾಡಿ ಸಂಜೆವರೆಗೂ ಪ್ರಸಾದ ವಿನಿಯೋಗಿಸುವ ವ್ಯವಸ್ಥೆ ಮಾಡಬೇಕು. ಅಗ್ನಿಶಾಮಕ ದಳ, ಆಂಬುಲೆನ್ಸ್ ವ್ಯವಸ್ಥೆ ಮಾಡಿ ಭಕ್ತರ ಆರೋಗ್ಯದ ಕಡೆ ಗಮನ ಹರಿಸಬೇಕು. ಬೆಟ್ಟದಲ್ಲಿ ತಯಾರು ಮಾಡುವ ಲಾಡು ಪ್ರಸಾದದ ಗುಣಮಟ್ಟವನ್ನು ಪರೀಕ್ಷಿಸಿ ವಿತರಿಸಬೇಕು ಎಂದು ಅವರು ಇದೇ ಸಂದರ್ಭ ಸಲಹೆ ನೀಡಿ ದರು. ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಜೆ. ರೂಪ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮೊಟ್ಟೆ ದಾಳಿ!


ಸುಮಾರು 14 ಪ್ರಕರಣಗಳು ದಾಖಲಾಗಿದ್ದವು. ಅದರಲ್ಲಿ 9 ಪ್ರಕರಣಗಳನ್ನು ಭೇದಿಸಿ ಆರೋಪಿಗಳನ್ನು ಬಂಧಿಸಲಾಗಿತ್ತು. ಅದಾದ ಬಳಿಕ ದರೋಡೆ ಕಡಿಮೆಯಾಗಿದ್ದವು.

ರಾಮನಗರ ಹಾಗೂ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ 26 ದರೋಡೆ ಪ್ರಕರಣಗಳು ದಾಖಲಾಗಿದ್ದವು. ಅದರಲ್ಲಿ 20 ಪ್ರಕರಣಗಳು ಪತ್ತೆಯಾಗಿವೆ. ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲೇ 12 ಪ್ರಕರಣಗಳು ನಡೆದಿದ್ದವು. ಅದರಲ್ಲಿ 11 ಪ್ರಕರಣಗಳನ್ನು ಭೇದಿಸಲಾಗಿದ್ದು, ಆರೋಪಿಗಳ ಬಂಧಿಸಿದ ನಂತರ ಯಾವುದೇ ಪ್ರಕರಣ ವರದಿಯಾಗಿರಲಿಲ್ಲ. ಆದರೆ ಡಿ.23ರ ರಾತ್ರಿ ನಡೆದ ಘಟನೆ ಗಮನಿಸಿದರೆ ಹಳೇ ದರೋಡೆಕೋರರ ಜೊತೆಗೆ ಮೊಟ್ಟೆ ಗ್ಯಾಂಗ್ ಹುಟ್ಟಿಕೊಂಡಿದೆ ಎನ್ನಲಾಗುತ್ತಿದೆ.

ಹೆದ್ದಾರಿಯಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಹೆದ್ದಾರಿ ಪ್ರಾಧಿಕಾರವೂ ಯಾವುದೇ ಮೂಲ ಸೌಕರ್ಯ ಕಲ್ಪಿಸುವುದಿರಲಿ, ಕನಿಷ್ಠ ಪಕ್ಷ ಶೌಚಾಲಯಗಳನ್ನು ನಿರ್ಮಿಸಿಲ್ಲ. ಇದು ದರೋಡೆಗೆ ಅನುಕೂಲ ಮಾಡಿಕೊಡುತ್ತಿದೆ. ಹೆದ್ದಾರಿಯ ಬಳಿ ಶೌಚಾಲಯಕ್ಕೆಂದು ವಾಹನ ಸವಾರರು ನಿಲ್ಲಿಸಿದಾಗ ಏಕಾಏಕಿ ದರೋಡೆಕೋರರು ದಾಳಿ ಮಾಡುವ ಘಟನೆಗಳು ನಡೆದಿವೆ. ಅಲ್ಲದೆ, ಹೆದ್ದಾರಿ ಮಧ್ಯೆ ವಿಶ್ರಾಂತಿಗಾಗಿ ಕಾರು ನಿಲ್ಲಿಸಿದಾಗಲೂ ದಾಳಿ ಮಾಡಿದ ಪ್ರಕರಣಗಳು ಇನ್ನೂ ಮಾಸಿಲ್ಲ. ಆದ್ದರಿಂದ ಹೆದ್ದಾರಿ ಪ್ರಾಧಿಕಾರ ಕೂಡಲೇ ಅಗತ್ಯವಿರುವ ಕಡೆ ಶೌಚಾಲಯಗಳ ನಿರ್ಮಿಸುವ ಮೂಲಕ ವಾಹನ ಸವಾರರಿಗೆ ಭದ್ರತೆ ಕಲ್ಪಿಸಬೇಕಾಗಿದೆ.


ಸರ್ವೀಸ್ ರಸ್ತೆಗಳಿಗಿಲ್ಲ ವಿದ್ಯುತ್ ದೀಪ: ಹೆದ್ದಾರಿಯ ಹಾಗೂ ಸರ್ವೀಸ್ ರಸ್ತೆಯ ಬಹುತೇಕ ಕಡೆ ವಿದ್ಯುತ್ ದೀಪಗಳ ಅಳವಡಿಸದೆ ಇರುವುದರಿಂದ ಕತ್ತಲು ಆವರಿಸಿದೆ. ಅಂಡರ್‌ಪಾಸ್‌ಗಳಲ್ಲೂ ವಿದ್ಯುತ್ ದೀಪ ಗಳಿಲ್ಲ. ಇದರಿಂದ ವಾಹನ ಸವಾರರು ಆತಂಕದಿಂದಲೇ ಸಂಚರಿಸಬೇಕಾದ ಅನಿವಾರ್ಯತೆ ಇದೆ. ಕತ್ತಲು ಇರುವ ಕಡೆಯಲ್ಲೇ ದರೋಡೆ ಕೋರರು ಅಡಗಿ ಕುಳಿತು ಕಾರು, ಬೈಕ್‌ಗಳನ್ನು ಟಾರ್ಗೆಟ್ ಮಾಡಿಕೊಂಡು ದರೋಡೆ ಮಾಡುತ್ತಿದ್ದಾರೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸುತ್ತಾರೆ.

ಹಾಸ್ಯ ಕಲಾವಿದೆ ಸುಧಾ ಬರಗೂರು ಪತಿ ಜಯಪ್ರಕಾಶ್ ಬರಗೂರು ಇನ್ನಿಲ್ಲ



ಬೆಂಗಳೂರು: ಪ್ರಖ್ಯಾತ ವಾಗ್ಮಿ, ಹಾಸ್ಯ ಭಾಷಣದಿಂದಲೇ ಜನಪ್ರಿಯರಾಗಿದ್ದ ಸುಧಾ ಬರಗೂರು ಅವರ ಪತಿ ಜಯಪ್ರಕಾಶ್ ಬರಗೂರು ನಿಧನರಾಗಿದ್ದಾರೆ. ಬಹಳ ಕಾಲದಿಂದ ಅನಾರೋಗ್ಯದಲ್ಲಿದ್ದ ಜಯಪ್ರಕಾಶ್ ಬರಗೂರು ಸೋಮವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 67 ವರ್ಷ ವಯಸ್ಸಾಗಿತ್ತು. ಜಯಪ್ರಕಾಶ್ ಬರಗೂರು ಅವರಿಗೆ ಕೆಲವು ವರ್ಷಗಳಿಂದ ಹೃದಯ ಸಮಸ್ಯೆ ಬಾಧಿಸುತ್ತಿತ್ತು. ಜಯದೇವ ಆಸ್ಪತ್ರೆಯ ನಿರ್ದೇಶಕರಾಗಿದ್ದ ಹಾಗೂ ಹಾಲಿ ಸಂಸದರಾಗಿರುವ ಡಾ.ಸಿಎನ್ ಮಂಜುನಾಥ್ ಇವರಿಗೆ ಶಸ್ತ್ರಚಿಕಿತ್ಸೆಯನ್ನೂ ಮಾಡಿದ್ದರು. ಈ ಬಗ್ಗೆ ಸ್ವತಃ ಸುಧಾ ಬರಗೂರು ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮದಲ್ಲಿ ಹೇಳಿದ್ದರು. ಆದರೆ, ಹೃದಯ ಸಮಸ್ಯೆಯ ಕಾರಣದಿಂದಾಗಿಯೇ ಸಾವು ಕಂಡಿದ್ದಾರೆಯೇ ಎನ್ನುವುದು ಇನ್ನೂ ಗೊತ್ತಾಗಿಲ್ಲ. ಜಯಪ್ರಕಾಶ್ ಬರಗೂರು ಅವರು ಪತ್ನಿ, ಓರ್ವ ಪುತ್ರಿ ಹಾಗೂ ಬಂಧುಬಳಗವನ್ನು ಅಗಲಿದ್ದಾರೆ.

ಕೆಎಎಸ್ ಪರೀಕ್ಷೆ ಪಾಸ್ ಮಾಡಲು 50 ಲಕ್ಷ ರೂ. ಲಂಚ ಪಡೆದ ಆರೋಪ; ರಾಜ್ಯ ರೈಲ್ವೆ ಅಧಿಕಾರಿ ಬಂಧನ



ಬೆಂಗಳೂರು: ಕರ್ನಾಟಕ ಆಡಳಿತ ಸೇವೆ (ಕೆಎಎಸ್) ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಸಹಾಯ ಮಾಡುವುದಾಗಿ ಹೇಳಿ ಅಭ್ಯರ್ಥಿಗಳಿಂದ 50 ಲಕ್ಷ ರೂ. ವಸೂಲಿ ಮಾಡಿದ ಆರೋಪದ ಮೇಲೆ ಪೊಲೀಸರು ರೈಲ್ವೆ ಟಿಕೆಟ್ ಮುಖ್ಯ ಇನ್‌ಸ್ಪೆಕ್ಟರ್‌ನನ್ನು ಬಂಧಿಸಿದ್ದಾರೆ.

ಆರೋಪಿಯನ್ನು 49 ವರ್ಷದ ಗೋವಿಂದ ರಾಜು ಎಂದು ಗುರುತಿಸಲಾಗಿದ್ದು, ನೈಋತ್ಯ ರೈಲ್ವೆಯಲ್ಲಿ ರೈಲ್ವೆ ಟಿಕೆಟ್ ಮುಖ್ಯ ಇನ್‌ಸ್ಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಜಯನಗರ ಪೊಲೀಸರು ಬಿಎನ್‌ಎಸ್ ಕಾಯ್ದೆಯ ಸೆಕ್ಷನ್‌ಗಳಾದ 318 (4), 61 (1) (ಎ), ಮತ್ತು 3 (5) ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. ಖಚಿತ ಮಾಹಿತಿ ಮೇರೆಗೆ ಆರೋಪಿ ಗೋವಿಂದರಾಜು ಹಾಗೂ ಇತರರ ವಿರುದ್ಧ ವಿಜಯನಗರ ಪೊಲೀಸ್ ಠಾಣೆಯ ಪಿಎಸ್‌ಐ ಭೀಮಾಶಂಕರ ಹೇರೂರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು. ಉಪ ಪೊಲೀಸ್ ಆಯುಕ್ತ (ಪಶ್ಚಿಮ) ಎಸ್.ಗಿರೀಶ್ ಮಾತನಾಡಿ, ಪಿಎಸ್‌ಐ ಭೀಮಾ ಶಂಕರ ಹೇರೂರು ಮತ್ತು ಹೆಡ್ ಕಾನ್ ಸ್ಟೆಬಲ್ ಗಿರೀಶ್ ಕುಮಾರ್ ಟಿ.ಎನ್ ಅವರು ಮೂಲದಿಂದ ಮಾಹಿತಿ ಪಡೆದಿದ್ದಾರೆ. ನೈಋತ್ಯ ರೈಲ್ವೆಯಲ್ಲಿ ಮುಖ್ಯ ಟಿಕೆಟ್ ಇನ್‌ಪೆಕ್ಟರ್ ಆಗಿ ಕೆಲಸ ಮಾಡು ತ್ತಿರುವ ಗೋವಿಂದರಾಜು ಕೆಎಎಸ್, ಪಿಡಿಒ, ಗ್ರಾಮ ಲೆಕ್ಕಾಧಿಕಾರಿ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳನ್ನು ಮಧ್ಯವರ್ತಿಗಳ ಮೂಲಕ ಸಂಪರ್ಕಿಸುತ್ತಿದ್ದರು. ಹಣ ನೀಡಿದರೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಸಹಾಯ ಮಾಡುವುದಾಗಿ ಭರವಸೆ ನೀಡುತ್ತಿದ್ದರು ಎಂದು ತಿಳಿಸಿದ್ದಾರೆ. ಈ ಸುಳಿವು ದೊರೆತ ಮೇಲೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದು, ಮಾಹಿತಿ ದೃಢೀಕರಿಸಿ ಆರೋಪಿಗಳನ್ನು ಪತ್ತೆ ಹಚ್ಚಿ ತನಿಖೆ ನಡೆಸುವಂತೆ ಸೂಚನೆ ನೀಡಲಾಗಿತ್ತು. ಡಿಸೆಂಬರ್ 28ರಂದು ರಾತ್ರಿ 9 ಗಂಟೆ ಸುಮಾರಿಗೆ ವಿಜಯನಗರ 4ನೇ ಕ್ರಾಸ್‌ನಲ್ಲಿರುವ ರಮೇಶ್ ಎಂಬುವವರ ನಿವಾಸದಲ್ಲಿ ಆರೋಪಿ ಗೋವಿಂದರಾಜು ಇರುವುದು ತಿಳಿದು ಬಂದಿದೆ. ನಂತರ ಸ್ಥಳಕ್ಕಾಗಮಿಸಿದ ಪಿಎಸ್‌ಐ ಭೀಮಾಶಂಕರ್ ಮತ್ತು ಗಿರೀಶ್ ಕುಮಾರ್, ರಮೇಶ್ ಅವರ ಮನೆಯಿಂದ ಹೋಗುತ್ತಿದ್ದ ಗೋವಿಂದರಾಜುನನ್ನು ಹಿಂಬಾಲಿಸಿ, ಬಂಧಿಸಿದ್ದಾರೆ ಎಂದು ಡಿಸಿಪಿ ತಿಳಿಸಿದ್ದಾರೆ.

ಮೊಬೈಲ್ ಫೋನ್ ತೋರಿಸಲು ಕೇಳಿದಾಗ, ಗೋವಿಂದರಾಜು ಪರಾರಿಯಾಗಲು ಯತ್ನಿಸಿದ್ದಾರೆ. ಪ್ರಾಥಮಿಕ ವಿಚಾರಣೆಯಲ್ಲಿ, ಅವರ ಬಳಿ ನಾಲ್ಕು ಮೊಬೈಲ್ ಫೋನ್‌ಗಳು ಇರುವುದು ಕಂಡುಬಂದಿದೆ. ಈ ಬಗ್ಗೆ ಪ್ರಶ್ನಿಸಿದಾಗ ಸರಿಯಾದ ಉತ್ತರ ನೀಡಿಲ್ಲ. ಹೆಚ್ಚಿನ ತನಿಖೆಗಾಗಿ ಅವರನ್ನು ಠಾಣೆಗೆ ಕರೆದೊಯ್ಯಲಾಗಿದೆ ಮತ್ತು ವಿಚಾರಣೆ ವೇಳೆ 2018ರಲ್ಲಿ ಸಿಸಿಬಿ ಕಚೇರಿಯಲ್ಲಿ ದಾಖಲಾಗಿರುವ ಪರೀಕ್ಷಾ ವಂಚನೆ ಪ್ರಕರಣದಲ್ಲಿ ಗೋವಿಂದರಾಜು ಭಾಗಿಯಾಗಿರುವುದು ಬೆಳಕಿಗೆ ಬಂದಿದೆ.

ಮಧ್ಯವರ್ತಿಗಳ ಮೂಲಕ ಪಿಡಿಒ ಮತ್ತು ಕೆಎಎಸ್ ಪೂರ್ವಭಾವಿ ಪರೀಕ್ಷೆಗಳ ಅಭ್ಯರ್ಥಿಗಳನ್ನು ಸಂಪರ್ಕಿಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ನೆರವಾಗುವುದಾಗಿ ಭರವಸೆ ನೀಡಿದ್ದಾರೆ. ಪಿಡಿಒ ಹುದ್ದೆಗಳಿಗೆ 25 ಲಕ್ಷ ಮತ್ತು ಕೆಎಎಸ್ ಪೂರ್ವಭಾವಿ ಪರೀಕ್ಷೆಗೆ 50 ಲಕ್ಷ ರೂ. ನಿಗದಿ ಮಾಡಿದ್ದಾಗಿ ತಿಳಿದುಬಂದಿದೆ.

ಒಎಂಆರ್ ಶೀಟ್‌ನಲ್ಲಿ ತಮಗೆ ತಿಳಿದ ಉತ್ತರ ಗಳನ್ನು ಭರ್ತಿ ಮಾಡಿ, ಉಳಿದವುಗಳನ್ನು ಖಾಲಿ ಬಿಡುವಂತೆ ಸೂಚಿಸಿ, ನಂತರ ಸರಿಯಾದ ಉತ್ತರಗಳನ್ನು ಭರ್ತಿ ಮಾಡುವುದಾಗಿ ಭರವಸೆ ನೀಡಿ ದ್ದಾರೆ. ಆರೋಪಿ ಅಭ್ಯರ್ಥಿಗಳ ಪ್ರಮಾಣಪತ್ರಗಳು, ಪ್ರವೇಶ ಕಾರ್ಡ್‌ಗಳು ಮತ್ತು ಚೆಕ್‌ಗಳನ್ನು ಸಂಗ್ರಹಿ ಸುತ್ತಿದ್ದರು. ಫೋನ್‌ಗಳಲ್ಲಿ ಒಂದನ್ನು ಪರಿಶೀಲಿಸಿದಾಗ, ಅದರಲ್ಲಿ 46 ಹೆಸರುಗಳು ಮತ್ತು ಇತರ ದಾಖಲೆಗಳು ಪತ್ತೆಯಾಗಿವೆ ಎಂದು ಡಿಸಿಪಿ ತಿಳಿಸಿದ್ದಾರೆ. ವಿಜಯನಗರದಲ್ಲಿ ನೆಲೆಸಿರುವ ರಮೇಶ್ ಅವರ ಮಗಳು ಕೆಎಎಸ್ ಪರೀಕ್ಷೆಗೆ ಹಾಜರಾಗಬೇಕಿತ್ತು. ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಸಹಾಯ ಮಾಡುವ ಕುರಿತು ಚರ್ಚಿಸಲು ಗೋವಿಂದರಾಜು ಅಲ್ಲಿಗೆ ಭೇಟಿ ನೀಡಿದ್ದರು ಎಂದು ಅವರು ಹೇಳಿದರು.

ಸರ್ಕಾರಿ ನೌಕರರಾಗಿರುವ ಗೋವಿಂದರಾಜು ಅವರು ಅಭ್ಯರ್ಥಿಗಳನ್ನು ಸಂಪರ್ಕಿಸಿ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತೆ ಮಾಡುವುದಾಗಿ ಮತ್ತು ಕೆಲಸ ಕೊಡಿಸುವುದಾಗಿ ವಂಚನೆ ಮಾಡುತ್ತಿದ್ದು, ಹೆಚ್ಚಿನ ಹಣ ಹಾಗೂ ದಾಖಲೆಗಳನ್ನು ಸಂಗ್ರಹಿಸುತ್ತಿದ್ದರು. ಈ ಪ್ರಕರಣದಲ್ಲಿ ಗೋವಿಂದರಾಜು, ಮಧ್ಯವರ್ತಿಗಳು ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾ ಗುವುದು ಎಂದು ಡಿಸಿಪಿ ಗಿರೀಶ್ ಹೇಳಿದ್ದಾರೆ.

ವ್ಹೀಲಿಂಗ್ ಆಸಾಮಿಗಳಿಗೆ ಪೊಲೀಸರ ಖಡಕ್ ಎಚ್ಚರಿಕೆ

ಪೋಷಕರಿಗೂ ತಿಳುವಳಿಕೆ ನೀಡಿದ ನಗರ ಸಂಚಾರ ವಿಭಾಗದ ಎಸಿಪಿ



ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಸೋಮವಾರ ವ್ಹೀಲಿಂಗ್ ಆಸಾಮಿಗಳ ಪರೇಡ್ ನಡೆಸಿದರು.

ಮೈಸೂರು, ಡಿ.30(ಆರ್‌ಕೆ)– ಹೊಸ ವರ್ಷಾಚರಣೆ ನೆಪದಲ್ಲಿ ವ್ಹೀಲಿಂಗ್ ಮಾಡಿ ಸಂಚಾರ ನಿಯಮ ಉಲ್ಲಂಘಿಸಿದರೆ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಅವರು ವ್ಹೀಲಿಂಗ್ ಆಸಾಮಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ಲಲಿತಮಹಲ್ ರಸ್ತೆಯ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಇಂದು ಹಳೇ ವ್ಹೀಲಿಂಗ್ ಪ್ರಕರಣಗಳಲ್ಲಿ ಭಾಗಿಯಾಗಿದ್ದ 31 ಮಂದಿ ಮತ್ತು ಅವರ ಪೋಷಕರನ್ನು ಕರೆಸಿ ಹೊಸ ವರ್ಷಾಚರಣೆ ದಿನ ಹಾಗೂ ನಂತರ ದ್ವಿಚಕ್ರ ವಾಹನಗಳಲ್ಲಿ ವ್ಹೀಲಿಂಗ್ ಮಾಡಿದಲ್ಲಿ ಮುಲಾಜಿಲ್ಲದೇ ಪ್ರಕರಣ ದಾಖಲಿಸಲಾಗುವುದು ಎಂದು ಸೂಚನೆ ನೀಡಿದರು.

ಹೆಲ್ಮೆಟ್ ಧರಿಸದೇ ವಾಹನ ಚಾಲನೆ, ತ್ರಿಬಲ್ ರೈಡಿಂಗ್, ಅತೀ ವೇಗ, ಅಜಾಗರೂಕತೆಯಿಂದ ವಾಹನ ಚಾಲನೆ ಮಾಡುವುದೂ ಸೇರಿದಂತೆ ಸಂಚಾರ ನಿಯಮ ಉಲ್ಲಂಘನೆ ಅಪಘಾತಕ್ಕೆ ಕಾರಣರಾಗುವುದು. ತಮ್ಮ ಅಥವಾ ಇತರರ ಪ್ರಾಣಕ್ಕೆ ಹಾನಿಯುಂಟಾಗದಂತೆ ಎಚ್ಚರ ವಹಿಸಬೇಕೆಂದೂ ಅವರು ಹಳೇ ವ್ಹೀಲಿಂಗ್ ಪ್ರಕರಣದಲ್ಲಿ ಭಾಗಿಯಾದವರಿಗೆ ಎಚ್ಚರಿಕೆ ನೀಡಿದ್ದಾರೆ. ಈ ಹಿಂದೆ ವ್ಹೀಲಿಂಗ್ ಮಾಡಿ ಸಿಕ್ಕಿ ಬಿದ್ದಿದ್ದ 53 ಮಂದಿ ಪೈಕಿ ಇಂದು 31 ಮಂದಿ ಪರೇಡ್‌ನಲ್ಲಿ ಹಾಜರಿದ್ದರು. ಸಿದ್ಧಾರ್ಥನಗರ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಶ್ರೀಧರ್, ಕೆ.ಆರ್. ಠಾಣೆಯ ಶರತ್, ಎನ್‌ಆರ್‌ನ ರೇಖಾ ಬಾಯಿ, ದೇವರಾಜದ ಮಮತಾ ಹಾಗೂ ವಿವಿಪುರಂ ಸಂಚಾರ ಠಾಣೆ ಸಬ್‌ಇನ್‌ಸ್ಪೆಕ್ಟರ್ ಗೌತಮ್‌ಗೌಡ ಈ ಸಂದರ್ಭ ಉಪಸ್ಥಿತರಿದ್ದರು.

ನಾಲೆಡ್ಜ್ ಟ್ರಿ ಪ್ರೀಸ್ಕೂಲ್‌ನ ಪ್ರಥಮ ವಾರ್ಷಿಕ ದಿನಾಚರಣೆ



ಮೈಸೂರಿನ ಸುಭಾಷ್‌ನಗರದ ನಾಲೆಡ್ಜ್ ಟ್ರಿ ಪ್ರೀಸ್ಕೂಲ್‌ನ ಪ್ರಥಮ ವಾರ್ಷಿಕ ದಿನಾಚರಣೆಯನ್ನು ವರ್ಜಿನ್ ಆಫ್ ದಿ ಪ್ಯೂರ್ ಚರ್ಚ್‌ನ ಪಾರಿಷ್ ಹಾಲ್‌ನಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮಕ್ಕಳು ಆಕರ್ಷಕ ನೃತ್ಯಗಳನ್ನು ಪ್ರದರ್ಶಿಸಿದರು. ಅಂತಿಮ ಆಕರ್ಷಣೆ 'ದಿ ಟ್ರೆಂಡಿಂಗ್ ರೀಲ್ಸ್'ನಲ್ಲಿ ಸಮಾಪನಗೊಂಡಿತು.

ನೀವು 'ಪ್ರಿನ್ಸೆಸ್ ರಸ್ತೆ' ನಾಮಫಲಕ ಅಳವಡಿಸಿ; ಇಲ್ಲವೇ ನಮಗೆ ಬಿಡಿ

ಪಾಲಿಕೆ ಆಯುಕ್ತರಿಗೆ ಸ್ನೇಹಮಯಿ ಕೃಷ್ಣ ಆಗ್ರಹ

ಮೈಸೂರು, ಡಿ.30(ಬಿಎಲ್‌ಯು)– ಮೈಸೂರಿನ ಕೆಆರ್‌ಎಸ್ ರಸ್ತೆಗೆ ಕೂಡಲೇ ಪ್ರಿನ್ಸೆಸ್ ರಸ್ತೆ (ರಾಜಕುಮಾರಿ ರಸ್ತೆ) ನಾಮಫಲಕ ಅಳವಡಿಸಬೇಕು. ಇಲ್ಲದಿದ್ದರೆ ಸಾರ್ವಜನಿಕರ ಸಹಾಯದಿಂದ ನಾವೇ ಅಳವಡಿಸಲು ಅನುಮತಿ ನೀಡಬೇಕೆಂದು ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಕೋರಿದ್ದಾರೆ.



ಈ ಕುರಿತು ಮೈಸೂರು ನಗರಪಾಲಿಕೆ ಆಯುಕ್ತ ಅಸಾದ್ ಉರ್‌ರೆಹಮಾನ್ ಷರೀಫ್ ಅವರಿಗೆ ಲಿಖಿತ ಮನವಿ ಸಲ್ಲಿಸಿರುವ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ದಾಖಲಾತಿ ಹಾಗೂ ದಿನಪತ್ರಿಕೆಗಳಲ್ಲಿ ಕೆಆರ್‌ಎಸ್ ರಸ್ತೆಯನ್ನು ಪ್ರಿನ್ಸೆಸ್ ರಸ್ತೆ ಎಂಬುದಾಗಿ ನಮೂದಿಸಿರುವ ಅಂತರ್ಜಾಲದ ದಾಖಲಾತಿಗಳನ್ನು ಪಾಲಿಕೆ ಆಯುಕ್ತರಿಗೆ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದಾರೆ.

ನಗರದ ಜೆಎಲ್‌ಬಿ ರಸ್ತೆಯ ದಾಸಪ್ಪ ವೃತ್ತದಿಂದ ರಿಂಗ್ ರಸ್ತೆಯ ರಾಯಲ್ ಇನ್ ಹೋಟೆಲ್ ಜಂಕ್ಷನ್‌ವರೆಗೆ ಪ್ರಿನ್ಸೆಸ್ ರಸ್ತೆ ಎಂಬ ಹೆಸರಿನಿಂದ ನಾಮಕರಣ ಮಾಡಲಾಗಿತ್ತು. ಕೃಷ್ಣಾಜಮ್ಮಣ್ಣಿ ನೆನಪಿಗಾಗಿ ಕ್ಷಯರೋಗ ಆಸ್ಪತ್ರೆ ನಿರ್ಮಾಣ ಮಾಡಿದ್ದ ಹಿನ್ನೆಲೆಯಲ್ಲಿ ಈ ರಸ್ತೆಯನ್ನು ಪ್ರಿನ್ಸೆಸ್ ರಸ್ತೆ ಹೆಸರಿನಿಂದ ಕರೆಯಲಾಗುತ್ತಿದೆ ಎಂದು ತಿಳಿಸಿದ್ದಾರೆ. ಈ ಮೂಲಕ ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂಬ ಹೆಸರು ನಾಮಕರಣ ಮಾಡಲು ನಿರ್ಧರಿಸಿರುವ ಪ್ರಸ್ತಾವನೆಯನ್ನು ಕೂಡಲೇ ವಾಪಸು ಪಡೆಯಬೇಕು ಎಂದು ಒತ್ತಾಯಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಗರಪಾಲಿಕೆಯೇ ಪ್ರಿನ್ಸೆಸ್ ರಸ್ತೆ ಎಂಬ ನಾಮಫಲಕ ಅಳವಡಿಸಬೇಕು. ಈ ಮೂಲಕ ಈಗಿರುವ ಗೊಂದಲ ನಿವಾರಣೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಇನ್ನು ಏಳು ದಿನದೊಳಗೆ ನಗರಪಾಲಿಕೆ ಪ್ರಿನ್ಸೆಸ್ ರಸ್ತೆ ಎಂಬ ನಾಮಫಲಕ ಅಳವಡಿಸದಿದ್ದರೆ ಸಾರ್ವಜನಿಕರ ಸಹಾಯದಿಂದ ನಾಮಫಲಕ ಅಳವಡಿಸಲು ಅನುಮತಿ ನೀಡಬೇಕೆಂದು ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರಲ್ಲಿ ಸ್ನೇಹಮಯಿ ಕೃಷ್ಣ ಮನವಿ ಮಾಡಿಕೊಂಡಿದ್ದಾರೆ.

ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು: ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನ ವತಿಯಿಂದ ಜನವರಿ 1ರಿಂದ ಪ್ರಾರಂಭವಾಗುವ 6 ತಿಂಗಳ ಅವಧಿಯ ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನ ಸಹಕಾರ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಕನಿಷ್ಠ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿರಬೇಕು. ತರಬೇತಿ ಅವಧಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾಸಿಕ ರೂ.600 ಹಾಗೂ ಇತರೆ ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ರೂ.500 ಶಿಷ್ಯ ವೇತನ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ಚಾಮರಾಜ ಜೋಡಿ ರಸ್ತೆಯ ಸಹಕಾರ ಭವನದ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್ಮೆಂಟ್ ದೂ.ಸಂ:0821-2520563, ಮೊ.ಸಂ:9902189872 / 9845918519, 0821-4245255, 08232-220238, ಮೊ.ಸಂ: 9141873304ನ್ನು ಸಂಪರ್ಕಿಸಿ ಅರ್ಜಿಗಳನ್ನು ಪಡೆದು ಡಿಸೆಂಬರ್ 31ರೊಳಗೆ ಅರ್ಜಿಯನ್ನು ಸಲ್ಲಿಸಬಹುದು.

ಸಹಾಯ ಧನಕ್ಕೆ ಅರ್ಜಿ ಆಹ್ವಾನ

ಮೈಸೂರು,ಡಿ.30–ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ THE NEW INDIA ASSURANCE COMPANY LID. ವಿಮಾ ಕಂಪನಿ ಅವರ ಸಹಯೋಗದೊಂದಿಗೆ ತೆಂಗಿನಮರ ಹತ್ತುವವರನ್ನು, ತೆಂಗಿನಕಾಯಿ ಕೀಳುವವರನ್ನು ನೀರಾ ತಂತ್ರಜ್ಞಾನ ಉತ್ತೇಜಿಸಲು ಹಾಗೂ ಸದರಿಯವರ ಸುರಕ್ಷತೆ ಹಿತದೃಷ್ಟಿಯಿಂದ 2024-25ನೇ ಸಾಲಿನ ಕೇರಾ ಸುರಕ್ಷಾ ವಿಮಾ ಯೋಜನೆಯಡಿ ಸಹಾಯ ಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ತೆಂಗಿನಮರ ಹತ್ತುವವರು, ತೆಂಗಿನಕಾಯಿ ಕೀಳುವವರು, ನೀರಾ ತಂತ್ರಜ್ಞಾನರು ಅಪಘಾತಕ್ಕೊಳಕ್ಕಾಗಿ ಮರಣ ಹೊಂದಿದ್ದಲ್ಲಿ, ಅಂಗವಿಕಲರು ಸಹಾಯಧನವನ್ನು ಪಡೆಯಬಹುದಾಗಿರುತ್ತದೆ. ಈ ಯೋಜನೆಗೆ ವಾರ್ಷಿಕ ಕಂತು ರೂ.956 ಗಳನ್ನು ವಿಮಾ ಕಂಪನಿಗೆ ಪಾವತಿಸಬೇಕಾಗುತ್ತದೆ. ಇದರಲ್ಲಿ ರೈತರು ವಂತಿಕೆ ರೂ.239 ಆಗಿದ್ದು, CDB ರವರ ವಂತಿಕೆ ರೂ.717ಗಳಾಗಿರುತ್ತದೆ. ಮಾಹಿತಿಗಾಗಿ ಜಿಪಂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಗಳಾದ ಮೈಸೂರು ತಾಲೂಕು ದೂ.ಸಂ-0821-2430450, ಹೆಚ್.ಡಿ.ಕೋಟೆ ತಾಲೂಕು ದೂ.ಸಂ - 08228-255262, ಹುಣಸೂರು ತಾಲೂಕು ದೂ.ಸಂ -08222-252447, ಕೆ.ಆರ್.ನಗರ ತಾಲೂಕು ದೂ.ಸಂ -08223-262792, ನಂಜನಗೂಡು ತಾಲೂಕು ದೂ.ಸಂ-08221-226201, ಪಿರಿಯಾಪಟ್ಟಣ ತಾಲೂಕು ದೂ.ಸಂ-08223-273535, ಟಿ.ನರಸೀಪುರ ತಾಲೂಕು ದೂ.ಸಂ -08227-260086 ಅನ್ನು ಸಂಪರ್ಕಿಸಬಹುದು.

ಚಿನ್ನ ವಂಚನೆ ಕೇಸ್: ಐಶ್ವರ್ಯಗೌಡ ವಿರುದ್ಧ ಪೊಲೀಸ್ ಆಯುಕ್ತರಿಗೆ ಡಿ.ಕೆ.ಸುರೇಶ್ ದೂರು

ಬೆಂಗಳೂರು, ಡಿ.30– ತಮ್ಮ ಹೆಸರು ದುರುಪಯೋಗ ಮಾಡಿಕೊಂಡು ಹಲವಾರು ಜನರಿಗೆ ಚಿನ್ನಾಭರಣ ಹಾಗೂ ಹಣ ವಂಚನೆ ಮಾಡುತ್ತಿರುವ ಐಶ್ವರ್ಯಾ ಗೌಡ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಮಾಜಿ ಸಂಸದ ಡಿ.ಕೆ.ಸುರೇಶ್ ಅವರು ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದಾರೆ.

ಈ ಬಗ್ಗೆ ಪೊಲೀಸ್ ಆಯುಕ್ತರಿಗೆ ಭಾನುವಾರ ಅವರು ಪತ್ರ ಬರೆದಿದ್ದು, ಐಶ್ವರ್ಯಾ ಗೌಡ ಉರುಫ್ ನವ್ಯಶ್ರೀ ಎಂಬುವವರು ನನ್ನ ಹೆಸರನ್ನು ದುರುಪಯೋಗ ಮಾಡಿಕೊಂಡು ಹಲವಾರು ಜನರಿಗೆ ಚಿನ್ನಾಭರಣ ಹಾಗೂ ಹಣ ವಂಚನೆ ಮಾಡಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗುತ್ತಿವೆ.

ಹೀಗಾಗಿ, ನನ್ನ ಹೆಸರು ಬಳಸಿಕೊಂಡು ವಂಚನೆ ನಡೆಸಿರುವವರ ವಿರುದ್ಧ ಸೂಕ್ತ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಜನರಿಗೆ ಇಂತಹ ಅನ್ಯಾಯ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಸುರೇಶ್ ಮನವಿ ಮಾಡಿದ್ದಾರೆ.





ಮಂಡ್ಯದ ಉದ್ಯಮಿಗೂ ದೋಖಾ: ಆರೋಪಿ ಸ್ಥಾನದಲ್ಲಿರುವ ಐಶ್ವರ್ಯಗೌಡ ಬಿಲ್ಡರ್, ಚಿನ್ನದ ವ್ಯಾಪಾರಿ ಹಾಗೂ ಕಾಂಗ್ರೆಸ್ ಮುಖಂಡನಿಗೂ ಕೋಟ್ಯಂತರ ರೂಪಾಯಿ ಟೋಪಿ ಹಾಕಿರುವುದು ಬೆಳಕಿಗೆ ಬಂದಿದೆ. ಸದ್ಯ ಆ ಉದ್ಯಮಿ ತನ್ನ ಹೆಸರು ಬಹಿರಂಗಪಡಿಸಬೇಡಿ ಎಂದು ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ವಾಸವಿರುವ ಅವರು ಮೈಸೂರು, ಮಂಡ್ಯ, ಬೆಂಗಳೂರಿನಲ್ಲಿ ಉದ್ಯಮ ನಡೆಸುತ್ತಾ, ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದಾರೆ. ಐಶ್ವರ್ಯ ಗೌಡ ಈ ವ್ಯಕ್ತಿಯಿಂದ 6.5 ಕೋಟಿ ಹಣ ಹಾಗೂ ಒಂದಷ್ಟು ಚಿನ್ನ ಪಡೆದಿದ್ದಾಳೆ ಎನ್ನಲಾಗಿದೆ.

ಒಂದೂವರೆ ವರ್ಷದ ಹಿಂದೆ ಈ ಉದ್ಯಮಿ ಹಾಗೂ ಕಾಂಗ್ರೆಸ್ ಮುಖಂಡನಿಗೆ ಐಶ್ವರ್ಯ ಗೌಡ ಪರಿಚಯವಾಗಿದ್ದಾಳೆ. ಐಷಾರಾಮಿ ಕಾರು, ಬೌನ್ಸರ್, ಗನ್‌ಮ್ಯಾನ್ ಜೊತೆಗೆ ಬಂದು ಆ ಉದ್ಯಮಿಯನ್ನು ಪರಿಚಯ ಮಾಡಿಕೊಂಡಿದ್ದಾಳೆ. ನಂತರ ಇವರಿಬ್ಬರು ಸೇರಿ ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡಿದ್ದಾರೆ. ಆರಂಭದಲ್ಲಿ ಎಲ್ಲಾ ವ್ಯವಹಾರ ಸರಿಯಾಗಿಯೇ ವಂಚಕಿ ಐಶ್ವರ್ಯ ಗೌಡ ಮಾಡಿದ್ದಾಳೆ. ಇದಾದ ಬಳಿಕ ಆ ವ್ಯಕ್ತಿಯಿಂದ ಚಿನ್ನ ಹಾಗೂ ನಗದು ರೂಪದಲ್ಲಿ 6.5 ಕೋಟಿ ಹಣವನ್ನು ಪಡೆದಿದ್ದಾಳೆ. ಬಳಿಕ ಹಣವನ್ನು ಆತ ಕೇಳಿದರೆ ಇಂದು, ನಾಳೆ ಎಂದು ಕಥೆ ಹೇಳುತ್ತಾ ಬಂದಿದ್ದಾಳೆ. ಆಗ ರಾಜ್ಯದ ಪ್ರಭಾವಿ ರಾಜಕಾರಣಿ ಮಧ್ಯಸ್ಥಿಕೆ ವಹಿಸಿ ಸಮಯ ನೀಡುವಂತೆ ಹೇಳಿದ್ದಾರೆ. ಈಕೆಯ 9 ಕೋಟಿ ಗೋಲ್ಡ್ ದೋಖಾ ಕಹಾನಿ ಹೊರಬಂದ ಬಳಿಕ ಉದ್ಯಮಿ ಕಮ್ ಕಾಂಗ್ರೆಸ್ ಮುಖಂಡನಿಗೆ ವಂಚನೆಗೆ ಒಳಗಾಗಿರುವುದು ಗೊತ್ತಾಗಿದೆ. ಹೀಗಾಗಿ ಆತ ಐಶ್ವರ್ಯ ಗೌಡ ಮೇಲೆ ಮಂಡ್ಯ ಅಥವಾ ಬೆಂಗಳೂರಿನಲ್ಲಿ ದೂರು ದಾಖಲು ಮಾಡಲು ದಾಖಲೆ ಸಮೇತ ಸಿದ್ಧರಾಗಿದ್ದಾರೆ.

ಗುತ್ತಿಗೆದಾರ ಆತ್ಮಹತ್ಯೆ ಪ್ರಕರಣಕ್ಕೆ ಟ್ವಿಸ್ಟ್

ಸಚಿನ್ ವಿರುದ್ಧವೇ ಲಕ್ಷಾಂತರ ರೂಪಾಯಿ ವಂಚನೆ ಆರೋಪ

ಕಲಬುರಗಿ,ಡಿ.30–ಕಾಂಗ್ರೆಸ್ ಮುಖಂಡ ರಾಜು ಕಪನೂರ ಟೆಂಡರ್‌ಗಾಗಿ ಲಕ್ಷಾಂತರ ರೂಪಾಯಿ ಪಡೆದು ವಂಚಿಸಿರುವುದಾಗಿ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಗುತ್ತಿಗೆದಾರ ಸಚಿನ್ ಪ್ರಕರಣಕ್ಕೆ ಇದೀಗ ಟ್ವಿಸ್ಟ್ ಸಿಕ್ಕಿದೆ. ಪ್ರಕರಣದ ಆರೋಪಿ ರಾಜು ಕಪನೂರ್ ಸಹೋದರ ಪ್ರಕಾಶ್ ಕಪನೂರ್ ಕೆಲವು ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆ.

ಸಚಿನ್ RWSSDಯಲ್ಲಿ 12 ಕೋಟಿ ರೂ. ಟೆಂಡರ್ ಪಡೆಯಲು ಇಎಂಡಿ ಹಣ ಕಟ್ಟುವುದಕ್ಕೆ ಮುಖಂಡ ಆರೋಪಿ ಸ್ಥಾನದಲ್ಲಿರುವ ರಾಜು ಕಪನೂರ್ ಅವರ ಸ್ನೇಹಿತರಾದ ಮನೋಜ್, ಪ್ರತಾಪ್ ಧೀರ್ ಕಡೆಯಿಂದ ಬ್ಯಾಂಕ್ ಮೂಲಕ 58.77 ಲಕ್ಷ ರೂ. ಹಣ ಹಾಕಿಸಿಕೊಂಡಿದ್ದ. ಇದಕ್ಕೆ ಸಂಬಂಧಿಸಿದ ಬ್ಯಾಂಕ್ ದಾಖಲೆಗಳನ್ನು ಕಲಬುರಗಿ ಮಹಾನಗರ ಪಾಲಿಕೆ ಸದಸ್ಯರಾಗಿರುವ ಪ್ರಕಾಶ್ ಕಪನೂರ್ ಬಿಡುಗಡೆ ಮಾಡಿದ್ದಾರೆ. ನಮ್ಮ ಸಹೋದರ ಆತನಿಂದ ಹಣ ಪಡೆದಿಲ್ಲ ಖುದ್ದು ಮೃತ ಸಚಿನ್ ಟೆಂಡರ್ ಆಸೆ ತೋರಿಸಿ ನಮ್ಮ ಸಹೋದರನ ಸ್ನೇಹಿತನಿಂದ 60 ಲಕ್ಷಕ್ಕೂ ಅಧಿಕ ಹಣ ಪಡೆದು ವಂಚಿಸಿರುವುದಾಗಿ ಆರೋಪಿಸಿದ್ದಾರೆ. ಸಚಿನ್ ಆತ್ಮಹತ್ಯೆ ಸುತ್ತ ಹಲವು ಅನುಮಾನ ವ್ಯಕ್ತಪಡಿಸಿರುವ ಪ್ರಕಾಶ್ ಕಪನೂರ್, ಸಚಿನ್ ಆತ್ಮಹತ್ಯೆಗೂ ಮುನ್ನ ಡೆತ್‌ನೋಟ್ ಫೋಟೋ ತೆಗೆದಿದ್ದು, ಆ ಫೋಟೋದಲ್ಲಿ ಮೂರು ಹೆಬ್ಬೆರಳ ಗುರುತುಗಳು ಕಂಡುಬಂದಿವೆ. ಈ ಮೂಲಕ ಸಚಿನ್ ಜೊತೆಗೆ ಆ ಡೆತ್‌ನೋಟ್ ಬರೆಯುವಾಗ ಹಾಗೂ ಫೋಟೋ ತೆಗೆಯುವಾಗ ಇನ್ನೂ ಕೆಲವರು ಇರುವುದು ಸಹ ಸ್ಪಷ್ಟವಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.



ನಮ್ಮ ಸಹೋದರನ ಹೆಸರು ಕೆಡಿಸಲು ಸಚಿನ್‌ರನ್ನು ಕೆಲವರು ಬಳಕೆ ಮಾಡಿಕೊಂಡಿದ್ದಾರೆ. ಹೀಗಾಗಿ ಈ ಪ್ರಕರಣವನ್ನು ಉನ್ನತ ಮಟ್ಟದಲ್ಲಿ ತನಿಖೆ ಮಾಡಿಸಿದರೆ ಸಚಿನ್ ಆತ್ಮಹತ್ಯೆ ಹಾಗೂ ಡೆತ್‌ನೋಟ್ ಹಿಂದೆ ಯಾರ ಕೈವಾಡವಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಆಗ್ರಹಿಸಿದ್ದಾರೆ. ಈ ಮಧ್ಯೆ ಸಚಿನ್ ಆತ್ಮಹತ್ಯೆ ಪ್ರಕರಣವನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸಿಐಡಿ ತನಿಖೆಗೆ ಒಪ್ಪಿಸಿದ್ದಾರೆ.

ಮತಾಂತರದ ಶಂಕೆ; ಬುಡಕಟ್ಟು ಮಹಿಳೆಯರನ್ನು ಮರಕ್ಕೆ ಕಟ್ಟಿ ಥಳಿತ

ಬಾಲಸೋರ್: ಧಾರ್ಮಿಕ ಮತಾಂತರದ ಶಂಕೆಯ ಮೇಲೆ ಜನರ ಗುಂಪೊಂದು ಇಬ್ಬರು ಮಹಿಳೆಯರನ್ನು ಮರಕ್ಕೆ ಕಟ್ಟಿಹಾಕಿ ಥಳಿಸಿರುವ ಘಟನೆ ಒಡಿಶಾದ ಬಾಲಸೋರ್ ಜಿಲ್ಲೆಯ ರೆಮುನಾ ಪ್ರದೇಶದಲ್ಲಿ ನಡೆದಿದೆ. ಹಲ್ಲೆ ವಿಡಿಯೋ ವೈರಲ್ ಬಳಿಕ ಪೊಲೀಸರು ಎರಡು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಇಬ್ಬರು ಬುಡಕಟ್ಟು ಮಹಿಳೆಯರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳಲು ಗ್ರಾಮಸ್ಥರನ್ನು ಮನವೊಲಿಸಲು ಖರಿಮುಖ ಗ್ರಾಮಕ್ಕೆ ಹೋಗಿದ್ದಾರೆ. ಈ ಸುದ್ದಿ ಇಡೀ ಗ್ರಾಮದಲ್ಲಿ ಹಬ್ಬಿದ್ದು, ಹಿಂದೂ ಸಂಘಟನೆಯ ಸದಸ್ಯರು ಮತ್ತು ಸ್ಥಳೀಯರನ್ನು ಒಳಗೊಂಡ ಗುಂಪೊಂದು ಸ್ಥಳಕ್ಕೆ ಆಗಮಿಸಿ ಇಬ್ಬರು ಮಹಿಳೆಯರನ್ನು ಮರಕ್ಕೆ ಕಟ್ಟಿಹಾಕಿ ಹಲ್ಲೆ ನಡೆಸಿದೆ ಎಂದು ರೆಮುನಾ ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿ (ಒಐಸಿ) ಸುಭಾಷ್ ಚಂದ್ರ ಮಲ್ಲಿಕ್ ತಿಳಿಸಿದ್ದಾರೆ.

ಗುಂಪು ಮಹಿಳೆಯರ ಮುಖವನ್ನು ವಿರೂಪಗೊಳಿಸಿದ್ದು, 'ಜೈ ಶ್ರೀ ರಾಮ್' ಎಂದು ಕೂಗುವಂತೆ ಒತ್ತಾಯಿಸಿದೆ. ಮಾಹಿತಿ ತಿಳಿಯುತ್ತಿದ್ದಂತೆಯೇ ನೀಲಗಿರಿ ಪೊಲೀಸ್ ತಂಡ ಸ್ಥಳಕ್ಕೆ ಧಾವಿಸಿ ಇಬ್ಬರು ಮಹಿಳೆಯರನ್ನು ರಕ್ಷಿಸಿದ್ದಾರೆ. ವಿಚಾರಣೆ ವೇಳೆ, ಸ್ಥಳೀಯರನ್ನು ಮತಾಂತರಗೊಳಿಸಲು ಗ್ರಾಮಕ್ಕೆ ಹೋಗಿದ್ದಾಗಿ ಘಟನೆ ನಡೆದಿರುವುದಾಗಿ ಮಹಿಳೆಯರು ಒಪ್ಪಿಕೊಂಡಿದ್ದಾರೆ ಎಂದು ಮಲ್ಲಿಕ್ ಹೇಳಿದ್ದಾರೆ.

ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಸ್ಮಾರಕ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ

ನವದೆಹಲಿ, ಡಿ.30– ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಸ್ಮಾರಕಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ರಾಜಕೀಯ ಜಟಾಪಟಿ ನಡೆಯುತ್ತಿರುವ ಹೊತ್ತಲ್ಲಿ ಕೇಂದ್ರ ನಗರಾಭಿವೃದ್ಧಿ ಸಚಿವಾಲಯದ ಅಧಿಕಾರಿಗಳು ರಾಜ್‌ಘಾಟ್‌ನಲ್ಲಿರುವ ಸಮಾಧಿ ಸ್ಥಳಗಳಿಗೆ ಭೇಟಿ, ನೀಡಿ ಸ್ಥಳ ಪರಿಶೀಲನೆ ಮಾಡಿದ್ದಾರೆ.

ರಾಷ್ಟ್ರೀಯ ಸ್ಮೃತಿ ಸ್ಥಳ, ರಾಷ್ಟ್ರಪತಿ, ಉಪ ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿಗಳ ಅಂತ್ಯಕ್ರಿಯೆಗೆ ಗೊತ್ತುಪಡಿಸಿದ ಸ್ಥಳ, ಮಾಜಿ ಪ್ರಧಾನಿ ಚೌಧರಿ ಚರಣ್‌ಸಿಂಗ್ ಸ್ಮಾರಕ ಕಿಸಾನ್ ಘಾಟ್, ಸಂಜಯ್ ಗಾಂಧಿ ಸಮಾಧಿ, ಪಿ.ವಿ.ನರಸಿಂಹರಾವ್ ಸಮಾಧಿ ಏಕತಾ ಸ್ಥಳದ ಬಳಿ ಮನಮೋಹನ್ ಸಿಂಗ್ ಸ್ಮಾರಕ ನಿರ್ಮಿಸುವ ಬಗ್ಗೆ ಅಧಿಕಾರಿಗಳಿಂದ ಪರಿಶೀಲನೆ ನಡೆದಿದೆ



ದೇಶದ ಮೊದಲ ಸಿಖ್ ಪ್ರಧಾನಿ ಮನಮೋಹನ್ ಸಿಂಗ್ ಅವರ ಅಂತಿಮ ಸಂಸ್ಕಾರಕ್ಕೆ ಕೇಂದ್ರ ಸರ್ಕಾರ ಸರಿಯಾದ ಮತ್ತು ಗೌರವಾನ್ವಿತ ಸ್ಥಳವನ್ನು ಒದಗಿಸಿಲ್ಲ ಎಂದು ಕಾಂಗ್ರೆಸ್ ಆರೋಪಿಸಿದೆ. ಅವರ ಸ್ಮಾರಕವನ್ನು ನಿರ್ಮಿಸುವ ಸ್ಥಳದಲ್ಲಿ ಅಂತ್ಯಕ್ರಿಯೆ ನಡೆಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿತ್ತು. ಆದಾಗ್ಯೂ ಕೇಂದ್ರ ಸರ್ಕಾರ ನಿಗಮ್‌ಬೋಧ್ ಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಸಿತ್ತು.

ಈ ನಡುವೆ ಕೇಂದ್ರ ಸರ್ಕಾರ ಸ್ಮಾರಕಕ್ಕೆ ಸ್ಥಳ ನೀಡುವ ಭರವಸೆ ನೀಡಿದ್ದು, ಈ ಹಿನ್ನೆಲೆ ಸ್ಥಳ ಪರಿಶೀಲನೆ ಆರಂಭವಾಗಿದೆ. ಈ ನಡುವೆ 2000ನೇ ಇಸವಿಯಲ್ಲಿ ಯುಪಿಎ ಸರ್ಕಾರವು ರಾಜಧಾನಿಯಲ್ಲಿ ಭೂಮಿ ಕೊರತೆ ಹಿನ್ನೆಲೆ ಕಳವಳ ವ್ಯಕ್ತಪಡಿಸಿತ್ತು. ಇದರೊಂದಿಗೆ ಹೊಸ ಸ್ಮಾರಕಗಳನ್ನು ನಿರ್ಮಿಸದಿರಲು ನಿರ್ಧರಿಸಲಾಗಿತ್ತು. ಈ ನಿರ್ಧಾರ ಮನಮೋಹನ್ ಸಿಂಗ್ ಸ್ಮಾರಕಕ್ಕೆ ಅಡ್ಡಿಯಾಗಬಹುದು ಎನ್ನಲಾಗುತ್ತಿದೆ.

ಪಿಎಚ್.ಡಿ ಪದವಿ

ಮೈಸೂರು: ಡಾ.ಎಂ.ಮಹಾದೇವಸ್ವಾಮಿ ಅವರ ಮಾರ್ಗದರ್ಶನದಲ್ಲಿ ಕೆ.ಆರ್.ಶಶಾಂಕ್ ಅವರು ಪ್ರಾಣಿಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.



ಮೈಸೂರಿಗೆ ಬರುವ, ಹೋಗುವ ರೈಲುಗಳ ವೇಳಾಪಟ್ಟಿ ಪರಿಷ್ಕರಣೆ



ಜನವರಿ 1ರಿಂದ ಜಾರಿ

ಮೈಸೂರು, ಡಿ.30(ಬಿಎಲ್‌ಯು)– ಹೊಸ ವರ್ಷವಾದ ಜನವರಿ 1 ರಿಂದ ನೈರುತ್ಯ ರೈಲ್ವೆ, ರೈಲ್ವೆ ವೇಳಾಪಟ್ಟಿಯನ್ನು ಪರಿಷ್ಕರಣೆ ಮಾಡಿದೆ. ಪ್ರಯಾಣಿಕರು ಪ್ರಯಾಣ ಆರಂಭಿಸುವ ಮುನ್ನ ರೈಲ್ವೆ ಇಲಾಖೆ ವೆಬ್‌ಸೈಟ್ https://swr.indianrailways.gov.in ಸಹಾಯದಿಂದ ಹೊಸ ರೈಲು ವೇಳಾಪಟ್ಟಿಯನ್ನು ಪರಿಶೀಲಿಸಬಹುದು ಎಂದು ಸಲಹೆ ನೀಡಿದೆ. ಮೈಸೂರಿನಿಂದ ಸಾಯಿನಗರ ಶಿರಿಡಿಗೆ ಹೊರಡುವ ರೈಲು ಜನವರಿ 6ರಂದು ಬೆಳಿಗ್ಗೆ 5 ಗಂಟೆಗೆ ಹೊರಡಲಿದೆ.

ಟುಟಿಕೋರಿನ್(ತೂತುಕುಡಿ) ನಿಂದ ಮೈಸೂರಿಗೆ ಹೊರಡುವ ರೈಲು ಪಾಂಡವಪುರ ನಿಲ್ದಾಣಕ್ಕೆ 8.40 ಗಂಟೆಗೆ ಆಗಮಿಸಲಿದ್ದು, 9.30 ಗಂಟೆ ಮೈಸೂರು ತಲುಪಲಿದೆ. ನಂಜನಗೂಡಿನಿಂದ ಮೈಸೂರಿಗೆ ಹೊರಡುವ ರೈಲು ನಂಜನಗೂಡಿನಿಂದ ಬೆಳಿಗ್ಗೆ 10.25 ಗಂಟೆಗೆ ಹೊರಟು 11.15 ಗಂಟೆಗೆ ಮೈಸೂರು ತಲುಪಲಿದೆ. ಮಾರ್ಗದಲ್ಲಿ ಸುಜಾತಪುರಂನಲ್ಲಿ 10.25, ತಾಂಡವಪುರಕ್ಕೆ 10.32, ಕಡಕೊಳಕ್ಕೆ 10.38ಕ್ಕೆ, ಅಶೋಕಪುರಂಗೆ 10.48 ಕ್ಕೆ, ಚಾಮರಾಜಪುರಂಗೆ 10.54ಕ್ಕೆ ಆಗಮಿಸಲಿದೆ. ಮೈಸೂರಿನಿಂದ ನಂಜನಗೂಡಿಗೆ ಹೊರಡುವ ಪ್ಯಾಸೆಂಜರ್ ರೈಲು ಬೆಳಿಗ್ಗೆ 10 ಗಂಟೆಗೆ ನಂಜನಗೂಡು ತಲುಪಲಿದೆ.

ಮೈಸೂರಿನಿಂದ ಚಾಮರಾಜನಗರಕ್ಕೆ ಹೊರಡುವ ಪ್ಯಾಸೆಂಜರ್ ರೈಲು ಮೈಸೂರಿನಿಂದ 11.45 ಗಂಟೆಗೆ ಹೊರಟು ಚಾಮರಾಜನಗರಕ್ಕೆ 1.30 ಗಂಟೆಗೆ ತಲುಪುತ್ತದೆ. ಮಾರ್ಗದಲ್ಲಿ ಚಾಮರಾಜಪುರಂನಲ್ಲಿ 11.50, ಅಶೋಕಪುರಂನಲ್ಲಿ 11.56, ತಾಂಡವಪುರದಲ್ಲಿ 12.08, ಸುಜಾತಪುರಂನಲ್ಲಿ 12.14, ನಂಜನಗೂಡಿನಲ್ಲಿ 12.18, ಚಿನ್ನದಗುಡಿ ಹುಂಡಿಯಲ್ಲಿ 12.23, ನರಸಾಂಬುಧಿಯಲ್ಲಿ 12.35, ಕವಲಂದೆಯಲ್ಲಿ 12.38, ಕೊಣ್ಣನೂರ್‌ನಲ್ಲಿ 12.44, ಬದನಗುಪ್ಪೆಯಲ್ಲಿ 12.50, ಮರಿಯಾಲದಲ್ಲಿ 12.56ಕ್ಕೆ ಆಗಮಿಸಿ 1.30ಕ್ಕೆ ಚಾಮರಾಜನಗರಕ್ಕೆ ಆಗಮಿಸಲಿದೆ. ಚಾಮರಾಜನಗರದಿಂದ ಮೈಸೂರಿಗೆ ಹೊರಡುವ ಪ್ಯಾಸೆಂಜರ್ ರೈಲು ಅಶೋಕಪುರಂಗೆ 11.53, ಚಾಮರಾಜಪುರಂಗೆ 12.01 ಗಂಟೆಗೆ ಆಗಮಿಸಲಿದೆ. ಚಾಮರಾಜನಗರದಿಂದ ತುಮಕೂರಿಗೆ ಹೊರಡುವ ಪ್ಯಾಸೆಂಜರ್ ರೈಲು ಚಿನ್ನದಗುಡಿ ಹುಂಡಿಯಲ್ಲಿ 7.15, ನಂಜನಗೂಡು ಟೌನ್‌ಗೆ 8.02, ಸುಜಾತಪುರಂಗೆ 8.08, ತಾಂಡವಪುರದಲ್ಲಿ 8.13, ಕಡಕೊಳದಲ್ಲಿ 8.19, ಅಶೋಕಪುರಂನಲ್ಲಿ 8.33 ಹಾಗೂ ಚಾಮರಾಜಪುರಂಗೆ 8.39 ಗಂಟೆಗೆ ಬಂದು ತಲುಪಲಿದೆ.

ಈ ಎಲ್ಲಾ ವಿವರಗಳನ್ನು https://swr.indianrailways.gov.inನಿಂದಲೂ ಮಾಹಿತಿ ಪಡೆಯಬಹುದು.

ದೇಶ - ವಿದೇಶ

ಲಂಡನ್‌ನಲ್ಲಿ ನಾಪತ್ತೆಯಾಗಿದ್ದ ಕೇರಳದ ವಿದ್ಯಾರ್ಥಿನಿಯ ಶವ ನದಿಯಲ್ಲಿ ಪತ್ತೆ

ಲಂಡನ್: ಈ ತಿಂಗಳ ಆರಂಭದಿಂದ ನಾಪತ್ತೆಯಾಗಿದ್ದ 22 ವರ್ಷದ ಭಾರತೀಯ ವಿದ್ಯಾರ್ಥಿನಿಯ ಶವ ಸ್ಕಾಟ್ಲೆಂಡ್‌ನ ನದಿಯೊಂದರಲ್ಲಿ ಪತ್ತೆಯಾಗಿದೆ. ಮೃತದೇಹವನ್ನು ಇನ್ನೂ ಅಧಿಕೃತವಾಗಿ ಗುರುತಿಸದಿದ್ದರೂ ಆಕೆಯ ಕುಟುಂಬಕ್ಕೆ ಮಾಹಿತಿ ನೀಡಲಾಗಿದೆ. ಕೇರಳದ ಸಂತ್ರಾ ಸಾಜು ಸ್ಕಾಟಿಷ್ ರಾಜಧಾನಿ ಎಡಿನ್‌ಬರ್ಗ್‌ನಲ್ಲಿರುವ ಹೆರಿಯಟ್-ವ್ಯಾಟ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದರು.



ಡಿಸೆಂಬರ್ 27ರಂದು ಬೆಳಗ್ಗೆ 11.55ರ ಸುಮಾರಿಗೆ ಎಡಿನ್‌ಬರ್ಗ್ ಬಳಿಯ ನ್ಯೂಬ್ರಿಡ್ಜ್ ನದಿಯಲ್ಲಿ ಮೃತದೇಹವೊಂದು ಪತ್ತೆಯಾಗಿದೆ. ಈ ಸಂಬಂಧ ವರದಿಯನ್ನು ಸ್ಕಾಟ್ಲೆಂಡ್‌ನ ಪ್ರಾಸಿಕ್ಯೂಷನ್ ಸೇವೆ ಮತ್ತು ತನಿಖಾ ಸಂಸ್ಥೆಗೆ ಕಳುಹಿಸಲಾಗುವುದು ಎಂದು ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಡಿ.6ರಂದು ಸಂಜೆ ಲಿವಿಂಗ್‌ಸ್ಟನ್‌ನ ಅಲ್ಮಂಡ್‌ವೇಲ್‌ನಲ್ಲಿರುವ ಅಸ್ಡಾ ಸೂಪರ್ ಮಾರ್ಕೆಟ್ ಅಂಗಡಿಯಲ್ಲಿ ಸಾಜು ಕೊನೆಯ ಬಾರಿಗೆ ಸಿಸಿಟಿವಿ ಯಲ್ಲಿ ಕಾಣಿಸಿಕೊಂಡಿದ್ದರು. ಕಾಣೆಯಾದ ಸಾಜು ಕುರಿತು ಆಕೆಯ ಕುಟುಂಬಸ್ಥರು ಹಾಗೂ ಸ್ನೇಹಿತರಿಂದ ದೂರು ಸ್ವೀಕರಿಸಿದ ಪೊಲೀಸರು ಆಕೆ ಬಗ್ಗೆ ಸುಳಿವು ಸಿಕ್ಕಲ್ಲಿ ಮಾಹಿತಿ ನೀಡುವಂತೆ ತಿಳಿಸಿದ್ದರು.

ಸಿಎಂ ನಿವಾಸದ ಕೆಳಗೂ ಶಿವಲಿಂಗವಿದೆ, ಉತ್ಖನನ ನಡೆಯಲಿ: ಅಖಿಲೇಶ್ ವ್ಯಂಗ್ಯ

ಲಖನೌ: ಸಂಭಾಲ್‌ನಲ್ಲಿ ನಡೆಯುತ್ತಿರುವ ಉತ್ಖನನದ ಬಗ್ಗೆ ಸಮಾಜವಾದಿ ಪಕ್ಷದ ಮುಖಂಡ ಅಖಿಲೇಶ್ ಯಾದವ್ ವ್ಯಂಗ್ಯವಾಡಿದ್ದು, ಸಿಎಂ ಅಧಿಕೃತ ನಿವಾಸದ ಕೆಳಭಾಗದಲ್ಲಿಯೂ ಶಿವಲಿಂಗವಿದೆ ಎಂದು ಹೇಳಿದ್ದಾರೆ.



ಸಂಭಾಲ್‌ನಲ್ಲಿ ಮುಘಲ್ ಕಾಲದ ಮಸೀದಿಯ ಆವರಣ, ಸುತ್ತಮುತ್ತಲ ಪ್ರದೇಶಗಳಲ್ಲಿ ಉತ್ಖನನ ಅಕ್ರಮ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಕಳೆದ ತಿಂಗಳು ಘರ್ಷಣೆ ಉಂಟಾಗಿತ್ತು. ಈ ಬೆಳವಣಿಗೆಗಳ ಬಗ್ಗೆ ಲಖನೌನಲ್ಲಿ ಮಾತನಾಡಿರುವ ಅಖಿಲೇಶ್ ಯಾದವ್, ಬಿಜೆಪಿ ತನ್ನ ವೈಫಲ್ಯಗಳನ್ನು ಮುಚ್ಚಿಹಾಕಿಕೊಳ್ಳುವುದಕ್ಕಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಉತ್ಖನನ ನಡೆಸುತ್ತಿದೆ. ಇದು ಸಾರ್ವಜನಿಕರ ಗಮನವನ್ನು ಬೇರೆಡೆ ಸೆಳೆಯುವುದಕ್ಕಾಗಿ ಮಾಡಲಾಗಿರುವ ಉಪಾಯ ಎಂದು ವ್ಯಂಗ್ಯವಾಡಿದ್ದಾರೆ.

ಮುಖ್ಯಮಂತ್ರಿಯವರ ನಿವಾಸದ ಕೆಳಗೆ ಶಿವಲಿಂಗವಿದೆ ಎಂದು ನಾವು ನಂಬುತ್ತೇವೆ. ಅಲ್ಲಿಯೂ ಉತ್ಖನನ ನಡೆಸಬೇಕು ಎಂದು ಅಖಿಲೇಶ್ ಯಾದವ್ ಹೇಳಿದ್ದಾರೆ. "ಬುಲ್ಡೋಜರ್‌ಗಳಿಂದ ಅಮಾಯಕರ ಮನೆಗಳನ್ನು ಅಕ್ರಮವಾಗಿ ಕೆಡವಲಾಗುತ್ತಿದೆ" ಎಂದು ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಆರೋಪಿಸಿದ್ದಾರೆ.

16 ಸಾವಿರ ಭಾರತೀಯ ಕಟ್ಟಡ ಕಾರ್ಮಿಕರು ಇಸ್ರೇಲ್‌ಗೆ

ಟೆಲ್ ಅವೀವ್: ಹಮಾಸ್ ಉಗ್ರ ದಾಳಿ ಬಳಿಕ ಇಸ್ರೇಲ್‌ನಲ್ಲಿ ಕಟ್ಟಡ ಕಾಮಗಾರಿ ಕೆಲಸದಲ್ಲಿದ್ದ ಪ್ಯಾಲೆಸ್ಟೀನಿಯನ್ನರನ್ನು ದೇಶದಿಂದ ಹೊರಹಾಕಲಾಗಿದ್ದು, ಇದೀಗ ಅವರ ಸ್ಥಾನಕ್ಕೆ ಭಾರತದಿಂದ ಬರೋಬ್ಬರಿ 16 ಸಾವಿರ ಕಾರ್ಮಿಕರನ್ನು ಕರೆಸಿಕೊಳ್ಳಲಾಗಿದೆ.



ಕಳೆದ ವರ್ಷ ಅ.7ರಂದು ಹಮಾಸ್ ನಡೆಸಿದ ಭೀಕರ ಉಗ್ರರ ದಾಳಿಯ ನಂತರ ಪ್ಯಾಲೆಸ್ಟೀನಿಯನ್ ನಿರ್ಮಾಣ ಕಾರ್ಮಿಕರನ್ನು ಇಸ್ರೇಲ್‌ಗೆ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ. ಹತ್ತಾರು ಸಾವಿರ ಪ್ಯಾಲೆಸ್ಟೀನಿಯನ್ ನಿರ್ಮಾಣ ಕಾರ್ಮಿಕರ ತೆರವಿನ ಬಳಿಕ ಉಂಟಾದ ಕಾರ್ಮಿಕರ ಕೊರತೆಯನ್ನು ನೀಗಿಸಲು ಇದೀಗ ಇಸ್ರೇಲ್ ಸರ್ಕಾರ ಭಾರತದ ಮೊರೆ ಹೋಗಿದ್ದು, ಇದೀಗ ಭಾರತದಿಂದ ಸುಮಾರು 16 ಸಾವಿರ ಕಾರ್ಮಿಕರನ್ನು ಇಸ್ರೇಲ್ ಕರೆಸಿಕೊಂಡಿದೆ. ಹಮಾಸ್ ಅಂದು ಆ ದಾಳಿ ನಡೆಸದೇ ಇದಿದ್ದರೆ, ಇಸ್ರೇಲ್‌ನಲ್ಲಿ ನಿಧಾನವಾಗಿ ಹೊರಹೊಮ್ಮುತ್ತಿರುವ ಎತ್ತರದ ಗೋಪುರಗಳು, ಮನೆಗಳು, ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳೊಂದಿಗೆ ಈ ಸ್ಥಳವು ಅರೇಬಿಕ್ ಮಾತನಾಡುವ ಕಾರ್ಮಿಕರಿಂದ ತುಂಬಿರುತ್ತಿತ್ತು. ಆದರೆ ಇಂದು ಪರಿಸ್ಥಿತಿ ಭಿನ್ನವಾಗಿದ್ದು, ಇದೀಗ ಇಲ್ಲಿ ಹಿಂದಿ, ಹೀಬ್ರೂ ಮತ್ತು ಮ್ಯಾಂಡರಿನ್ ಭಾಷೆಗಳನ್ನಾಡುವ ಕಾರ್ಮಿಕರು ಹೆಚ್ಚಾಗಿ ಕಾಣತೊಡಗಿದ್ದಾರೆ.

ಪಂಜಾಬ್ ಬಂದ್: ರೈತರಿಂದ ರಸ್ತೆ ತಡೆ; ರೈಲು-ಬಸ್ ಸೇವೆ ಸ್ಥಗಿತ

ಚಂಡೀಗಢ: ತಮ್ಮ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ ಕಾನೂನು ಖಾತ್ರಿಗೆ ಆಗ್ರಹಿಸಿ ಕೇಂದ್ರದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತರು ಬಂದ್ ಆಚರಿಸುತ್ತಿರುವ ಕಾರಣ ರಾಜ್ಯದ ಹಲವೆಡೆ ರಸ್ತೆ ಮತ್ತು ರೈಲು ಸಂಚಾರ ಸ್ಥಗಿತಗೊಂಡಿದ್ದು, ವಾಣಿಜ್ಯ ಸಂಸ್ಥೆಗಳು ಮುಚ್ಚಲ್ಪಟ್ಟಿವೆ.

ರೈತರು ತಮ್ಮ ಬಂದ್ ಕರೆ ಅಂಗವಾಗಿ ಹಲವು ರಸ್ತೆಗಳಲ್ಲಿ ಧರಣಿ ನಡೆಸಿ, ಪ್ರಯಾಣಿಕರ ಸಂಚಾರಕ್ಕೆ ಅಡ್ಡಿಪಡಿಸಿದರು. ಪ್ರತಿಭಟನಾನಿರತ ರೈತರ ಬೇಡಿಕೆಗಳನ್ನು ಕೇಂದ್ರ ಒಪ್ಪಿಕೊಳ್ಳದಿರುವುದನ್ನು ಖಂಡಿಸಿ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ಕಳೆದ ವಾರ ಬಂದ್‌ಗೆ ಕರೆ ನೀಡಿದ್ದವು. ಧರೇರಿ ಜತ್ತನ್ ಟೋಲ್ ಪ್ಲಾಜಾದಲ್ಲಿ ರೈತರು ಧರಣಿ ನಡೆಸಿದ್ದರಿಂದ ಪಟಿಯಾಲ-ಚಂಡೀಗಢ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ತೊಂದರೆಯಾಯಿತು. ಅಮೃತಸರದ ಗೋಲ್ಡನ್ ಗೇಟ್‌ನಲ್ಲಿ, ನಗರದ ಪ್ರವೇಶ ಬಿಂದುವಿನ ಬಳಿ ಹಲವಾರು ರೈತರು ಸೇರಿ ರಾಂಪುರ ಫುಲ್‌ನಲ್ಲಿ ಧರಣಿ ನಡೆಸಲಾಯಿತು. ಫಗ್ವಾರದಲ್ಲಿ, ರೈತರು ರಾಷ್ಟ್ರೀಯ ಹೆದ್ದಾರಿ-44ರ ಶುಗರ್‌ಮಿಲ್ ಕ್ರಾಸಿಂಗ್ ಬಳಿ ಧರಣಿ ನಡೆಸಿದರು, ಫಗ್ವಾರದಿಂದ ನಕೋದರ್, ಹೋಶಿಯಾರ್‌ಪುರ ಮತ್ತು ನವನ್ ಶಹರ್ ಕಡೆಗೆ ಹೋಗುವ ರಸ್ತೆಗಳನ್ನು ತಡೆದರು. ಅಂಬಾಲಾ ಸೇರಿದಂತೆ ರಾಜ್ಯದ ಕೆಲವು ಅಕ್ಕಪಕ್ಕದ ಪ್ರದೇಶಗಳಲ್ಲೂ ಬಂದ್‌ನ ಪ್ರಭಾವ ಕಂಡುಬಂದಿದೆ.

ಹೆಣ್ಮಕ್ಕಳಿರುವ ಕಟ್ಟಡಗಳಲ್ಲಿ ಕಿಟಕಿ ಬ್ಯಾನ್ ಮಾಡಿ ತಾಲಿಬಾನ್ ಆದೇಶ

ಅಫ್ಘಾನಿಸ್ತಾನ: ಮಹಿಳೆಯರಿಗೆ ಒಂದಿಲ್ಲೊಂದು ನಿರ್ಬಂಧ ವಿಧಿಸುವ ಮೂಲಕ ಸದಾ ಸುದ್ದಿಯಲ್ಲಿರುವ ತಾಲಿಬಾನ್ ಈಗ ಹೊಸದೊಂದು ಕಾನೂನು ತಂದಿದ್ದು, ಇದರಿಂದ ಮಹಿಳೆಯರು ಮತ್ತಷ್ಟು ಆತಂಕಗೊಂಡಿದ್ದಾರೆ. ಹೊಸದಾಗಿ ವಸತಿ ಕಟ್ಟಡಗಳನ್ನು ನಿರ್ಮಾಣ ಮಾಡುವಾಗ ಅಫ್ಘಾನ್ ಮಹಿಳೆಯರು ಬಳಸುವ ಪ್ರದೇಶಗಳಲ್ಲಿ ಕಿಟಕಿಗಳನ್ನು ನಿರ್ಮಿಸುವುದನ್ನು ನಿಷೇಧಿಸಿ ತಾಲಿಬಾನ್‌ನ ಸರ್ವೋಚ್ಚ ನಾಯಕ ಆದೇಶವನ್ನು ಹೊರಡಿಸಿದ್ದಾರೆ. ಅಲ್ಲದೆ ಈಗಾಗಲೇ ಅಸ್ತಿತ್ವದಲ್ಲಿರುವವ ಕಿಟಕಿಗಳನ್ನು ನಿರ್ಬಂಧಿಸಬೇಕು ಎಂದು ಹೇಳಿದ್ದಾರೆ.

ತಾಲಿಬಾನ್ ಸರ್ಕಾರದ ವಕ್ತಾರರು ಬಿಡುಗಡೆ ಮಾಡಿದ ಹೇಳಿಕೆ ಪ್ರಕಾರ, ಹೊಸ ಕಟ್ಟಡಗಳು ಕಿಟಕಿಗಳನ್ನು ಹೊಂದಿರಬಾರದು. ಮನೆಯನ್ನು ನಿರ್ಮಿಸುವ ವ್ಯಕ್ತಿಗಳು, ಮಹಿಳೆಯರು ಸಾಮಾನ್ಯವಾಗಿ ಬಳಸುವ ಅಡುಗೆ ಮನೆ, ಅಂಗಳ, ಬಾವಿ ಇತರೆ ಸ್ಥಳಗಳಲ್ಲಿ ಕಿಟಕಿಗಳನ್ನು ನಿರ್ಮಿಸಬಾರದು ಎಂದು ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್ ಎಕ್ಸ್‌ನಲ್ಲಿ ಸರ್ಕಾರದ ವಕ್ತಾರ ಜಬಿಹುಲ್ಲಾ ಮುಜಾಹಿದ್ ಪೋಸ್ಟ್ ಮಾಡಿದ ಆದೇಶದ ಪ್ರಕಾರ, ಬಾವಿಗಳಿಂದ ನೀರು ಸಂಗ್ರಹಿಸುವುದು, ಅಡುಗೆ ಮನೆಗಳಲ್ಲಿ ಅಥವಾ ಅಂಗಳದಲ್ಲಿ ಕೆಲಸ ಮಾಡುವ ಮಹಿಳೆಯರನ್ನು ನೋಡುವುದು ಅಶ್ಲೀಲ ಕೃತ್ಯಗಳಿಗೆ ಕಾರಣವಾಗಬಹುದು. ನೆರೆಹೊರೆಯವರ ಮನೆಗಳನ್ನು ನೋಡಲು ಸಾಧ್ಯವಿಲ್ಲ ಎಂದು ಖಚಿತಪಡಿಸಿಕೊಳ್ಳಲು ಪುರಸಭೆ ಅಧಿಕಾರಿಗಳು ನಿರ್ಮಾಣ ಸ್ಥಳಗಳನ್ನು ಮೇಲ್ವಿಚಾರಣೆ ಮಾಡಬೇಕಾಗುತ್ತದೆ.

ಕಟ್ಟೆಮಾಡು ಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವ ವಸ್ತ್ರಸಂಹಿತೆ ವಿವಾದ

ನಿಷೇಧಾಜ್ಞೆ ನಡುವೆ ಕಟ್ಟೆಮಾಡುವಿಗೆ ಬೈಕ್ ರ್‍ಯಾಲಿ ತೆರಳಿದವರ ಬಂಧನ, ಬಿಡುಗಡೆ

ರಸ್ತೆ ತಡೆ, ಗೋಣಿಕೊಪ್ಪ ಬಂದ್

ಮಡಿಕೇರಿ, ಡಿ.30– ಕಟ್ಟೆಮಾಡು ಶ್ರೀ ಮಹಾಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವ ಸಂದರ್ಭ ವಸ್ತ್ರಸಂಹಿತೆಗೆ ಸಂಬಂಧಿಸಿದಂತೆ ಉಂಟಾದ ವಿವಾದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಮೃತ್ಯುಂಜಯ ದೇವಾಲಯದ 5 ಕಿ.ಮೀ. ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಿದೆ. ಈ ನಡುವೆ ಕಟ್ಟೆಮಾಡುವಿಗೆ ಬೈಕ್ ರ್‍ಯಾಲಿ ತೆಳಿದವನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.

ಮೃತ್ಯುಂಜಯ ದೇವಾಲಯ ಘಟನೆಯನ್ನು ಖಂಡಿಸಿ ವಿವಿಧ ಕೊಡವ ಸಂಘಟನೆಗಳು ಸೋಮವಾರ ಕಟ್ಟೆಮಾಡು ಕಡೆಗೆ ಬೈಕ್ ರ್‍ಯಾಲಿ ತೆರಳಲು ಸಿದ್ಧತೆ ನಡೆಸಿದ್ದವು. ಈಗಾಗಲೇ ದೇವಾಲಯ ವ್ಯಾಪ್ತಿ ನಿಷೇಧಾಜ್ಞೆ ಜಾರಿಯಲ್ಲಿರುವ ಕಾರಣ ರ್‍ಯಾಲಿಗೆ ಅವಕಾಶ ವಿಲ್ಲದ ಹಿನ್ನೆಲೆಯಲ್ಲಿ ಪೊನ್ನಂಪೇಟೆಯಲ್ಲಿ ಕೊಡವ ಸಂಘಟನೆಗಳ ಪ್ರಮುಖರಾದ ಕೊಡವ ರೈಡರ್ಸ್ ಕ್ಲಬ್ ಅಧ್ಯಕ್ಷ ಅಜ್ಜಿಕುಟ್ಟಿರ ಪೃಥ್ವಿ ಸುಬ್ಬಯ್ಯ, ಚಮ್ಮಟ್ಟಿರ ಪ್ರವೀಣ್ ಉತ್ತಪ್ಪ, ಸಣ್ಣುವಂಡ ದರ್ಶನ್ ಕಾವೇರಪ್ಪ ಅವರನ್ನು ಅವರ ಮನೆಯಿಂದಲೇ ವಶಕ್ಕೆ ಪಡೆಯಲಾಯಿತು. ಇನ್ನು ಪೊನ್ನಂಪೇಟೆ ಪೊಲೀಸ್ ಠಾಣೆ ಎದುರು ಪ್ರತಿಭಟನೆಗೆ ಮುಂದಾಗಿದ್ದ 50ಕ್ಕೂ ಅಧಿಕ ಮಂದಿಯನ್ನು ಪೊಲೀಸರು ಮುನ್ನೆಚ್ಚರಿಕಾ ಕ್ರಮವಾಗಿ ವಶಕ್ಕೆ ಪಡೆದರು. ನಂತರ ಖಾಸಗಿ ಮತ್ತು ಪೊಲೀಸ್ ವಾಹನಗಳಲ್ಲಿ ಪ್ರತಿಭಟನಾಕಾರರನ್ನು ಕುಶಾಲನಗರಕ್ಕೆ ಕರೆದೊಯ್ದು ಬಳಿಕ ಬಿಡುಗಡೆಗೊಳಿಸಿದರು.



ಪೊನ್ನಂಪೇಟೆಯಲ್ಲಿ ಕೊಡವ ಸಮುದಾಯ ಮತ್ತು ಕೊಡವ ಸಂಘಟನೆಗಳ ಪ್ರಮುಖರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಬಂದ್‌ಗೆ ಕರೆ–ರಸ್ತೆ ತಡೆ: ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದಿರುವ ಸುದ್ದಿ ಹರಡುತ್ತಿದ್ದಂತೆಯೇ ಕೊಡವ ಸಮುದಾಯದ ನೂರಾರು ಮಂದಿ ಪೊನ್ನಂಪೇಟೆ, ಹುದಿಕೇರಿ, ಮೂರ್ನಾಡು ಕಡೆಗಳಲ್ಲಿ ಜಮಾಯಿಸಿ ಪ್ರತಿಭಟನಾಕಾರರನ್ನು ತಕ್ಷಣ ಬಿಡುಗಡೆ ಮಾಡುವಂತೆ ಆಗ್ರಹಿಸಿದರು.

ಪೊನ್ನಂಪೇಟೆ, ಹುದಿಕೇರಿ, ಶ್ರೀಮಂಗಲ, ಟಿ.ಶೆಟ್ಟಿಗೇರಿ, ನಾಲ್ಕೇರಿ ಭಾಗಗಳಲ್ಲಿ ಸ್ವಯಂ ಘೋಷಿತ ಬಂದ್‌ಗೆ ಕರೆ ನೀಡಲಾಯಿತು. ಹುದಿಕೇರಿಯಲ್ಲಿ ಕೊಡವ ಸಮುದಾಯ ಮತ್ತು ಕೊಡವ ಸಂಘಟನೆಗಳ ಪ್ರಮುಖರು ರಸ್ತೆ ತಡೆ ನಡೆಸಿ, ಪೊಲೀಸರು ಮತ್ತು ಜಿಲ್ಲಾಡಳಿತದ ಕ್ರಮಕ್ಕೆ ಆಕ್ರೋಶ ವ್ಯಕ್ತಪಡಿಸಿದರು. ವಶಕ್ಕೆ ಪಡೆದವರನ್ನು ತಕ್ಷಣ ಬಿಡುಗಡೆ ಮಾಡಬೇಕು ಪೊಲೀಸ್ ಇಲಾಖೆ ಮತ್ತು ಜಿಲ್ಲಾಡಳಿತ ಪ್ರತಿಭಟನೆ ಹಕ್ಕನ್ನು ಕಸಿಯುವ ಮೂಲಕ ದೌರ್ಜನ್ಯ ಎಸಗಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಗೋಣಿಕೊಪ್ಪ ಬಂದ್: ಗೋಣಿಕೊಪ್ಪ ಕೊಡವ ಸಮಾಜ, ಇಗ್ಗುತ್ತಪ್ಪ ಕೊಡವ ಸಮಾಜ ಸಹಿತ ವಿವಿಧ ಕೊಡವ ಸಂಘಟನೆಗಳು ಗೋಣಿಕೊಪ್ಪ ಬಂದ್‌ಗೆ ಕರೆ ನೀಡಿದವು. ಈ ಹಿನ್ನೆಲೆಯಲ್ಲಿ ಸೋಮವಾರ ಮಧ್ಯಾಹ್ನ 1 ರಿಂದ ಸಂಜೆ 4 ಗಂಟೆವರೆಗೆ ಗೋಣಿಕೊಪ್ಪದಲ್ಲಿ ಸ್ವಯಂ ಘೋಷಿತ ಬಂದ್ ನಡೆಸಲಾಯಿತು. ಎಲ್ಲಾ ಅಂಗಡಿ ಮುಂಗಟ್ಟುಗಳು ಮುಚ್ಚುವ ಮೂಲಕ ವರ್ತಕರು ಬಂದ್‌ಗೆ ಬೆಂಬಲ ನೀಡಿದರು.

ಪೊಲೀಸ್ ಸರ್ಪಗಾವಲು: ಕಟ್ಟೆಮಾಡು ಗ್ರಾಮದ ಮಹಾಮೃತ್ಯುಂಜಯ ದೇವಾಲಯ ಆವರಣದಲ್ಲಿ ಅಡಿಷನಲ್ ಎಸ್‌ಪಿ ಸುಂದರ್ ರಾಜ್ ನೇತೃತ್ವದಲ್ಲಿ ಇಬ್ಬರು ಡಿವೈಎಸ್‌ಪಿ, ಐವರು ವೃತ್ತ ನಿರೀಕ್ಷಕರು, 5 ಕೆಎಸ್‌ಆರ್‌ಪಿ, 5 ಜಿಲ್ಲಾ ಸಶಸ್ತ್ರ ದಳ ಸಿಬ್ಬಂದಿ ಸಹಿತ ಒಟ್ಟು 300 ಪೊಲೀಸ್ ರ'ನ್ನು ನಿಯೋಜಿಸಲಾಗಿದೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಭೇಟಿ ನೀಡಿ, ಪರಿಸ್ಥಿತಿ ಅವಲೋಕನ ನಡೆಸಿದರು. ದೇವಾಲಯ ಆವರಣದಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳೇ ನೆರೆದಿದ್ದು, ಶಿವನಿಗೆ ಪೊಲೀಸ್ ಸರ್ಪಗಾವಲು ಹಾಕಿದಂತಾಗಿದೆ.

ಕೊಡಗಿನ ಜನರು ಶಾಂತಿ ಕಾಪಾಡಿಕೊಳ್ಳಬೇಕೆಂದು ಎಸ್ಪಿ ಕೆ.ರಾಮರಾಜನ್ ಮನವಿ ಮಾಡಿದ್ದು, ಯಾವುದೇ ವಿಚಾರವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲು ಸಾಧ್ಯವಿದೆ. ಜಿಲ್ಲಾಡಳಿತ ಮೂಲಕ ಸಮಸ್ಯೆಪರಿಹಾರ ಕಾಣಬಹುದು. ನ್ಯಾಯಾಲಯಕ್ಕೂ ಮೊರೆ ಹೋಗಬಹುದು. ಅದನ್ನು ಹೊರತುಪಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಜನಾಂಗದ ವಿರುದ್ಧ ಅವಹೇಳನ ಮಾಡುವುದು ಸರಿಯಲ್ಲ. ಈ ವಿಚಾರದಲ್ಲಿ ಯಾರೂ ಕಾನೂನು ಕೈಗೆತ್ತಿಕೊಳ್ಳಬಾರದು ಎಂದು ಮನವಿ ಮಾಡಿದ್ದಾರೆ.

ಜಿಲ್ಲಾಧಿಕಾರಿಗಳಿಂದ ಶಾಂತಿಸಭೆ

ಸಮಸ್ಯೆ ಪರಿಹಾರಕ್ಕೆ ವಾರದ ಕಾಲಾವಕಾಶ ಕೇಳಿದ ದೇವಸ್ಥಾನ ಆಡಳಿತ ಮಂಡಳಿ



ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿದರು.

ಮಡಿಕೇರಿ: ವಸ್ತ್ರಸಂಹಿತೆ ವಿಚಾರಕ್ಕೆ ಸಂಬಂಧಿಸಿದಂತೆ ಕಟ್ಟೆಮಾಡು ಶ್ರೀ ಮಹಾಮೃತ್ಯುಂಜಯ ದೇವಾಲಯ ಆಡಳಿತ ಮಂಡಳಿ ಎಲ್ಲಾ ಸಮುದಾಯಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಸಭೆ ನಡೆಸಿ ನಿರ್ಧಾರ ಪ್ರಕಟಿಸಲು 1 ವಾರ ಸಮಯಾವಕಾಶ ಕೋರಿದ್ದು, ಜಿಲ್ಲಾಡಳಿತದಿಂದ ಸಮ್ಮತಿ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾಹಿತಿ ನೀಡಿದರು.

ದೇವಾಲಯ ವಾರ್ಷಿಕೋತ್ಸವ ಸಂದರ್ಭ ವಸ್ತ್ರಸಂಹಿತೆ ವಿಚಾರಕ್ಕೆ ಸಂಬಂಧಿಸಿದಂತೆ ಉಂಟಾದ ವಿವಾದದ ಹಿನ್ನೆಲೆಯಲ್ಲಿ ಎರಡು ಸಮುದಾಯಗಳ ಪ್ರಮುಖರ ಜೊತೆಯಲ್ಲಿ ಜಿಲ್ಲಾಧಿಕಾರಿಗಳು ತಮ್ಮ ಕಚೇರಿ ಸಭಾಂಗಣದಲ್ಲಿ 3 ಗಂಟೆಗಳ ಕಾಲ ಸುದೀರ್ಘ ಶಾಂತಿ ಸಭೆ ನಡೆಸಿದರು. ದೇವಾಲಯ ನಿರ್ಮಾಣ, ದೇವಾಲಯ ಬೈಲಾ, ಸಮಸ್ಯೆಗೆ ಕಾರಣ ಮತ್ತು ಪರಿಹಾರಗಳ ಕುರಿತು ಎರಡೂ ಸಮುದಾಯದ ಪ್ರಮುಖರು ತಮ್ಮ ಅಭಿಪ್ರಾಯವನ್ನು ಜಿಲ್ಲಾಡಳಿತಕ್ಕೆ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಜಿಲ್ಲಾಧಿಕಾರಿಗಳು, ವಿವಾದಕ್ಕೆ ಸಂಬಂಧಿಸಿದಂತೆ ಈಗಾಗಲೇ ದೇವಾಲಯ ವ್ಯಾಪ್ತಿಯಲ್ಲಿ ಸೆಕ್ಷನ್ 163 ಅಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಕೊಡಗು ಜಿಲ್ಲೆ ಶಾಂತಿಯ ತೋಟವಾಗಬೇಕು ಎಂಬ ಉದ್ದೇಶದಿಂದ ಎರಡೂ ಸಮುದಾಯದ ಮುಖಂಡರ ಸಭೆ ನಡೆಸಿ ಅವರ ಅಭಿಪ್ರಾಯ ಕೇಳಲಾಗಿದೆ. ಈ ಸಂದರ್ಭ ದೇವಾಲಯ ಆಡಳಿತ ಮಂಡಳಿ ಎಲ್ಲಾ ಸಮುದಾಯಕ್ಕೂ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸಭೆ ನಡೆಸಿ ನಿರ್ಧಾರ ಪ್ರಕಟಿಸಲಾಗುವುದು. ಇದಕ್ಕಾಗಿ 1 ವಾರ ಕಾಲಾವಕಾಶ ಕೋರಿದ್ದು, ಜಿಲ್ಲಾಡಳಿತ ಅದಕ್ಕೆ ಸಮ್ಮತಿ ನೀಡಿದೆ ಎಂದು ಹೇಳಿದರು.

ಈ ವಿಚಾರಕ್ಕೆ ಎರಡೂ ಸಮುದಾಯದ ಪ್ರಮುಖರು ಒಪ್ಪಿಗೆ ಸೂಚಿಸಿದ್ದಾರೆ. ಈಗಾಗಲೇ ದೇವಾಲಯ ವ್ಯಾಪ್ತಿಯಲ್ಲಿ ಜ.2ರವರೆಗೆ ನಿಷೇಧಾಜ್ಞೆ ಜಾರಿಯಲ್ಲಿದ್ದು, ಪರಿಸ್ಥಿತಿ ಆಧರಿಸಿ ನಿಷೇಧಾಜ್ಞೆ ಮುಂದುವರೆಸಲು ತೀರ್ಮಾನಿಸಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾತನಾಡಿ, ಸಮಸ್ಯೆ ಸರಿಪಡಿಸಲು ಎರಡೂ ಸಮುದಾಯದವರು ಒಪ್ಪಿಗೆ ಸೂಚಿಸಿದ್ದಾರೆ. ಕಾನೂನು ರೀತಿ ಸರಿಪಡಿಸಲು ಸಾಧ್ಯವಿದೆ ಎಂಬುದನ್ನು ಅವರಿಗೆ ವಿವರಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನ ಮಾಡಿರುವ ಬಗ್ಗೆ ಎರಡೂ ಸಮುದಾಯದವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅವಹೇಳನ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಲು ಎರಡೂ ಸಮುದಾಯದವರು ಒಪ್ಪಿಗೆ ಸೂಚಿಸಿದ್ದಾರೆ. ಅದರಂತೆ ಕ್ರಮ ಜರುಗಿಸಲಾಗುವುದು ಎಂದರು. ಗೋಷ್ಠಿಯಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜು, ಉಪವಿಭಾಗಾಧಿಕಾರಿ ನರ್ವಾಡೆ ವಿನಾಯಕ, ಪ್ರೊಬೆಷನರಿ ಎಸ್‌ಪಿ ಬೆನಕ ಪ್ರಸಾದ್ ಉಪಸ್ಥಿತರಿದ್ದರು.

ಇಂದು ಕೊಡಗಿಗೆ ಯೋಧ ದಿವಿನ್ ಪಾರ್ಥಿವ ಶರೀರ



ಮಡಿಕೇರಿ, ಡಿ.30–ಜಮ್ಮು ಕಾಶ್ಮೀರದ ಪೂಂಚ್‌ನಲ್ಲಿ ಸೇನಾ ವಾಹನ ಕಣಿವೆಗೆ ಉರುಳಿ ಬಿದ್ದು ಗಂಭೀರವಾಗಿ ಗಾಯಗೊಂಡು ಶ್ರೀನಗರದ ಉದಂಪುರ್ ಕಮಾಂಡೋ ಆಸ್ಪತ್ರೆಯಲ್ಲಿ ಭಾನುವಾರ ರಾತ್ರಿ ನಿಧನರಾದ ಕೊಡಗಿನ ಯೋಧ ಪಳಂಗೋಟು ಪಿ.ದಿವಿನ್ (28) ಅವರ ಪಾರ್ಥಿವ ಶರೀರ ಮಂಗಳವಾರ (ಡಿ.31ರ) ಸಂಜೆ ಬೆಂಗಳೂರಿಗೆ ಆಗಮಿಸಲಿದೆ.

ಸೋಮವಾರ ಮಧ್ಯಾಹ್ನದ ವೇಳೆ ಯೋಧ ದಿವಿನ್ ಮರಣೋತ್ತರ ಪರೀಕ್ಷೆ ನಡೆದಿದ್ದು, ವಿಶೇಷ ವಿಮಾನ ಮಿಸ್ ಆದ ಕಾರಣ ಪಾರ್ಥಿವ ಶರೀರದ ಸ್ಥಳಾಂತರ ಕಾರ್ಯ ತಡವಾಗಿದೆ. ಬೆಂಗಳೂರಿನಲ್ಲಿ ಸೇನಾ ಗೌರವ ಬಳಿಕ ಸೇನಾ ವಾಹನದಲ್ಲೇ ಹುತಾತ್ಮ ಯೋಧ ದಿವಿನ್ ಅವರ ಪಾರ್ಥಿವ ಶರೀರ ಹುಟ್ಟೂರು ಸೋಮವಾರಪೇಟೆ ತಾಲೂಕಿನ ಆಲೂರು ಸಿದ್ದಾಪುರಕ್ಕೆ ಆಗಮಿಸಲಿದೆ. ಅಲ್ಲಿನ ಸರ್ಕಾರಿ ಶಾಲಾ ಆವರಣದಲ್ಲಿ ಅಂತಿಮ ದರ್ಶನಕ್ಕೆ ಕುಟುಂಬಸ್ಥರು ಮತ್ತು ಸಾರ್ವಜನಿಕರಿಗೆ ಅವಕಾಶ ಮಾಡಲಾಗಿದೆ. ಜನವರಿ 1 ರಂದು ಅವರ ಜಮೀನಿನಲ್ಲಿ ಗೌಡ ಸಮುದಾಯದ ಪದ್ಧತಿಯಂತೆ ಅಂತ್ಯಕ್ರಿಯೆ ನೆರವೇರಲಿದೆ.

ಮಡಿಕೇರಿಯಲ್ಲಿ ಫ್ರಿಡ್ಜ್ ಗ್ಯಾಸ್ ಸಿಲಿಂಡರ್ ಸ್ಫೋಟ



ಮಡಿಕೇರಿಯಲ್ಲಿ ಫ್ರಿಡ್ಜ್‌ನ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡಿರುವುದು.

ಮಡಿಕೇರಿ, ಡಿ.30– ಮನೆಯೊಳಗಿದ್ದ ಫ್ರಿಡ್ಜ್‌ನ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡ ಘಟನೆ ನಗರದಲ್ಲಿ ನಡೆದಿದೆ.

ನಗರದ ಕಾನ್ವೆಂಟ್ ಜಂಕ್ಷನ್ ಬಳಿಯ ಉದ್ಯಮಿ ಸುಬ್ರಹ್ಮಣ್ಯ ಹೊಳ್ಳ ಅವರು ಬಾಡಿಗೆಗೆ ನೀಡಿರುವ ಮನೆಯಲ್ಲಿ ದುರಂತ ಸಂಭವಿಸಿದ್ದು, ಬಾಡಿಗೆದಾರ ಹರೀಶ್ ಕಾರಂತ್ ಅವರು 14 ದಿನ ರಜೆಯಲ್ಲಿ ಸ್ವಗ್ರಾಮ ಕುಂದಾಪುರಕ್ಕೆ ತೆರಳಿದ್ದರು. ಸುಬ್ರಹ್ಮಣ್ಯ ಹೊಳ್ಳ ಅವರ ಪತ್ನಿ ವೀಣಾ ಹೊಳ್ಳಗೆ ದುರ್ವಾಸನೆ ಬಂದಿದೆ. ನಂತರ ಕಿಟಕಿ ಮೂಲಕ ಬಾಡಿಗೆಗೆ ನೀಡಿದ್ದ ಮನೆಯೊಳಗೆ ನೋಡಿದಾಗ ಕೋಣೆ ಸಂಪೂರ್ಣ ಕರಕಲಾಗಿರುವುದು ಪತ್ತೆಯಾಗಿದೆ. ಸುಬ್ರಹ್ಮಣ್ಯ ಬಾಡಿಗೆದಾರರಿಗೆ ಕರೆ ಮಾಡಿ ವಿಚಾರ ತಿಳಿಸಿ, ಬೀಗ ತೆಗೆದು ನೋಡಿದಾಗ ಮನೆಯ ನಾಲ್ಕು ಕೋಣೆಗಳು ಸಂಪೂರ್ಣ ಕರಕಲಾಗಿರುವುದು ಕಂಡು ಬಂದಿದೆ. ಎಲ್ಲಿಯೂ ಬೆಂಕಿ ಹೊತ್ತಿದ್ದ ಕುರುಹೇ ಇರಲಿಲ್ಲವಾದರೂ ಸೂಕ್ಷ್ಮವಾಗಿ ಗಮನಿಸಿದ ಸಂದರ್ಭ ಮನೆಯ ಫ್ರಿಡ್ಜ್ ಬಿರುಕು ಬಿಟ್ಟಿರುವುದು ಪತ್ತೆಯಾಗಿದೆ.

ಸೋಮವಾರ ಬೆಂಗಳೂರಿನಿಂದ ಫ್ರಿಡ್ಜ್ ಕಂಪನಿಯ ತಂತ್ರಜ್ಞರು ಮಡಿಕೇರಿಗೆ ಆಗಮಿಸಿ ಪರಿಶೀಲಿಸಿದ್ದು, ಇದು ಫ್ರಿಡ್ಜ್‌ನೊಳಗಿನ ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ಉಂಟಾದ ಅನಾಹುತವಾಗಿದೆ. ಈ ರೀತಿ ಸ್ಫೋಟ ಸಂಭವಿಸುವುದು ತುಂಬಾನೇ ಕಡಿಮೆ. ಮನೆಯ ಕೋಣೆಗಳು ಮಸಿಯಿಂದಾಗಿ ಕಪ್ಪಾಗಿದ್ದು, ನಾಲ್ಕು ತಿಂಗಳ ಹಿಂದೆ ಬಣ್ಣಬಳಿದಿದ್ದ ಗೋಡೆಗಳು ಕಪ್ಪು ಬಣ್ಣದಿಂದ ಕೂಡಿದೆ. ಮನೆಯ ಕೋಣೆಗಳ ಟೈಲ್ಸ್ ಕೂಡ ಅಲ್ಲಲ್ಲಿ ಒಡೆದು ಹೋಗಿರುವುದು ಸ್ಫೋಟದ ತೀವ್ರತೆಯಿಂದ ಎಂದು ಮಾಹಿತಿ ನೀಡಿದ್ದಾರೆ.

ಅವಹೇಳನಕಾರಿ ಸಂದೇಶ: ಇಬ್ಬರ ಬಂಧನ

ಮಡಿಕೇರಿ: ಕ್ರಿಸ್‌ಮಸ್ ಹಾಗೂ ಏಸುಕ್ರಿಸ್ತರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಸಂದೇಶ ಹಾಕಿದ್ದ ಇಬ್ಬರನ್ನು ಮಡಿಕೇರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ಕೆಂಗೇರಿ ನಿವಾಸಿ ಎಂ.ವಿ.ಲೋಕನಾಥ್(40) ಮತ್ತು ಕೊಡಗು ಜಿಲ್ಲೆಯ ನೆಲಜಿ ಮೂಲದವರಾದ ಪ್ರಸ್ತುತ ಬೆಂಗಳೂರಿನ ಹೆಸರಘಟ್ಟ ನಿವಾಸಿ ಎಂ.ಪಿ. ಮಾದಪ್ಪ(54) ಬಂಧಿತ ಆರೋಪಿಗಳು. ಏಸುಕ್ರಿಸ್ತರ ಬಗ್ಗೆ ಅವಹೇಳನ ಮಾಡಿರುವ ಕುರಿತು ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ತೀತರಮಾಡ ತಂಗಮ್ಮ ನಿಧನ



ಪೊನ್ನಂಪೇಟೆ: ಪೊನ್ನಂಪೇಟೆ ತಾಲೂಕಿನ ನಲ್ಲೂರು ಗ್ರಾಮದ ದಿವಂಗತ ಟಿ.ಎಸ್.ಉತ್ತಯ್ಯ ಅವರ ಪತ್ನಿ ತೀತರಮಾಡ ತಂಗಮ್ಮ (ತಾಮನೆ ಚೇಂದಂಡು(89) ಅವರು ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಮಕ್ಕಳಾದ ತೀತರಮಾಡ ಮಹೇಶ್ ಮಂದಣ್ಣ, ಸೋಮಣ್ಣ, ಮನು, ಹೇಮಾ, ರೇಖಾ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮದಲ್ಲಿನ ಕುಟುಂಬದ ಜಮೀನಿನಲ್ಲಿ ನಾಳೆ (ಮಂಗಳವಾರ) ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜ.3ರಿಂದ ನಗರದಲ್ಲಿ ರಂಗಶಂಕರ ನಾಟಕೋತ್ಸವ

- ರಂಗಕಲಿಕಾ ಕಾರ್ಯಾಗಾರ, ನಾಟಕಗಳ ಛಾಯಾಚಿತ್ರ ಪ್ರದರ್ಶನ
- ಶಾಂತಲಾ ಕಲಾವಿದರ ತಂಡದ ಅಧ್ಯಕ್ಷ ಅಬ್ರಾಹಾಂ ಡಿ.ಸಿಲ್ವಾ ಮಾಹಿತಿ



ಸುದ್ದಿಗೋಷ್ಠಿಯಲ್ಲಿ ಶಾಂತಲಾ ಕಲಾವಿದರ ತಂಡದ ಅಧ್ಯಕ್ಷ ಅಬ್ರಾಹಾಂ ಡಿ.ಸಿಲ್ವಾ ಮಾತನಾಡಿದರು.

ಚಾಮರಾಜನಗರ, ಡಿ.30–ಶಾಂತಲಾ ಕಲಾವಿದರ ತಂಡದ 50ನೇ ವರ್ಷ ಹಾಗೂ ಬೆಂಗಳೂರಿನ ರಂಗಶಂಕರ ರಂಗತಂಡದ 20ನೇ ವಾರ್ಷಿಕೋತ್ಸವ ಅಂಗವಾಗಿ ಜ.3ರಿಂದ 8ರವರಗೆ ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ 'ರಂಗಶಂಕರ' ನಾಟಕೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾಂತಲಾ ಕಲಾವಿದರ ತಂಡದ ಅಧ್ಯಕ್ಷ ಅಬ್ರಾಹಾಂ ಡಿ.ಸಿಲ್ವಾ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ತಂಡದಿಂದ ಈವರಗೆ 13 ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ತಂಡ ಅಸ್ತಿತ್ವಕ್ಕೆ ಬಂದು 50ವರ್ಷ ಸಂದ ಹಿನ್ನೆಲೆಯಲ್ಲಿ ನಾಟಕೋತ್ಸವ ಹಮ್ಮಿಕೊಳ್ಳಬೇಕು ಎಂಬುದು ತಂಡದ ಬಹುದಿನಗಳ ಆಸೆಯಾಗಿತ್ತು. ಆ ಕನಸು ರಂಗಶಂಕರ ನಾಟಕೋತ್ಸವ ಮೂಲಕ ಸಾಕಾರಗೊಂಡಿದೆ. ಜ.3ರಂದು ಸಂಜೆ 5.30ಕ್ಕೆ ಹಿರಿಯ ನಟಿ, ರಂಗಭೂಮಿ ಕಲಾವಿದೆ ಅರುಂಧತಿ ನಾಗ್ ನಾಟಕೋತ್ಸವಕ್ಕೆ ಚಾಲನೆ ನೀಡಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರಿನ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ನಾಟಕಗಳ ಪ್ರದರ್ಶನ: ಪ್ರತಿದಿನ ಸಂಜೆ 7ಕ್ಕೆ ನಾಟಕ ಪ್ರದರ್ಶನ ನಡೆಯಲಿದ್ದು, ಜ.3ರಂದು ಬಿ.ಎಸ್.ವಿನಯ್ ರಚನೆಯ ವಿ.ಚಿತ್ರಾ ನಿರ್ದೇಶನದ 'ಅಶ್ವಘೋಷ', 4ರಂದು ಇವಾನ್ ಮಿಂಚೆಲ್ ರಚನೆಯ ಬೆಂಗಳೂರಿನ ಥಿಯೇಟರ್ ಅನ್ಸುಬಲ್ ತಂಡದಿಂದ ಅಭಿಮನ್ಯು ಭೂಪತಿ ನಿರ್ದೇಶನದ 'ಸುಡುಗಾಡು ಸಂಘ', 5ರಂದು ಬೈಕಾಡಿ ಮಂದಾರ ಸಾಂಸ್ಕೃತಿಕ ಹಾಗೂ ಸೇವಾ ಸಂಘಟನೆಯ 'ಬೆತ್ತಲಾಟ', 6 ರಂದು ಬೆಂಗಳೂರಿನ ಖಾಲಿರಂಗ ತಂಡದಿಂದ ಕಾವ್ಯಾ ಕಡಮೆ ರಚನೆಯ 'ನಿರಂಜನ ಖಾಲಿಕೊಡ' ನಿರ್ದೇಶನದ 'ಡೋರ್ ನಂ–8', 7ರಂದು ತುಮಕೂರಿನ ಗಳಿಗೇನಹಳ್ಳಿ ರಂಗಾರಂಭ ತಂಡದಿಂದ ವಿವೇಕ ಶಾನಭಾಗ ರಚನೆಯ ಶ್ರೀನಿವಾಸಮೂರ್ತಿ ನಿರ್ದೇಶನದ 'ಬಹುಮುಖಿ' ಹಾಗೂ 8ರಂದು ಬೆಂಗಳೂರಿನ ಜಂಗಮಕಲೆಕ್ಟಿವ್ ತಂಡದವರಿಂದ ಕೆ.ಪಿ.ಲಕ್ಷ್ಮಣ್ ರಚನೆ ನಿರ್ದೇಶನದ 'ಬಾಬ್ ಮಾರ್ಲಿ, ಫ್ರಂ ಕೋಡಿಹಳ್ಳಿ' ನಾಟಕ ಪ್ರದರ್ಶನಗೊಳ್ಳಲಿವೆ ಎಂದರು.

ವಿವಿಧ ಕಾರ್ಯಕ್ರಮ: ಶಾಂತಲಾ ಕಲಾವಿದರ ತಂಡದ ಮ್ಯಾನೇಜಿಂಗ್ ಟ್ರಸ್ಟಿ ಕೆ.ವೆಂಕಟರಾಜು ಮಾತನಾಡಿ, ನಾಟಕ ಪ್ರದರ್ಶನಕ್ಕೂ ಮುಂಚೆ ಜಿಲ್ಲಾ ರಂಗಮಂದಿರ ಆವರಣದಲ್ಲಿ ಜ.3ರಂದು ರಾಮಸಮುದ್ರ ರಂಗರಾಜ್ ತಂಡದಿಂದ ನಾದಸ್ವರವಾದನ, 4ರಂದು ಕೊಡಗಾಪುರ ಡ್ರಾಮಾ ಮಾಸ್ಟರ್ ಮಹದೇವಪ್ಪ ತಂಡದಿಂದ ಮೂಡಲಪಾಯ ಯಕ್ಷಗಾನ ಹಾಡು, 5ರಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ದೊಡ್ಡಗವಿಬಸಪ್ಪ ತಂಡದಿಂದ ಜಾನಪದ ಗೀತೆ, 6ರಂದು ರಾಮಸಮುದ್ರ ದರ್ಶನ್ ತಂಡದಿಂದ ಗೊರವರ ಕುಣಿತ, 7ರಂದು ಬಂಡಿಗೆರೆ ಚನ್ನಿಗ ತಂಡದಿಂದ ಬೀಸುಕಂಸಾಳೆ ಹಾಗೂ 8ರಂದು ಧಾರವಾಡ ಉಸ್ತಾದ್ ಮೊಹಿಸಿನ್ ಖಾನ್ ಅವರು ಸಿತಾರ್ ನುಡಿಸಲಿದ್ದಾರೆ ಎಂದು ತಿಳಿಸಿದರು.

ಒಂದು ನಾಟಕ ವೀಕ್ಷಣೆಗೆ 50 ರೂ. ದರ ನಿಗದಿ ಮಾಡಲಾಗಿದೆ. ಎಲ್ಲಾ ನಾಟಕ ವೀಕ್ಷಿಸಲು 200 ರೂ. ದರ ನಿಗದಿ ಮಾಡಲಾಗಿದೆ. ನಗರ ಸೇರಿದಂತೆ ಜಿಲ್ಲೆಯ ಸಾರ್ವಜನಿಕರು, ರಂಗಾಸಕ್ತರು ನಾಟಕ ವೀಕ್ಷಿಸಿ ರಂಗಭೂಮಿ ಕಲಾವಿದರನ್ನು ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ರಂಗಕಲಿಕಾ ಶಿಬಿರ: ಶಾಂತಲಾ ಕಲಾವಿದರ ತಂಡದ ಟ್ರಸ್ಟಿ ವಿ.ಚಿತ್ರಾ ವೆಂಕಟರಾಜು ಮಾತನಾಡಿ, ಜ.3 ರಿಂದ 8ರ ವರಗೆ ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಂಗಕಲಿಕಾ ಶಿಬಿರ ಆಯೋಜಿಸಲಾಗಿದ್ದು, ಶಿಬಿರದ ನಿರ್ದೇಶಕ ಕೆ.ಪಿ.ಲಕ್ಷ್ಮಣ್, ಸಂಪನ್ಮೂಲ ವ್ಯಕ್ತಿಗಳಾಗಿ ದು.ಸರಸ್ವತಿ, ಪಿಚ್ಚಳ್ಳಿ ಶ್ರೀನಿವಾಸ್, ಕೆ.ವೈ. ನಾರಾಯಣಸ್ವಾಮಿ, ಕೃಷ್ಣಮೂರ್ತಿ ಹನೂರು, ಎಂ.ಎಸ್.ಆಶಾದೇವಿ, ರಂಗಕಲಿಕಾ ಶಿಬಿರ ನಡೆಸಿಕೊಡಲಿದ್ದಾರೆ. ರಂಗಮಂದಿರ ಆವರಣದಲ್ಲಿ ನಾಟಕಗಳ ಛಾಯಾಚಿತ್ರ ಪ್ರದರ್ಶನ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟಿಗಳಾದ ಚೇತನ್, ಪದ್ಮಾಕ್ಷಿ, ಪ್ರಕಾಶ್ ಬೆಲ್ಲದ್, ಸಯ್ಯದ್ ಆರಿಫ್ ಹಾಜರಿದ್ದರು.

ದೌರ್ಜನ್ಯ ಪ್ರಕರಣ ತಡೆಗೆ ವ್ಯಾಪಕ ಅರಿವು ಮೂಡಿಸಿ

ಅಧಿಕಾರಿಗಳಿಗೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸೂಚನೆ

ಚಾಮರಾಜನಗರ, ಡಿ.30–ಪರಿಶಿಷ್ಟ ಜಾತಿ ಮತ್ತು ಪಂಗಡ ಸಮುದಾಯದವರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ತಡೆಯಲು ದೌರ್ಜನ್ಯ ತಡೆ ಕಾಯ್ದೆ ಕುರಿತು ವ್ಯಾಪಕ ಅರಿವು ಮೂಡಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಪರಿಶಿಷ್ಟ ಜಾತಿ, ಪಂಗಡದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ 4ನೇ ತ್ರೈಮಾಸಿಕ ಸಭೆಯಲ್ಲಿ ಮಾತನಾಡಿದ ಅವರು, ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮವಾದ 1955ರ ನಾಗರಿಕ ಹಕ್ಕು ಸಂರಕ್ಷಣಾ ಕಾಯ್ದೆ ಹಾಗೂ 1989ರ ಪರಿಶಿಷ್ಟ ಜಾತಿ, ಪಂಗಡಗಳ ದೌರ್ಜನ್ಯ ಪ್ರತಿಬಂಧಕ ಅಧಿನಿಯಮ ಬಗ್ಗೆ ಎಲ್ಲರಿಗೂ ಹೆಚ್ಚಿನ ಜಾಗೃತಿ ಮೂಡಿಸಬೇಕು. ದೌರ್ಜನ್ಯ ಪ್ರಕರಣಗಳು ನಡೆಯದಂತೆ ಕಟ್ಟೆಚ್ಚರ ವಹಿಸಬೇಕು. ಪ್ರಮುಖವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳು ಕಾಯ್ದೆ ಮಹತ್ವ ಅರಿಯಬೇಕು. ಇತರರಿಗೂ ಮನವರಿಕೆ ಮಾಡಬೇಕು ಎಂದರು.

ಗ್ರಾಮೀಣ ಭಾಗದ ಜನರಿಗೆ ದೌರ್ಜನ್ಯ ತಡೆ ಕಾಯ್ದೆ ಅರಿವಿನ ಕೊರತೆ ಇದೆ. ಅಸ್ಪೃಶ್ಯತೆ ಆಚರಣೆ, ಜಾತಿನಿಂದನೆ, ಇತರೆ ದೌರ್ಜನ್ಯ ಪ್ರಕರಣ ಜರುಗದಂತೆ ಅರಿವು ಕಾರ್ಯಕ್ರಮ ಆಯೋಜಿಸಬೇಕು. ಜನಜಾಗೃತಿ ಮೂಡಿಸುವ ಬೀದಿ ನಾಟಕ ಏರ್ಪಡಿಸಬೇಕು. ಜೊತೆಗೆ ಕಾರ್ಯಾಗಾರ ಹಮ್ಮಿಕೊಳ್ಳಬೇಕು. ಕಾಯ್ದೆ ಸಂಪೂರ್ಣ ಅರಿವು ಪರಿಶಿಷ್ಟರನ್ನು ಹೊರತುಪಡಿಸಿ, ಇತರೆ ವರ್ಗದ ಜನರನ್ನು ಹೆಚ್ಚಾಗಿ ತಲುಪುವಂತೆ ಕ್ರಮ ವಹಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಜಿಪಂ ಸಿಇಒ ಮೋನಾ ರೋತ್ ಮಾತನಾಡಿ, ಚಾಮರಾಜನಗರ ತಾಲೂಕಿನ ತಿಮ್ಮೆಗೌಡನಪಾಳ್ಯ ಗ್ರಾಮದ ಸರ್ವೆ ನಂ.55 ರಲ್ಲಿ ಇರಸವಾಡಿ ಮತ್ತು ಸುತ್ತೂರಿನ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮಂಜೂರಾಗಿರುವ ಜಮೀನು ಸಂಬಂಧ ಅರಣ್ಯ ಹಾಗೂ ಭೂ ದಾಖಲೆಗಳ ಇಲಾಖೆ ಜಂಟಿ ಸರ್ವೆ ನಡೆಸಿ, ಶೀಘ್ರವಾಗಿ ವರದಿ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು, ತಹಸೀಲ್ದಾರ್‌ಗಳಾದ ಗಿರಿಜಾ, ಬಸವರಾಜು, ಜಯಪ್ರಕಾಶ್, ರಮೇಶ್ ಬಾಬು, ಪರಿಶಿಷ್ಟ ಜಾತಿ, ಪಂಗಡದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ನಾಮನಿರ್ದೇಶಿತ ಸದಸ್ಯರಾದ ಸಿದ್ದರಾಜು, ಸೋಮೇಶ್ವರ್, ಮುದ್ದಯ್ಯ, ಆಸಿಫ್ ಉಲ್ಲಾ, ಆರ್.ಸಿದ್ದರಾಜು, ವಿಶೇಷ ಅಭಿಯೋಜಕ ಶಿವಕುಮಾರ್, ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಚಾ.ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿದರು.

> “ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ದೌರ್ಜನ್ಯ ಪ್ರತಿಬಂಧಕ ಕಾಯ್ದೆಯನ್ನು ಜಿಲ್ಲೆಯಾದ್ಯಂತ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಜಿಲ್ಲೆಯ ಯಾವುದೇ ಭಾಗದಲ್ಲಿ ದೌರ್ಜನ್ಯ ಪ್ರಕರಣ ಮರುಕಳಿಸಿದರೆ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು. ಸಂತ್ರಸ್ತರಿಗೆ ನ್ಯಾಯ ದೊರಕಿಸಲು ಪೊಲೀಸ್ ಇಲಾಖೆ ಮುಂದಾಗಿದೆ.
> –ಡಾ.ಬಿ.ಟಿ.ಕವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಗಾಯಾಳುವನ್ನು ತಮ್ಮ ಕಾರಿನಲ್ಲಿ ಆಸ್ಪತ್ರೆಗೆ ಕರೆತಂದ ಶಾಸಕ



ಗಾಯಗೊಂಡು ನರಳಾಡುತ್ತಿದ್ದ ಜಯರಾಜ್‌ನನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ತಮ್ಮ ಕಾರಿನಲ್ಲಿ ಆಸ್ಪತ್ರೆಗೆ ಕರೆತಂದರು.

ಕೊಳ್ಳೇಗಾಲ, ಡಿ.30– ತೀವ್ರ ಪೆಟ್ಟಾಗಿ ನರಳಾಡುತ್ತಿದ್ದ ಗಾಯಾಳುವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಸ್ವತಃ ತಮ್ಮ ಕಾರಿನಲ್ಲಿ ಆಸ್ಪತ್ರೆಗೆ ಕರೆದ್ಯೊಯ್ದು ಮಾನವೀಯತೆ ಮೆರೆದಿದ್ದಾರೆ.

ತಾಲೂಕಿನ ದಾಸನಪುರ ಕಾವೇರಿಪುರ ಮಾರ್ಗವಾಗಿ ಮುಡುಕುತೊರೆಯಿಂದ ಶಾಸಕ ಸಿ.ಪುಟ್ಟರಂಗಶೆಟ್ಟಿ ಬರುತ್ತಿದ್ದರು. ಈ ವೇಳೆ ರಸ್ತೆ ಅಪಘಾತದಿಂದ ಮಂಡ್ಯ ಮೂಲದ ಜಯರಾಜ್ ತೀವ್ರ ಪೆಟ್ಟಾಗಿ ನರಳಾಡುತ್ತಿದ್ದರು. ಇದನ್ನು ಗಮನಿಸಿ ಶಾಸಕರು, ತಮ್ಮ ಕಾರಿನಲ್ಲೇ ಗಾಯಾಳುವನ್ನು ಕಡೆದುಕೊಂಡು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಸೇರಿಸಿದರು.

ಕೃಷಿಕ ಸಮಾಜದ ಅಧ್ಯಕ್ಷರಾಗಿ ಗೌಡಹಳ್ಳಿ ರವಿ ಆಯ್ಕೆ



ಯಳಂದೂರು ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರಾಗಿ ಆಯ್ಕೆಯಾದ ಗೌಡಹಳ್ಳಿ ರವಿ ಹಾಗೂ ಪದಾಧಿಕಾರಿಗಳನ್ನು ಅಭಿನಂದಿಸಲಾಯಿತು.

ಯಳಂದೂರು, ಡಿ.30–ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಗೌಡಹಳ್ಳಿ ರವಿ ಅವಿರೋಧ ಆಯ್ಕೆಯಾದರು.

ಕೃಷಿಕ ಸಮಾಜದ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಗೌಡಹಳ್ಳಿ ರವಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎನ್.ಜಿ.ಅಮೃತೇಶ್ವರ್ ಅವಿರೋಧ ಆಯ್ಕೆ ಘೋಷಿಸಿದರು.

ಇದೇ ವೇಳೆ ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನಸ್ವಾಮಿ, ಪ್ರಧಾನ ಕಾರ್ಯದರ್ಶಿಯಾಗಿ ವೈ.ವಿ.ಉಮಾಶಂಕರ್, ರಾಜ್ಯ ಹಾಗೂ ಜಿಲ್ಲಾ ಪ್ರತಿನಿಧಿಯಾಗಿ ಮದ್ದೂರು ಶ್ರೀಕಂಠಮೂರ್ತಿ ಅವರು ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಗೌಡಹಳ್ಳಿ ರವಿ ಮಾತನಾಡಿ, ತಾಲೂಕಿನ ಕೃಷಿಕರ ಪರವಾಗಿ ಪ್ರಾಮಾಣಿಕ ಹಾಗೂ ಸರ್ಕಾರದ ಸವಲತ್ತುಗಳನ್ನು ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ನಿಷ್ಠೆಯಿಂದ ಕೆಲಸ ಮಾಡುತ್ತೇನೆ. ಜೊತೆಗೆ ರೈತರ ಸಮಸ್ಯೆಗಳಿಗೆ ಧ್ವನಿಯಾಗಿ ನಿಲ್ಲುತ್ತೇನೆ ಎಂದರು.

ಈ ಸಂದರ್ಭದಲ್ಲಿ ಕೃಷಿಕ ಸಮಾಜದ ನಿರ್ದೇಶಕರಾದ ಬಿ.ಪಿ.ನಾಗೇಂದ್ರಸ್ವಾಮಿ, ಬಸವಣ್ಣ, ಎಂ.ಪಿ.ಪ್ರಭುಸ್ವಾಮಿ, ಕೆ. ಶಾಂತಮೂರ್ತಿ, ಆರ್.ಸಿದ್ದರಾಜು, ಎಂ. ಪ್ರಸನ್ನ, ನಟರಾಜು, ಎಂ.ರಾಜೇಂದ್ರ ಮೂರ್ತಿ, ಎ.ಬಿ.ಜಯಶಂಕರ್, ಆರ್. ಗೋವಿಂದ ನಾಯಕ, ಕೃಷಿ ಅಧಿಕಾರಿ ವೆಂಕಟರಂಗಶೆಟ್ಟಿ, ಮುಖಂಡರಾದ ಕಿನಕಹಳ್ಳಿ ಪ್ರಭುಪ್ರಸಾದ್, ಪುಟ್ಟಸುಬ್ಬಪ್ಪ, ರಾಜಣ್ಣ, ಮಂಜು, ಗೌಡಹಳ್ಳಿ ಶಂಭುಲಿಂಗಪ್ಪ, ಗೌಡಹಳ್ಳಿ ಮನು, ಸಂತೇಮರಹಳ್ಳಿ ಮಾದಪ್ಪ, ಕೊಮಾರನಪುರ ಪುಟ್ಟರಾಜು ಇದ್ದರು.

ವ್ಯವಸ್ಥಾಪನಾ ಸಮಿತಿ ಸದಸ್ಯರಾಗಿ ಶ್ರೀನಿವಾಸ್ ಆಯ್ಕೆ



ಜೆ.ಶ್ರೀನಿವಾಸ್

ಯಳಂದೂರು: ತಾಲೂಕಿನ ಪ್ರಸಿದ್ಧ ಧಾರ್ಮಿಕ ಪ್ರವಾಸಿ ತಾಣವಾಗಿರುವ ಬಿಳಿಗಿರಿರಂಗನ ಬೆಟ್ಟದ ರಂಗನಾಥ ಸ್ವಾಮಿ ದೇಗುಲದ ವ್ಯವಸ್ಥಾಪನಾ ಸಮಿತಿ ಸದಸ್ಯರಾಗಿ ಪಪಂ ಮಾಜಿ ಸದಸ್ಯ ಜೆ.ಶ್ರೀನಿವಾಸ್ ಆಯ್ಕೆಯಾಗಿದ್ದಾರೆ.

ದೇವಸ್ಥಾನದ ಪ್ರಧಾನ ಅರ್ಚಕ ಸೇರಿದಂತೆ ಒಟ್ಟು 9 ಸದಸ್ಯರಿದ್ದಾರೆ. ಜೆ. ಶ್ರೀನಿವಾಸ್ ಮಾತನಾಡಿ, ರಾಜ್ಯ ಧಾರ್ಮಿಕ ಪರಿಷತ್ತು, ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಆಯ್ಕೆಗೊಳಿಸಿ, ನನಗೆ ನೀಡಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದಾಗಿ ತಿಳಿಸಿದರು.

ಮೈಸೂರು ಮಿತ್ರ ಮಂಗಳವಾರ 31 ಡಿಸೆಂಬರ್ 2024

ಸಯ್ಯಾಜಿರಾವ್ ರಸ್ತೆಯಲ್ಲಿ ಕೂಲಿಯ ದೋಚಿದ್ದ ಖದೀಮನ ಬಂಧನ

ಒಂದೇ ದಿನದಲ್ಲಿ ನಗದು, ಸ್ಕೂಟರ್ ಜಪ್ತಿ

ಮೈಸೂರು, ಡಿ.30(ಎಸ್‌ಬಿಡಿ)– ವ್ಯಕ್ತಿಯೊಬ್ಬರಿಗೆ ಹೊಡೆದು ಹಣ ಹಾಗೂ ದ್ವಿಚಕ್ರ ವಾಹನ ಕಿತ್ತುಕೊಂಡು ಪರಾರಿಯಾಗಿದ್ದ ಖದೀಮನನ್ನು ಮೈಸೂರಿನ ದೇವರಾಜ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿಗೆ ಕೂಲಿ ಕೆಲಸಕ್ಕೆ ಬಂದು ಹೋಗುವ ನಂಜನಗೂಡು ತಾಲೂಕಿನ ಲೋಕೇಶ್(28) ಅವರಿಗೆ ಹೊಡೆದು ಸ್ಕೂಟರ್ ಹಾಗೂ ಜೇಬಿನಲ್ಲಿದ್ದ ಹಣ ಕಿತ್ತುಕೊಂಡು ಹೋಗಿದ್ದವನನ್ನು ಪತ್ತೆಹಚ್ಚಿ ಜೈಲಿಗಟ್ಟಿದ್ದಾರೆ.

ಲೋಕೇಶ್ ಡಿ.27ರಂದು ರಾತ್ರಿ 7.30ರಲ್ಲಿ ಸಯ್ಯಾಜಿರಾವ್ ರಸ್ತೆಯ ಕಾವೇರಿ ಎಂಪೋರಿಯಂ ಬಳಿ ತಮ್ಮ ಹೋಂಡಾ ಆಕ್ಟೀವಾ ಸ್ಕೂಟರ್‌ನಲ್ಲಿ ನಿಂತಿದ್ದಾಗ ಹಿಂಬದಿಯಿಂದ ಬಂದ ಆಸಾಮಿಯೊಬ್ಬ ಏಕಾಏಕಿ ಕುತ್ತಿಗೆಯನ್ನು ಬಿಗಿಯಾಗಿ ಹಿಡಿದಿದ್ದ. ಆಗ ಯಾರೆಂದು ಕೂಗಿದ ಲೋಕೇಶ್, ಕುತ್ತಿಗೆ ಬಿಡುವಂತೆ ಹೇಳಿದರೂ ಕೇಳದೆ ಅವರ ಶರ್ಟ್ ಜೇಬಿನಲ್ಲಿದ್ದ 500 ರೂ. ಕಿತ್ತುಕೊಂಡು, ಅವರನ್ನು ಸ್ಕೂಟರ್‌ನಿಂದ ತಳ್ಳಿ ಕೆಳಗೆ ಬೀಳಿಸಿದ್ದ. ಸಾವರಿಸಿಕೊಂಡು ಲೋಕೇಶ್ ಎದ್ದೇಳುವಷ್ಟರಲ್ಲಿ ಖದೀಮ ಸ್ಕೂಟರ್‌ನೊಂದಿಗೆ ಪರಾರಿಯಾಗಿದ್ದ.

ಈ ಬಗ್ಗೆ ಲೋಕೇಶ್ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡ ದೇವರಾಜ ಠಾಣೆ ಪೊಲೀಸರು, ಒಂದೇ ದಿನದಲ್ಲಿ ಖದೀಮನ ಪತ್ತೆಹಚ್ಚಿ ಬಂಧಿಸಿದ್ದಾರೆ. ಆತನ ವಿರುದ್ಧ ಹಲವು ಸುಲಿಗೆ ಪ್ರಕರಣಗಳಿವೆ. ಪ್ರಕರಣವೊಂದರಲ್ಲಿ ಜೈಲಿನಲ್ಲಿದ್ದ ಆತ, ಬಿಡುಗಡೆಯಾಗಿ ವಾರ ಕಳೆಯುಷ್ಟರಲ್ಲಿ ಈ ದುಷ್ಕೃತ್ಯ ಎಸಗಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದೇವಾಲಯದ ಹಿಂಬಾಗಿಲ ಬೀಗ ಮುರಿದು ದೇವಿಯ ತಾಳಿ, ಇನ್ನಿತರ ಪದಾರ್ಥ ಕಳವು

ಮೈಸೂರು, ಡಿ.30(ಎಸ್‌ಬಿಡಿ)– ದೇವಾಲಯದ ಹಿಂಬಾಗಿಲಿನ ಬೀಗ ಮುರಿದು ದೇವಿಗೆ ಧರಿಸಿದ್ದ ಚಿನ್ನದ ತಾಳಿ ಸೇರಿದಂತೆ ಹಲವು ವಸ್ತುಗಳನ್ನು ದೋಚಿರುವ ಘಟನೆ ಮೈಸೂರಿನ ಇಲವಾಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಇಲವಾಲ ಹೋಬಳಿ ದೊಡ್ಡಮಾರಗೌಡನಹಳ್ಳಿ ಗ್ರಾಮದ ಶ್ರೀ ಲಕ್ಷ್ಮಿ ಮತ್ತು ಬೀರ ದೇವರ ದೇವಸ್ಥಾನದಲ್ಲಿ ಈ ಘಟನೆ ನಡೆದಿದ್ದು, ದೇವಿಗೆ ಧರಿಸಿದ್ದ ಸುಮಾರು 40 ಸಾವಿರ ಮೌಲ್ಯದ 10 ಗ್ರಾಂ ಚಿನ್ನದ ತಾಳಿ, 35 ಸಾವಿರ ರೂ. ಮೌಲ್ಯದ 700 ಗ್ರಾಂ ಬೆಳ್ಳಿ ಒಡವೆಗಳು ಹಾಗೂ ಹುಂಡಿಯಲ್ಲಿದ್ದ ಕಾಣಿಕೆ ಹಣವನ್ನು ಕಳವು ಮಾಡಲಾಗಿದೆ.

ಅರ್ಚಕರು ಡಿ.27ರಂದು ಸಂಜೆ ಪೂಜೆ ಮುಗಿಸಿ ದೇವಸ್ಥಾನದ ಬಾಗಿಲಿಗೆ ಬೀಗ ಹಾಕಿ ಮನೆಗೆ ಹೋಗಿದ್ದರು. ಮರುದಿನ ಎಂದಿನಂತೆ ಬೆಳಗ್ಗೆ ದೇವಸ್ಥಾನದ ಬಾಗಿಲು ತೆರೆದು ಒಳಗೆ ಹೋದಾಗ ಆಘಾತ ಕಾದಿತ್ತು. ದೇವಸ್ಥಾನದ ಹಿಂಬಾಗಿಲು ತೆರೆದಿದ್ದನ್ನು ಕಂಡು ಹತ್ತಿರ ಹೋಗಿ ನೋಡಿದಾಗ ಅದರ ಬೀಗ ಒಡೆಯಲಾಗಿತ್ತು. ಆಗ ಗಾಬರಿಯಿಂದ ಗರ್ಭಗುಡಿ ಪರಿಶೀಲಿಸಿದಾಗ ದೇವಿಯ ಕೊರಳಿಗೆ ಧರಿಸಿದ್ದ ಚಿನ್ನದ ತಾಳಿ, ಬೆಳ್ಳಿ ಆಭರಣ ಹಾಗೂ ಕಾಣಿಕೆ ಹಣ ಕಳುವಾಗಿರುವುದು ತಿಳಿಯಿತು.

ಅರ್ಚಕರು ಕಳ್ಳತನ ನಡೆದಿರುವುದನ್ನು ಗ್ರಾಮಸ್ಥರ ಗಮನಕ್ಕೆ ತಂದ ಬಳಿಕ ಇಲವಾಲ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಕಳ್ಳರ ಪತ್ತೆಗೆ ಶೋಧ ಮುಂದುವರೆಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯಿಂದ ಸಂಕಲ್ಪ್ ಸೆಂಟ್ರಲ್ ಪಾರ್ಕ್ ಅಪಾರ್ಟ್‌ಮೆಂಟ್‌ನಲ್ಲಿ

ಇ–ಆಸ್ತಿ ಖಾತಾ ಅಭಿಯಾನ



ಸಂಕಲ್ಪ್ ಸೆಂಟ್ರಲ್ ಪಾರ್ಕ್ ಅಪಾರ್ಟ್‌ಮೆಂಟ್‌ನಲ್ಲಿ ಪಾಲಿಕೆ ವತಿಯಿಂದ ಸೋಮವಾರ ಇ–ಆಸ್ತಿ ಖಾತಾ ಅಭಿಯಾನ ನಡೆಯಿತು.

ಮೈಸೂರು,ಡಿ.30(ಪಿಎಂ)– ಮೈಸೂರಿನ ಯಾದವಗಿರಿಯ ಜಾವಾ ಮುಖ್ಯ ರಸ್ತೆಯಲ್ಲಿರುವ ಸಂಕಲ್ಪ್ ಸೆಂಟ್ರಲ್ ಪಾರ್ಕ್ ಅಪಾರ್ಟ್‌ಮೆಂಟ್‌ನಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಸೋಮವಾರ ಇ–ಆಸ್ತಿ ಖಾತಾ ಅಭಿಯಾನ ಹಾಗೂ ಸ್ವತ್ತಿನ ಮಾಲೀಕರಿಂದ ಆಸ್ತಿ ದಾಖಲೆ ಸಂಗ್ರಹ ಕಾರ್ಯಕ್ರಮ ನಡೆಸಲಾಯಿತು.

ಪಾಲಿಕೆಯ ವಲಯ ಆಯುಕ್ತ ಮಹೇಶ್ ಕುಮಾರ್ ಎಸ್.ಜಿಗಣಿ ನೇತೃತ್ವದಲ್ಲಿ ಪಾಲಿಕೆ ಅಧಿಕಾರಿಗಳು ಅಪಾರ್ಟ್‌ಮೆಂಟ್‌ಗೆ ಭೇಟಿ ನೀಡಿ ಇ–ಖಾತಾ ನೋಂದಣಿಗೆ ಅಗತ್ಯವಿರುವ ದಾಖಲೆಗಳ ಕುರಿತು ಇರುವ ಚೆಕ್‌ಲೀಸ್ಟ್‌ಗಳನ್ನು ಇಲ್ಲಿನ ನಿವಾಸಿಗಳಿಗೆ ಒದಗಿಸಿದರು. ಅಲ್ಲದೆ, ಇ–ಖಾತಾ ಮಾಡಿಕೊಡುವ ಉದ್ದೇಶಕ್ಕಾಗಿ ಫ್ಲಾಟ್‌ನ ಕೆಲ ಮಾಲೀಕರಿಂದ ದಾಖಲೆಗಳನ್ನು ಸಂಗ್ರಹಿಸಿದರು.

ಮುಂದಿನ ವಾರದಲ್ಲಿ ಇದೇ ರೀತಿಯಲ್ಲಿ ಮತ್ತೊಮ್ಮೆ ಅಭಿಯಾನ ನಡೆಸುವಂತೆ ಸಂಕಲ್ಪ್ ಸೆಂಟ್ರಲ್ ಪಾರ್ಕ್ ಅಪಾರ್ಟ್‌ಮೆಂಟ್ ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಇದೇ ವೇಳೆ ಅಧಿಕಾರಿಗಳಲ್ಲಿ ಮನವಿ ಮಾಡಿದರು. ಇದರಿಂದ ನಿವಾಸಿಗಳು ಅಗತ್ಯ ದಾಖಲೆಗಳನ್ನು ಸಿದ್ಧಪಡಿಸಿಕೊಂಡು ಮುಂದಿನ ಅಭಿಯಾನದಲ್ಲಿ ಸಲ್ಲಿಸಲು ಅನುಕೂಲವಾಗುತ್ತದೆ ಎಂದು ಅವರು ಕೋರಿದರು.

ಇಂದಿನ ಅಭಿಯಾನದಲ್ಲಿ ಸುಮಾರು 30 ಫ್ಲಾಟ್ ಮಾಲೀಕರು ಪಾಲ್ಗೊಂಡಿದ್ದರು. ಪಾಲಿಕೆಯ ಕಂದಾಯ ಅಧಿಕಾರಿ ಎಂ.ಎಸ್.ಸತೀಶ್, ಸಹಾಯಕ ಕಂದಾಯ ಅಧಿಕಾರಿ ಡಿ.ಮನು, ಕಂದಾಯ ಪರಿಶೀಲಕರಾದ ದೇವಿಕ, ವಿ.ಪರಮೇಶ್, ವಿ.ಯೋಗೇಂದ್ರ ಮತ್ತು ಸಿಬ್ಬಂದಿ ಹಾಜರಿದ್ದರು.

ಹೊಸ ವರ್ಷಾಚರಣೆಗೆ ಬೆಂಗಳೂರಿನಲ್ಲಿ 11,000 ಪೊಲೀಸರ ನಿಯೋಜನೆ

ಸಂಭ್ರಮಾಚರಣೆಗೆ ರಾತ್ರಿ 1 ಗಂಟೆ ಡೆಡ್‌ಲೈನ್!

ಬೆಂಗಳೂರು: ಹೊಸ ವರ್ಷಾಚರಣೆಯ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಮತ್ತು ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಲು ಸಾವಿರಾರು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಮತ್ತು ಎಲ್ಲ ರೀತಿಯ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಗೃಹ ಸಚಿವ ಜಿ ಪರಮೇಶ್ವರ ಸೋಮವಾರ ಹೇಳಿದ್ದಾರೆ.

ಸಾರ್ವಜನಿಕರು ಯಾವುದೇ ಅಹಿತಕರ ಘಟನೆಗಳಲ್ಲಿ ಭಾಗಿಯಾಗದಂತೆ ಮನವಿ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ನಗರ ಮತ್ತು ಇಡೀ ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಲು ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಗೊಂದಲ ಸೃಷ್ಟಿಸಲು ಬಯಸುವವರಿಗೆ ಎಚ್ಚರಿಕೆ ನೀಡಿದ್ದೇವೆ. ಭದ್ರತೆಗಾಗಿ ಸಾವಿರಾರು ಪೊಲೀಸರನ್ನು ನಿಯೋಜಿಸಲಾಗಿದ್ದು, ಯಾವುದೇ ಅಹಿತಕರ ಘಟನೆಗಳಲ್ಲಿ ಭಾಗಿಯಾಗದಂತೆ ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹೊಸ ವರ್ಷವನ್ನು ಸಂತೋಷದಿಂದ ಆಚರಿಸಿ. ನಿಮ್ಮ ಹೊಸ ವರ್ಷವು ಅತ್ಯಂತ ಸಂತೋಷದಾಯಕವಾಗಿರಲಿ ಎಂದು ತಿಳಿಸಿದರು.

ಈ ಮಧ್ಯೆ, ಸುದ್ದಿಸಂಸ್ಥೆ ಜೊತೆಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್, ಎಲ್ಲ ಇಲಾಖೆಗಳಿಂದ ನಗರದಾದ್ಯಂತ 1000ಕ್ಕೂ ಹೆಚ್ಚು ಕ್ಯಾಮರಾಗಳನ್ನು ಅಳವಡಿಸಲಾಗಿದೆ ಮತ್ತು ಯಾವುದೇ ರೀತಿಯ ತೊಂದರೆಗಳನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದ್ದಾರೆ.

ಕಾನೂನು ಸುವ್ಯವಸ್ಥೆ ಕಾಪಾಡಲಾಗುವುದು. ನಾವು ಬಹಳ ಜಾಗರೂಕರಾಗಿರಬೇಕು. ಬೆಂಗಳೂರಿನ ಚಿತ್ರಣವು ಬಹಳ ಮುಖ್ಯವಾಗಿದೆ ಮತ್ತು ಯಾವುದೇ ರೀತಿಯ ತೊಂದರೆ ಉಂಟು ಮಾಡಿದರೆ, ಅವರುಗಳಿಗೆ ಪೊಲೀಸರು ತಕ್ಕ ಉತ್ತರ ನೀಡುತ್ತಾರೆ ಎಂದು ಅವರು ಹೇಳಿದರು.

ನಗರದಲ್ಲಿ ಮುಂಬರುವ ಹೊಸ ವರ್ಷಾಚರಣೆಗೆ ಬೆಂಗಳೂರು ಪೊಲೀಸರು ವ್ಯಾಪಕವಾದ ವ್ಯವಸ್ಥೆಗಳನ್ನು ಮಾಡಿದ್ದು, ಸಾರ್ವಜನಿಕರ ಸುರಕ್ಷತೆ ಮತ್ತು ಸುಗಮ ಸಂಚಾರವನ್ನು ಗಮನದಲ್ಲಿಟ್ಟುಕೊಂಡು ಭಾರಿ ಜನಸಂದಣಿ ಇರುವ ಪ್ರದೇಶಗಳಲ್ಲಿ ಬಿಗಿ ಭದ್ರತೆಯನ್ನು ನಿಯೋಜಿಸಲಾಗಿದೆ.

ಸಿವಿಲ್ ಡಿಫೆನ್ಸ್ ಸಿಬ್ಬಂದಿ ಮತ್ತು ಹಿರಿಯ ಅಧಿಕಾರಿಗಳು ಸೇರಿದಂತೆ ಒಟ್ಟು 11,830 ಪೊಲೀಸ್ ಸಿಬ್ಬಂದಿ ನಗರದಾದ್ಯಂತ ಕಟ್ಟುನಿಟ್ಟಿನ ನಿಗಾ ವಹಿಸಲಿದ್ದಾರೆ. ಯಾವುದೇ ಸಂಭಾವ್ಯ ರೇವ್ ಪಾರ್ಟಿಗಳು ಮತ್ತು ಮಾದಕವಸ್ತು ಸಂಬಂಧಿತ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುತ್ತಾರೆ. ಹೊಸ ವರ್ಷಾಚರಣೆಗೆ ಸರ್ಕಾರವು ಮಧ್ಯರಾತ್ರಿ 1 ಗಂಟೆಯವರೆಗೆ ಮಾತ್ರ ಅನುಮತಿ ನೀಡಿದೆ.

ಮೈಸೂರಿನ ಕೋಚನಹಳ್ಳಿಯ ಸೆಮಿಕಂಡಕ್ಟರ್ ಪಾರ್ಕ್‌ನಲ್ಲಿ ಜೋಹೊ ಸಿಲೆಕ್ಟ್ರಿಕ್ ಕಂಪನಿ ಸ್ಥಾಪನೆ

●3,425 ಕೋಟಿ ಬಂಡವಾಳ ಹೂಡಿಕೆ, 460 ಮಂದಿಗೆ ಉದ್ಯೋಗಾವಕಾಶ ●ರಾಜ್ಯ ಉನ್ನತ ಮಟ್ಟದ ಕ್ಲಿಯರೆನ್ಸ್ ಸಮಿತಿ ಅಸ್ತು ●40 ಎಕರೆಯಲ್ಲಿ ಸ್ಥಾಪನೆಗೊಳ್ಳುವ ಕಂಪನಿ ●ಮೈಸೂರಿನತ್ತ ಮುಖ ಮಾಡಿದ ನಾನಾ ಕಂಪನಿಗಳು

ಮೈಸೂರು, ಡಿ.30(ಬಿಎಲ್‌ಯು)– ಚೆನ್ನೈ ಮೂಲದ ಜೋಹೊ ಸಿಲೆಕ್ಟ್ರಿಕ್ ಸೆಮಿಕಂಡಕ್ಟರ್ ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್ ಕಂಪನಿ ಮೈಸೂರಿನ ನಂಜನಗೂಡು ಬಳಿಯ ಕೋಚನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 3,425 ಕೋಟಿ ಬಂಡವಾಳ ಹೂಡಲಿದೆ. ಈ ಮೂಲಕ ಗುಜರಾತ್‌ನಲ್ಲಿ ಬಂಡವಾಳ ಹೂಡುತ್ತಿದ್ದ ಸೆಮಿ ಕಂಡಕ್ಟರ್ ಕಂಪನಿಗಳು ಈಗ ಮೈಸೂರಿನತ್ತ ಮುಖ ಮಾಡಿವೆ.

ಜೋಹೊ ಸಿಲೆಕ್ಟ್ರಿಕ್ ಸೆಮಿಕಂಡಕ್ಟರ್ ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಿಟೆಡ್ ಮೈಸೂರಿನ ಕೋಚನಹಳ್ಳಿಯಲ್ಲಿ ಬಂಡವಾಳ ಹೂಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯ 64 ನೇ ರಾಜ್ಯ ಉನ್ನತ ಮಟ್ಟದ ಕ್ಲಿಯರೆನ್ಸ್ ಸಮಿತಿ (ಎಸ್‌ಎಚ್‌ಎಲ್‌ಸಿಸಿ) ಅನುಮೋದನೆ ನೀಡಿದೆ.

ಕೋಚನಹಳ್ಳಿಯಲ್ಲಿ ಜೋಹೊ ಸಿಲೆಕ್ಟ್ರಿಕ್ ಸೆಮಿಕಂಡಕ್ಟರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ 3,425.60 ಕೋಟಿ ಬಂಡವಾಳ ಹೂಡುತ್ತಿದೆ. ಇದರಿಂದ ಸ್ಥಳೀಯವಾಗಿ 460 ಉದ್ಯೋಗಗಳು ಸೃಷ್ಟಿಯಾಗಲಿವೆ.



ಕೋಚನಹಳ್ಳಿಯ ಸೆಮಿ ಕಂಡಕ್ಟರ್ ಪಾರ್ಕ್‌ನ 40 ಎಕರೆ ಪ್ರದೇಶದಲ್ಲಿ ಜೋಹೋ ಸಿಲೆಕ್ಟ್ರಿಕ್ ಸೆಮಿಕಂಡಕ್ಟರ್ ಕಂಪನಿ ಸ್ಥಾಪನಗೊಳ್ಳಲಿದೆ. ಮೈಸೂರಿನ ನಂಜನಗೂಡು ಸಮೀಪದ ಕೋಚನಹಳ್ಳಿಯಲ್ಲಿ ಎಲೆಕ್ಟ್ರಾನಿಕ್ ಉತ್ಪಾದನಾ ಕ್ಲಸ್ಟರ್ (ಇಎಂಸಿ) ಅರ್ಥಾತ್ ಸೆಮಿ ಕಂಡಕ್ಟರ್ ಪಾರ್ಕ್ ಸ್ಥಾಪಿಸಲು ಕೆಐಎಡಿಬಿ 234.67 ಎಕರೆ ಭೂಮಿ ಸ್ವಾಧೀನಪಡಿಸಿಕೊಂಡಿತ್ತು. ಇದರಲ್ಲಿ ಸಿಎ ನಿವೇಶನ, ಪಾರ್ಕ್, ವಿಶಾಲವಾದ ರಸ್ತೆ, ಎಸ್‌ಟಿಪಿ ಸೇರಿದಂತೆ ಇತರೆ ಮೂಲ ಸೌಕರ್ಯ ಕಲ್ಪಿಸಿ ಸೆಮಿಕಂಡಕ್ಟರ್ ಪಾರ್ಕ್‌ಗಾಗಿ 140 ಎಕರೆ ಜಾಗವನ್ನು ಮೀಸಲಿಟ್ಟಿದೆ.

ಕೋಚನಹಳ್ಳಿಯಲ್ಲಿ ಸೆಮಿಕಂಡಕ್ಟರ್ ಪಾರ್ಕ್ ಪೂರ್ಣ ಪ್ರಮಾಣದಲ್ಲಿ ನಿರ್ಮಾಣಗೊಂಡು ಒಂದು ವರ್ಷವಾದರೂ ಈ ತನಕ ಒಂದು ಕಂಪನಿಯೂ ಸ್ಥಾಪನೆಯಾಗಿರಲಿಲ್ಲ. ಎಲ್ಲಾ ಸೆಮಿಕಂಡಕ್ಟರ್ ಕಂಪನಿಗಳು ಗುಜರಾತ್‌ನತ್ತ ಮುಖ ಮಾಡಿದ್ದವು. ಕೇಂದ್ರ ಸರ್ಕಾರ ತನ್ನ ಪ್ರೋತ್ಸಾಹಕಗಳನ್ನು ನೀಡಿ ಸೆಮಿಕಂಡಕ್ಟರ್ ಕಂಪನಿಗಳನ್ನು ಗುಜರಾತ್ ಕಡೆ ಕಳುಹಿಸುತ್ತಿವೆ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರ ಆರೋಪ ಮಾಡಿತ್ತು.

ಈ ಆರೋಪದ ನಡುವೆ ಚೆನ್ನೈ ಮೂಲದ ಜೋಹೊ ಸಿಲೆಕ್ಟ್ರಿಕ್ ಸೆಮಿಕಂಡಕ್ಟರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಮೈಸೂರಿನ ಕೋಚನಹಳ್ಳಿಯಲ್ಲಿ ಬಂಡವಾಳ ಹೂಡುತ್ತಿದೆ. ಇದರ ಜೊತೆಗೆ ಕೇನ್ಸ್ ಸೇರಿದಂತೆ ಇತರೆ ಕಂಪನಿಗಳು ಕೂಡ ಬಂಡವಾಳ ಹೂಡಲು ರಾಜ್ಯ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡಿದೆ. ಇದರಿಂದ ಇನ್ನು ಕೆಲವೇ ತಿಂಗಳಲ್ಲಿ ಕೋಚನಹಳ್ಳಿಯಲ್ಲಿರುವ 140 ಎಕರೆ ಪೂರ್ಣ ಪ್ರದೇಶದಲ್ಲಿ ಸೆಮಿಕಂಡಕ್ಟರ್ ಕಂಪನಿಗಳು ಸ್ಥಾಪನೆಯಾಗಲಿವೆ.

ಹತ್ತಾರು ಸೆಮಿಕಂಡಕ್ಟರ್ ಕಂಪನಿಗಳು ಸ್ಥಾಪನೆಗೊಂಡರೆ ಸ್ಥಳೀಯವಾಗಿ ಸಾವಿರಾರು ಮಂದಿಗೆ ಉದ್ಯೋಗಾವಕಾಶ ದೊರೆಯಲಿದೆ. ಅಲ್ಲದೇ, ಉದ್ಯೋಗಕ್ಕಾಗಿ ಬೇರೆ ರಾಜ್ಯಗಳಿಂದ ನುರಿತ ತಜ್ಞರು ಇಲ್ಲಿಗೆ ಬರುವ ಕಾರಣ ಮೈಸೂರಿನಲ್ಲಿ ಬಾಡಿಗೆ ಮನೆ ಸೇರಿದಂತೆ ಇತರೆ ವಾಣಿಜ್ಯ ವ್ಯಾಪಾರ ಕೂಡ ವೃದ್ಧಿಗೊಳ್ಳಲಿದೆ.

ಈ ಮೊದಲು ಸೆಮಿಕಂಡಕ್ಟರ್‌ಗಳನ್ನು ಚೀನಾದಿಂದ ಆಮದು ಮಾಡಿಕೊಳ್ಳಬೇಕಿತ್ತು. ಇದರಿಂದ ದುಬಾರಿ ಬೆಲೆಯಿಂದ, ಇದನ್ನು ಬಳಸುವ ಮೊಬೈಲ್, ಕಂಪ್ಯೂಟರ್ ಸೇರಿದಂತೆ ಇತರೆ ಎಲೆಕ್ಟ್ರಾನಿಕ್ ವಸ್ತುಗಳ ಬೆಲೆ ಕೈ ಸುಡುತ್ತಿತ್ತು.

ಆದರೆ ಈಗ ಭಾರತದಲ್ಲೆ ಸೆಮಿಕಂಡಕ್ಟರ್ ತಯಾರಾದರೆ ಮೊಬೈಲ್, ಕಂಪ್ಯೂಟರ್ ಸೇರಿದಂತೆ ಇತರೆ ಎಲೆಕ್ಟ್ರಾನಿಕ್ ವಸ್ತುಗಳ ಬೆಲೆ ಕಡಿಮೆಯಾಗಲಿದ್ದು, ಜನ ಸಾಮಾನ್ಯರಿಗೆ ಕೈಗೆಟಕಲಿದೆ.

ಜ.19ಕ್ಕೆ ರಾಜ್ಯ ಕ್ರೀಡಾ ಸಮ್ಮೇಳನ

ಜನರಲ್ಲಿ ಆರೋಗ್ಯ ಜಾಗೃತಿ ಜೊತೆಗೆ ಕ್ರೀಡಾಸಕ್ತಿ ಮೂಡಿಸುವ ಉದ್ದೇಶ

ಮೈಸೂರು, ಡಿ.30(ಎಂಟಿವೈ)– ಜನರಲ್ಲಿ ಆರೋಗ್ಯದ ಬಗ್ಗೆ ಕಾಳಜಿ ಮೂಡಿಸುವುದರೊಂದಿಗೆ ಕ್ರೀಡೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕ್ರೀಡಾ ಭಾರತಿ ಸಂಸ್ಥೆಯ ವತಿಯಿಂದ ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜ.19ರಂದು 'ರಾಜ್ಯ ಕ್ರೀಡಾ ಸಮ್ಮೇಳನ–2025' ಆಯೋಜಿಸಲಾಗಿದೆ ಎಂದು ಕ್ರೀಡಾ ಭಾರತೀಯ ಕ್ಷೇತ್ರಿಯ ಸಂಯೋಜಕ ಚಂದ್ರಶೇಖರ ಜಾಗೀರ್‌ದಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಕ್ಕಳು, ಯುವ ಜನರು, ಎಲ್ಲರೂ ಕ್ರೀಡೆಯಿಂದ ದೂರವುಳಿಯುತ್ತಿದ್ದಾರೆ. ಆರೋಗ್ಯ ಕಾಪಾಡಿಕೊಳ್ಳಲು ಪ್ರತಿದಿನ ಅರ್ಧ ಗಂಟೆಯಾದರೂ ಯಾವುದಾದರೂ ಕ್ರೀಡೆಯಲ್ಲಿ ಪಾಲ್ಗೊಳ್ಳುವುದು ಅಗತ್ಯ. ಆದರೆ, ಮೊಬೈಲ್ ಗೀಳಿನಿಂದಾಗಿ ಕ್ರೀಡೆಯಿಂದ ಅಂತರ ಕಾಯ್ದುಕೊಳ್ಳುತ್ತಿರುವುದರಿಂದ ಜನರು ಅನಾರೋಗ್ಯಕ್ಕೀಡಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕ್ರೀಡಾ ಭಾರತಿ ಸಂಸ್ಥೆಯು ಹೆಚ್ಚಿನ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಜನರಲ್ಲಿ ಕ್ರೀಡೆ ಹಾಗೂ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಜಾಗೃತಿ ಮೂಡಿಸುತ್ತಿದೆ ಎಂದರು.

ಕ್ರೀಡಾ ಸಮ್ಮೇಳನದ ಅಂಗವಾಗಿ ಜ.19ರಂದು ಬೆಳಗ್ಗೆ 8.30ಕ್ಕೆ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಶೋಭಾಯಾತ್ರೆ ನಡೆಯಲಿದ್ದು, ವಿವಿಧ ಜಿಲ್ಲೆಗಳಿಂದ ಬರುವ ಕ್ರೀಡಾಪಟುಗಳು ಚಾಮುಂಡಿ ವಿಹಾರ ಕ್ರೀಡಾಂಗಣದವರೆಗೂ ಶೋಭಾಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ ವೇದಿಕೆ ಕಾರ್ಯಕ್ರಮ ಆರಂಭವಾಗಲಿದೆ. ಈ ಕ್ರೀಡಾ ಸಮ್ಮೇಳನದಲ್ಲಿ ರಾಜ್ಯ ವಿವಿಧ ಕಡೆಗಳಿಂದ ಆಗಮಿಸುವ ಸುಮಾರು ಎರಡು ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ.

ಈ ಕ್ರೀಡಾ ಸಮ್ಮೇಳನದಲ್ಲಿ ಶಾಲಾ ಮಕ್ಕಳಿಗೆ ಓಟ, ವಾಲಿಬಾಲ್, ಖೋಖೋ, ಬ್ಯಾಸ್ಕೆಟ್ ಬಾಲ್, ಹಾಕಿ, ಲಗೋರಿ, ಹಗ್ಗ ಜಗ್ಗಾಟ, ಪಥ ಸಂಚಲನ, ಸ್ಕೂಲ್ ಬ್ಯಾಂಡ್ ಸ್ಪರ್ಧೆಗಳು ಜರುಗಲಿವೆ. ಸಂಜೆ ಕುಸ್ತಿಯೊಂದಿಗೆ ಸಮ್ಮೇಳನ ಸಮಾಪ್ತಿಯಾಗಲಿದೆ ಎಂದು ತಿಳಿಸಿದರು.

ರಾಜ್ಯ ಕ್ರೀಡಾ ಸಮ್ಮೇಳನದ ಅಂಗವಾಗಿ ಜ.4ರಂದು ಬೆಳಗ್ಗೆ 8.30ಕ್ಕೆ ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಗಣ್ಯರಿಗಾಗಿ ಲಗೋರಿ ಆಟ ನಡೆಯಲಿದೆ. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಜ.12ರಿಂದ ವಿವಿಧ ಜಿಲ್ಲೆಗಳಲ್ಲಿ ಒಂದು ವಾರ ಕ್ರೀಡಾ ಸಪ್ತಾಹ ಆಯೋಜಿಸಲಾಗಿದ್ದು, ಆಯಾ ಜಿಲ್ಲೆಗಳಲ್ಲಿ ವಿಜೇತ ಕ್ರೀಡಾಪಟುಗಳನ್ನು ಮೈಸೂರಲ್ಲಿ ನಡೆಯುವ ರಾಜ್ಯ ಕ್ರೀಡಾ ಸಮ್ಮೇಳನಕ್ಕೆ ಆಹ್ವಾನಿಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕ್ರೀಡಾ ಭಾರತಿ ಪದಾಧಿಕಾರಿಗಳಾದ ಡಾ.ವೈ.ಎಸ್.ಲಕ್ಷ್ಮೀಶ್, ಅಮೃತ್ ಪುರೋಹಿತ್, ಪ್ರಶಾಂತ್, ಮಹೇಂದರ್ ಪ್ರಸಾದ್ ಇದ್ದರು.

ಬ್ಯಾಟ್ಸ್‌ಮನ್‌ಗಳ ವೈಫಲ್ಯ: ಭಾರತಕ್ಕೆ ಹೀನಾಯ ಸೋಲು



ಮೆಲ್ಬರ್ನ್, ಡಿ.30– ಬ್ಯಾಟ್ಸ್‌ಮನ್‌ಗಳ ಬ್ಯಾಟಿಂಗ್ ವೈಫಲ್ಯಕ್ಕೆ ಭಾರಿ ಬೆಲೆತೆತ್ತ ಭಾರತ ಆಸ್ಟ್ರೇಲಿಯಾ ವಿರುದ್ಧದ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದಲ್ಲಿ ಹೀನಾಯ ಸೋಲು ಅನುಭವಿಸಿದೆ. ಆ ಮೂಲಕ 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 2–1 ಅಂತರದ ಹಿನ್ನಡೆ ಅನುಭವಿಸಿದೆ.

ಪಂದ್ಯದ ಕೊನೆ ದಿನವಾದ ಸೋಮವಾರ ಎರಡನೇ ಇನ್ನಿಂಗ್ಸ್‌ನಲ್ಲಿ 234 ರನ್‌ಗೆ ಆಲೌಟ್ ಆದ ಆಸ್ಟ್ರೇಲಿಯಾ ಭಾರತಕ್ಕೆ 339 ರನ್‌ಗಳ ಗುರಿ ನೀಡಿತು. 92 ಓವರ್‌ಗಳಲ್ಲಿ ಈ ಗುರಿ ಬೆನ್ನತ್ತಿದ ಭಾರತ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದ 155 ರನ್‌ಗಳಿಗೆ ಆಲೌಟ್ ಆಗಿ 184 ರನ್‌ಗಳ ಸೋಲು ಅನುಭವಿಸಿತು. ತಂಡದ ಪರ ಯಶಸ್ವಿ ಜೈಸ್ವಾಲ್ 84, ರಿಷಬ್ ಪಂತ್ 30 ರನ್ ಗಳಿಸಿದ್ದು ಬಿಟ್ಟರೇ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು.

ಇದಕ್ಕೂ ಮೊದಲು ಆಸ್ಟ್ರೇಲಿಯಾ ಮೊದಲ ಇನ್ನಿಂಗ್ಸ್‌ನಲ್ಲಿ 474 ರನ್‌ಗಳ ಬೃಹತ್ ಮೊತ್ತ ಪೇರಿಸಿದರೆ, ಭಾರತ 369 ರನ್ ಗಳಿಸಿ 115 ರನ್‌ಗಳ ಹಿನ್ನಡೆ ಅನುಭವಿಸಿತು. ಆಸ್ಟ್ರೇಲಿಯಾ ಎರಡನೇ ಇನ್ನಿಂಗ್ಸ್‌ನಲ್ಲಿ 234 ರನ್ ಗಳಿಸಿ ಭಾರತಕ್ಕೆ 339 ರನ್‌ಗಳ ಗುರಿ ನೀಡಿತು. ಇದನ್ನು ಬೆನ್ನಟ್ಟಲಾಗದೆ ಭಾರತ ಸೋಲು ಕಂಡಿತು. ಸರಣಿಯ ಅಂತಿಮ ಪಂದ್ಯ ಜ.3ರಂದು ಸಿಡ್ನಿಯಲ್ಲಿ ಆರಂಭವಾಗಲಿದೆ. ಸರಣಿ ಸಮಬಲಕ್ಕೆ ಭಾರತ ಈ ಪಂದ್ಯ ಗೆಲ್ಲಲೇ ಬೇಕಿದೆ.

ಡಬ್ಲ್ಯೂಟಿಸಿ ಫೈನಲ್ ಆಸೆ ಮತ್ತಷ್ಟು ದೂರ: ಈ ಸೋಲಿನೊಂದಿಗೆ ವಿಶ್ವ ಟೆಸ್ಟ್ ಚಾಂಪಿಯನ್ ಫೈನಲ್ ತಲುಪುವ ಭಾರತದ ಕನಸು ಮತ್ತಷ್ಟು ದೂರ ಸಾಗಿದೆ. ದಕ್ಷಿಣ ಆಫ್ರಿಕಾ ಮೊದಲ ಸ್ಥಾನದಲ್ಲಿದ್ದು 66.670 ಅಂಕ ಹೊಂದಿದೆ. ಆಸ್ಟ್ರೇಲಿಯಾ ಎರಡನೇ ಸ್ಥಾನದಲ್ಲಿದ್ದು 61.460 ಅಂಕ ಹೊಂದಿದ್ದರೆ, ಭಾರತ 52.780 ಅಂಕಗಳೊಂದಿಗೆ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ.

ಇಸ್ರೋ ಸ್ಪೇಸ್ ಡಾಕಿಂಗ್ ಉಡಾವಣೆ ಯಶಸ್ವಿ

ಸ್ವದೇಶಿ ಬಾಹ್ಯಾಕಾಶ ಕೇಂದ್ರ ಸ್ಥಾಪನೆಗೆ ಮಹತ್ವದ ಹೆಜ್ಜೆ

ಶ್ರೀಹರಿಕೋಟಾ, ಡಿ.30– ಜಗತ್ತಿನ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳ ಪೈಕಿ ಭಾರತದ ಇಸ್ರೋ ತನ್ನದೇಯಾದ ಹೆಗ್ಗುರುತು ಹೊಂದಿದೆ. ಅತೀ ಕಡಿಮೆ ಖರ್ಚಿನಲ್ಲಿ ಚಂದ್ರಯಾನ–3 ಸೇರಿದಂತೆ ಹಲವು ಯಶಸ್ವಿ ಯೋಜನೆಗಳನ್ನು ಸಾಧಿಸಿದೆ. ಇದೀಗ ಇಸ್ರೋ ಮುಡಿಗೆ ಮತ್ತೊಂದು ಗರಿ ಸೇರಿಕೊಂಡಿದೆ. PSLV–ಸಿ60 ರಾಕೆಟ್ ಮೂಲಕ ಸ್ಪೇಸ್ ಡಾಕಿಂಗ್(SpaDeX) ಪ್ರಯೋಗ ಉಡಾವಣೆ ಯಶಸ್ವಿಯಾಗಿ ಮಾಡಿದೆ. ರಾತ್ರಿ 10 ಗಂಟೆಗೆ ಸರಿಯಾಗಿ PSLV–ಸಿ60 ರಾಕೆಟ್ ನಭೋಮಂಡಲಕ್ಕೆ ಚಿಮ್ಮಿತ್ತು. ಬಾಹ್ಯಾಕಾಶದಲ್ಲಿ ಎರಡು ನೌಕೆಗಳನ್ನು ಡಾಕಿಂಗ್ ಮಾಡುವ ಈ ಯೋಜನೆ ಇಸ್ರೋ ಸಾಧನೆಗೆ ಹಿಡಿದ ಕನ್ನಡಿಯಾಗಿದೆ ಈ ಮೂಲಕ ಸ್ಪೇಸ್ ಡಾಕಿಂಗ್ ತಂತ್ರಜ್ಞಾನ ಹೊಂದಿದ ಜಗತ್ತಿನ ನಾಲ್ಕನೇ ದೇಶ ಭಾರತ ಅನ್ನೋ ಹೆಗ್ಗಳಿಕೆಗೆ ಪಾತ್ರವಾಗಿದೆ. ಭಾರತಕ್ಕೂ ಮೊದಲು ಅಮೇರಿಕ, ಚೀನಾ, ರಷ್ಯಾ ಈ ತಂತ್ರಜ್ಞಾನ ಬಳಸಿಕೊಂಡಿದೆ.



ಅಮೆರಿಕದ ಬಾಹ್ಯಾಕಾಶ ಸಂಸ್ಥೆ ಹಿಡಿತದಲ್ಲಿರುವ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದ ರೀತಿಯಲ್ಲೇ ಇದೀಗ ಇಸ್ರೋ ತನ್ನ ಸ್ವದೇಶಿ ಭಾರತೀಯ ಅಂತರಿಕ್ಷ ನಿಲ್ದಾಣದ ಯೋಜನೆ ಹಾಕಿಕೊಂಡಿದೆ. ಈ ಕೇಂದ್ರ ಸ್ಥಾಪಿಸಲು ಸ್ಪೇಸ್ ಡಾಕಿಂಗ್ ಅತ್ಯವಶ್ಯಕವಾಗಿದೆ. ಬಾಹ್ಯಾಕಾಶದಲ್ಲಿ ಭಾರತದ ಇಸ್ರೋ ಮಹತ್ವದ ಮೈಲಿಗಲ್ಲು ಸ್ಥಾಪಿಸಲು ಸಜ್ಜಾಗಿದೆ. ಬಾಹ್ಯಾಕಾಶ ಕೇಂದ್ರಕ್ಕೆ ಗಗನ ಯಾತ್ರಿಗಳು, ಉಪಕರಣಗಳನ್ನು ಕಳುಹಿಸಲು ಡಾಕಿಂಗ್, ಅನ್‌ಡಾಕಿಂಗ್ ಸಾಮರ್ಥ್ಯ ಹಾಗೂ ಪರಿಣತಿ ಹೊಂದಿರಬೇಕು. ಇಷ್ಟೇ ಅಲ್ಲ ಮುಂದಿನ ಇಸ್ರೋದ ಪ್ರಮುಖ ಯೋಜನೆ ಗಳಾದ ಮಾನವ ರಹಿತ ಅಂತರಿಕ್ಷಯಾನ, ಚಂದ್ರ ಅಂಗಳಕ್ಕೆ ಮನುಷ್ಯರ ರವಾನೆ ಸೇರಿದಂತೆ ಹಲವು ಯೋಜನೆಗಳಿಗೆ ಸ್ಪೇಸ್ ಡಾಕಿಂಗ್ ಅತೀ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಇಸ್ರೋದ ಮೊದಲ ಪ್ರಯೋಗ ಯಶಸ್ವಿಯಾಗಿ ಉಡಾವಣೆಯಾಗಿದೆ.

ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ PSLV–ಸಿ60 ರಾಕೆಟ್ ಯಶಸ್ವಿಯಾಗಿ ಉಡಾವಣೆಗೊಂಡಿದೆ. ಜನವರಿ ತಿಂಗಳಲ್ಲೇ ಅಂದರೆ ಇನ್ನು ಕೆಲವೇ ದಿನಗಳಲ್ಲಿ ಸ್ಪೇಸ್ ಡಾಕಿಂಗ್ ಪ್ರಕ್ರಿಯೆಗಳು ಆರಂಭಗೊಳ್ಳಲಿವೆ.

ಅಂತಿಮ ಹಂತದಲ್ಲಿ ಸಮಯ ಬದಲಾವಣೆ: ಇಸ್ರೋ ಐತಿಹಾಸಿಕ ಸಾಧನೆಯ PSLV–ಸಿ60 ರಾಕೆಟ್ ಉಡಾವಣೆಯನ್ನು ರಾತ್ರಿ 9.58ಕ್ಕೆ ನಿಗದಿಪಡಿಸಲಾಗಿತ್ತು. ಆದರೆ ಈ ಸಮಯ ಬದಲಾವಣೆ ಮಾಡಲಾಗಿದ್ದು. 9.58ರ ಬದಲು ರಾತ್ರಿ 10 ಗಂಟೆಗೆ ಬದಲಾವಣೆ ಮಾಡಲಾಗಿತ್ತು ಬಾಹ್ಯಾಕಾಶದಲ್ಲಿ ಸಸಿಗಳು ಚಿಗುರುವ ಬಗ್ಗೆಯೂ ಈ ಉಡ್ಡಯನದ ವೇಳೆ ಸಂಶೋಧನೆ ನಡೆಸಲಾಗುವುದು. ವಿಕ್ರಂ ಸಾರಾ ಬಾಯ್ ಬಾಹ್ಯಾಕಾಶ ಕೇಂದ್ರವು ಕ್ರಾಪ್ಸ್ ಹೆಸರಿನ ಯೋಜನೆಯಡಿ ಆಗಸದಲ್ಲೇ ಉಳಿಯಲಿರುವ ಕಡೆಯ ಹಂತದ ರಾಕೆಟ್‌ನಲ್ಲಿ ಸಸಿಗಳ ಬೆಳವಣಿಗೆ ಕುರಿತ ಪ್ರಯೋಗವನ್ನೂ ನಡೆಸಲಿದೆ. ಯೋಜನೆಯ ಭಾಗವಾಗಿ ಮುಚ್ಚಿದ ಬಾಕ್ಸ್ ಒಂದರಲ್ಲಿ ಹಲಸಂದೆ ಬೀಜಗಳನ್ನು ಇಡಲಾಗಿದ್ದು ಅದು ಮೊಳಕೆ ಯೊಡೆದು, 2 ಎಲೆಗಳಾಗಿ ಅರಳುವ ತನಕದ ಮಾಹಿತಿ ಸಂಗ್ರಹಿಸಿ ಸಂಶೋಧನೆಗೆ ಒಳಪಡಿಸಲಿದೆ. ಜೊತೆಗೆ ಅಂತೆಯೇ, ಪೋಯೆಮ್–4 ಮಿಷನ್‌ನ ಅಡಿಯಲ್ಲಿ ಬಾಹ್ಯಾಕಾಶದಲ್ಲಿ ತೇಲುತ್ತಿರುವ ತ್ಯಾಜ್ಯವನ್ನು ಸಂಗ್ರಹಿಸುವ ರೋಬೋಟ್ ಹಾಗೂ ನೌಕೆಗಳಿಗೆ ಇಂಧನ ತುಂಬುವ ಪರೀಕ್ಷೆ ನಡೆಸಲಾಗುವುದು.

ಇಸ್ರೋದ ಸ್ಪೇಡೆಕ್ಸ್ ಉಪಗ್ರಹಕ್ಕೆ ರಾಜ್ಯದ ಬಿಜಿಎಸ್ ಕಾಲೇಜಿನ ಪೇಲೋಡ್ ಸೇರ್ಪಡೆ

ಚಿಕ್ಕಬಳ್ಳಾಪುರ: ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ 'ಸ್ಪೇಸ್ ಡಾಕಿಂಗ್ ಎಕ್ಸ್‌ಪರಿಮೆಂಟ್' (ಸ್ಪೇಡೆಕ್ಸ್) ಯೋಜನೆ ಭಾಗವಾಗಿ 2 ಉಪಗ್ರಹಗಳು ಇಂದು ರಾತ್ರಿ ಉಡಾವಣೆಗೊಂಡಿತು. ಈ ಉಪಗ್ರಹಕ್ಕೆ ರಾಜ್ಯದ ಪ್ರತಿಷ್ಠಿತ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗಳ ವತಿಯಿಂದ 'ಅರ್ಪಿತ್' ಪೇಲೋಡ್ ಒದಗಿಸಿದೆ. ಈ ಮೂಲಕ ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಕ್ರಾಂತಿಗೆ ಚಿಕ್ಕಬಳ್ಳಾಪುರದ ಎಸ್‌ಜೆಸಿಐಟಿ ಇಂಜಿನಿಯರಿಂಗ್ ಕಾಲೇಜಿನ ತಂಡ ಮುಂದಾಗಿದೆ. ಅಂದಹಾಗೆ ಇಂದು ರಾತ್ರಿ 9 ಗಂಟೆ 58 ನಿಮಿಷಕ್ಕೆ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ 2 ಉಪಗ್ರಹಗಳು ಉಡಾವಣೆಗೊಂಡಿತು. ಇದಕ್ಕಾಗಿ 'ಅರ್ಪಿತ್' ಹೆಸರಿನ ಪೇಲೋಡ್ ನಿರ್ಮಿಸಿರುವ ಎಸ್‌ಜೆಸಿಐಟಿ ಇಂಜಿನಿಯರಿಂಗ್ ಕಾಲೇಜಿನ ತಂಡ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ ತಲುಪಿಸಿತ್ತು.

ಕೈಯಲ್ಲಿ ಡೆತ್‌ನೋಟ್ ಹಿಡಿದು ಕೆಎಸ್‌ಡಿಎಲ್ ಅಧಿಕಾರಿ ಆತ್ಮಹತ್ಯೆ



ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧಿಕಾರಿಯೊಬ್ಬರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಅಮೃತ್ ಸಿರಿಯೂರ್ ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ. ಕೈಯ್ಯಲ್ಲಿ ಡೆತ್‌ನೋಟ್ ಹಿಡಿದುಕೊಂಡು ತಮ್ಮ ನಿವಾಸದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೆಎಸ್‌ಡಿಎಲ್ ಮೆಟಿರಿಯಲ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಅಮೃತ್ ಸಿರಿಯೂರ್ ಡೆತ್‌ನೋಟ್‌ನಲ್ಲಿ ಹಿರಿಯ ಅಧಿಕಾರಿಗಳ ಹೆಸರನ್ನು ಉಲ್ಲೇಖ ಮಾಡಿದ್ದಾರೆ. ಕೆಲಸದ ಸಂಬಂಧ ಒತ್ತಡ ಹಾಗೂ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದು ಇಂದು ಪ್ರಕರಣ ಬೆಳಕಿಗೆ ಬಂದಿದೆ. ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಪ್ರೇಕ್ಷಕರ ರಂಜಿಸಿದ 'ಎಂದೂ ಮರೆಯದ ಹಾಡು'

ಮೈಸೂರು,ಡಿ.30(ಎಸ್‌ಪಿಎನ್)– ಮೈಸೂರು ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ 'ಎಂದೂ ಮರೆಯದ ಹಾಡು' ಶೀರ್ಷಿಕೆಯಡಿ ಕನ್ನಡ ಮತ್ತು ಹಿಂದಿ ಸಿನಿಮಾ ಹಾಡುಗಳನ್ನು ಹಿರಿಯ ಗಾಯಕರು ಹಾಡಿ, ಪ್ರೇಕ್ಷಕರನ್ನು ರಂಜಿಸಿದರು.

ಕಾರ್ಯಕ್ರಮದ ಮೊದಲಿಗೆ ಗಣಪತಿ ಕುರಿತು ಭಕ್ತಿಗೀತೆಯನ್ನ ಹಾಡಿದರು. ನಂತರ ಅರಿಸಿನ ಕುಂಕುಮ ಚಿತ್ರದ 'ಇಳಿದು ಬಾ ತಾಯಿ' ಹಾಡು ಬಿ.ಎಸ್.ರಾವ್ ಸಿರಿಕಂಠದಲ್ಲಿ ಮೂಡಿಬಂತು. ನಂತರ ಟೋನಿ ಚಿತ್ರದ 'ಚೆಲುವ ಪ್ರತಿಮೆ ನೀನು' ಹಾಡಿಗೆ ರೇವಣ್ಣ ದನಿಗೂಡಿಸಿದರು. ಗಾಳಿಮಾತು ಚಿತ್ರದ 'ಒಮ್ಮೆ ನಿನ್ನನ್ನು ಕಣ್ಣು ತುಂಬಾ' ಹಾಡನ್ನು ಗಾಯಕಿ ತೇಜಾವತಿ ಹಾಡಿದರೆ, 'ಬಯಲುದಾರಿ' ಸಿನಿಮಾದ 'ಕನಸಲೂ ನೀನೆ ಮನಸಲೂ ನೀನೆ' ಹಾಡಿಗೆ ರೇವಣ್ಣ ಹಾಡಿ ಪ್ರೇಕ್ಷಕರ ಮನಸೂರೆಗೊಂಡರು.

ಹಿರಿಯ ಗಾಯಕರಿಂದ ಗಾನಮಂಜರಿ



'ಎಂದೂ ಮರೆಯದ ಹಾಡು' ಶೀರ್ಷಿಕೆಯಡಿ ಕನ್ನಡ ಮತ್ತು ಹಿಂದಿ ಸಿನಿಮಾ ಹಾಡುಗಳನ್ನು ಹಿರಿಯ ಗಾಯಕರು ಹಾಡಿ ಪ್ರೇಕ್ಷಕರನ್ನು ರಂಜಿಸಿದರು.

ನಂತರ 'ಧ್ರುವತಾರೆ' ಚಿತ್ರದ 'ಆ ಮೋಡ ಬಾನಲ್ಲಿ ತೇಲಾಡುತ್ತಾ', ಶರಪಂಜರ ಚಿತ್ರದ 'ಕೊಡಗಿನ ಕಾವೇರಿ', ಹಮ್ ಆಪ್ ಕೇ ಹೈ ಕೌನ್ ಚಿತ್ರದ 'ಪೆಹಲಾ ಪೆಹಲಾ ಪ್ಯಾರ್ ಹೈ', ದೇವತಾ ಮನುಷ್ಯ ಚಿತ್ರದ 'ಹೃದಯದಲಿ ಇದೇನಿದು ನದಿಯೊಂದು', ಬಯಸದೇ ಬಂದ ಭಾಗ್ಯ ಸಿನಿಮಾದ 'ಪ್ರೀತಿಸು ಸಮೀಪಿಸು', ಆಂದಿ ಚಿತ್ರದ 'ತೇರೆ ಬಿನಾ ಜಿಂದಗಿ ಸೇ', ಜ್ವಾಲಾಮುಖಿ ಚಿತ್ರದ 'ಏಕೋ ಏನೋ ಆ ನನ್ನ ಮನವು', ಕಸ್ತೂರಿ ನಿವಾಸ ಚಿತ್ರದ 'ನೀ ಬಂದು ನಿಂತಾಗ', ಕಟಿ ಪತಂಗ್ ಚಿತ್ರದ 'ಹೇ ಶ್ಯಾಮ್ ಮಸ್ತಾನಿ', 'ಹೊಂಬಿಸಿಲು ಚಿತ್ರದ 'ನೀರ ಬಿಟ್ಟು ನೆಲದ ಮೇಲೆ', ' ಬೆಳ್ಳಿ ಮೋಡ ಸಿನಿಮಾದ 'ಬೆಳ್ಳಿ ಮೋಡದ ಅಂಚಿನಿಂದ', ' ನೀ ಬರೆದ ಕಾದಂಬರಿ ಚಿತ್ರದ 'ನೀ ಮೀಟಿದ ನೆನಪೆಲ್ಲವೋ', ಸಾಮ್ರಾಟ್ ಚಿತ್ರದ 'ನಿಮ್ ಕಡೇ ಸಾಂಬಾರ್ ಅಂದ್ರೆ' ಹಾಡಿದರು.

'ಕಯಾಮತ್ ಸೇ ಕಯಾಮತ್ ಚಿತ್ರದ 'ಪಾಪ ಕೆಹತೆ ಹೈ ಬಡಾ ನಾಮ್ ಕರೆಗಾ', ರಾಜ ನನ್ನ ರಾಜ ಸಿನಿಮಾದ 'ತನುವು ಮನವು ಎಂದೂ ನಿಂದಾಗಿದೆ', ಮೆರೆ ಜೀವನ್ ಸಾಥಿ ಚಿತ್ರದ 'ಓ ಮೆರೆ ದಿಲ್ ಕೆ ಚೈನ್', ಯಾರಿವನು ಚಿತ್ರದ ' ರಾಗವೋ ಅನುರಾಗವೋ', ಸಿಂಗಾಪುರದಲ್ಲಿ ರಾಜಾಕುಳ್ಳ ಸಿನಿಮಾದ 'ನೆನ್ನೆ ನೆನ್ನೆಗೆ ನಾಳೆ ನಾಳೆಗೆ', 'ಪ್ರಿಯಾ ಪ್ರಿಯಾ ಓ ಪ್ರಿಯಾ', ನಾನೊಬ್ಬ ಕಳ್ಳ ಸಿನಿಮಾದ 'ಆಸೆಯು ಕೈಗೂಡಿತು', ಆಟೋ ರಾಜ ಚಿತ್ರದ 'ನಲಿವಾ ಗುಲಾಬಿ ಹೂವೇ', 'ಪ್ಯಾರ್ ಮಾಂಗಾ ಹೈ ತುಮ್‌ಸೇ', ಬೆಂಕಿಯ ಬಲೆ ಚಿತ್ರದ 'ಮನೆಯನು ಬೆಳಗಿದೆ ಇಂದು', ಜೀವನ ಚಕ್ರ ಚಿತ್ರದ 'ಆನಂದ ಆನಂದ ಆನಂದವೇ', ರಾಜಧಾನಿ ಚಿತ್ರದ 'ಮಿಡಿವ ನನ್ನ ಹೃದಯ', ಲಂಕೇಶ್ ಪತ್ರಿಕೆ ಚಿತ್ರದ 'ಎಂದೋ ಕಂಡ ಕನಸು' ಹಾಗೂ ದ.ರಾ.ಬೇಂದ್ರ ರಚಿತ 'ನೀ ಹಿಂಗೇ ನೋಡ ಬ್ಯಾಡ' ಹಾಗೂ ನಿಂಗಿ ನಿಂಗಿ ನಿಂಗಿ ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿ ಚಪ್ಪಾಳೆ ಗಿಟ್ಟಿಸಿದರು.

ಈ ವೇಳೆ ಗಾಯಕರಾದ ಮಂಜು, ಬಿ.ಎಸ್.ರಾವ್, ರೇವಣ್ಣ, ರವಿ ಹಾಗೂ ತೇಜಸ್ವಿನಿ, ತೇಜಾವತಿ ಅವರು ಡಾ.ರಾಜ್ ಕುಮಾರ್, ವಿಷ್ಣುವರ್ಧನ್, ಅನಂತನಾಗ್ ಸೇರಿದಂತೆ ಇತರೆ ನಟರು ನಟಿಸಿರುವ ಸಿನಿಮಾ ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿದರು. ಈ ವೇಳೆ ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರದಲ್ಲಿ ಫೆಬ್ರವರಿಯಲ್ಲಿ 3 ದಿನ ಕುಂಭಮೇಳ ಹಿನ್ನೆಲೆ

ತ್ರಿವೇಣಿ ಸಂಗಮಕ್ಕೆ ಡಿಸಿ ಭೇಟಿ, ಪರಿಶೀಲನೆ

● 2 ದಿನದೊಳಗೆ ಅಂದಾಜು ಪಟ್ಟಿ ತಯಾರಿಸಿ ● ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ



ಮೈಸೂರಿನಲ್ಲಿ ವಿವಿಧ ಮಠಾಧೀಶರ ಸಮ್ಮುಖದಲ್ಲಿ ನಡೆದ ಕುಂಭ ಮೇಳದ ಮೊದಲ ಸಭೆ ಬಳಿಕ ತ್ರಿವೇಣಿ ಸಂಗಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪೂರ್ವ ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಮುಂದಿನ ದಿನಗಳಲ್ಲಿ ಕುಂಭ ಮೇಳದ ಅಂದಾಜು ಪಟ್ಟಿ ತಯಾರಿಸಿದ ಬಳಿಕ ಸರ್ಕಾರಕ್ಕೆ ವರದಿ ಸಲ್ಲಿಸಿ ಮಾಧ್ಯಮಗಳಿಗೂ ಮಾಹಿತಿ ನೀಡುತ್ತೇನೆ.

- ಲಕ್ಷ್ಮೀಕಾಂತ್ ರೆಡ್ಡಿ, ಜಿಲ್ಲಾಧಿಕಾರಿ.



ತ್ರಿವೇಣಿ ಸಂಗಮಕ್ಕೆ ಡಿಸಿ ಲಕ್ಷ್ಮೀಕಾಂತ್ ರೆಡ್ಡಿ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ತಿ.ನರಸೀಪುರ, ಡಿ.30– ಮುಂಬರುವ ಫೆಬ್ರವರಿಯಲ್ಲಿ 3 ದಿನಗಳ ಕಾಲ ತಿರುಮಕೂಡಲು ನರಸೀಪುರದ ತ್ರಿವೇಣಿ ಸಂಗಮದಲ್ಲಿ ನಡೆಯುವ ದಕ್ಷಿಣ ಭಾರತದ ಕುಂಭಮೇಳ ಹಿನ್ನೆಲೆಯಲ್ಲಿ ಹಳೇ ತಿರುಮಕೂಡಲಿನಲ್ಲಿರುವ ತ್ರಿವೇಣಿ ಸಂಗಮಕ್ಕೆ ಸೋಮವಾರ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಅವರು ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಉತ್ತರ ಭಾರತದ ಪ್ರಯಾಗರಾಜ್ ಮಾದರಿ ದಕ್ಷಿಣ ಭಾರತದ ಕುಂಭಮೇಳ ಆಯೋಜಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಸೂಚನೆ ಮೇರೆಗೆ ತ್ರಿವೇಣಿ ಸಂಗಮಕ್ಕೆ ಭೇಟಿ ನೀಡಿ ಪರಿಶೀಲಿಸಿದ ಜಿಲ್ಲಾಧಿಕಾರಿಗಳು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಇದಕ್ಕೂ ಮುನ್ನ ಕುರುಬೂರು ಗ್ರಾಮಕ್ಕೆ ಭೇಟಿ ನೀಡಿ ಭೂ ವಿವಾದದ ಸ್ಥಳ ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ನಂತರ ಪಟ್ಟಣದ ತಾಲೂಕು ಕಚೇರಿಗೆ ಆಗಮಿಸಿ ತಹಸೀಲ್ದಾರ್ ಕೋರ್ಟ್ ಸಭಾಂಗಣದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿ, ಕುಂಭಮೇಳ ನಡೆಸಲು ಅಂದಾಜು ಪಟ್ಟಿ ತಯಾರಿಸಿ 2 ದಿನದೊಳಗೆ ಕಳುಹಿಸುವಂತೆ ಹಾಗೂ ಸ್ಥಳ ಪರಿಶೀಲಿಸಿ ಕಾರ್ಯಕ್ರಮಗಳ ಸಿದ್ಧತೆಗೆ ಸ್ಥಳ ಗುರುತಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಹಿಂದಿನ ಕುಂಭಮೇಳಗಳಲ್ಲಿ ತ್ರಿವೇಣಿ ಸಂಗಮದ ಪಾತ್ರದಲ್ಲೇ ಯಜ್ಞ, ಹೋಮ ಹವನ ನಡೆಸಲು ಯಾಗ ಮಂಟಪ, ಧಾರ್ಮಿಕ ಸಭೆ, ಸಮಾರಂಭ ನಡೆಸಲು ವೇದಿಕೆ ಹಾಕಲಾಗಿತ್ತು ಮಠಾಧಿಪತಿಗಳ ಹಾಗೂ ಹರಗುರು ಚರಮೂರ್ತಿಗಳ ವಾಸ್ತವ್ಯಕ್ಕೆ ಕುಟೀರಗಳನ್ನು ಕಲ್ಪಿಸಲಾಗಿತ್ತು. ಅರಸೇನಾ ಪಡೆಯಿಂದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಮುಂಭಾಗದಿಂದ ಕಪಿಲಾ ನದಿ ದಾಟಲು ತಾತ್ಕಾಲಿಕ ಸೇತುವೆ ನಿರ್ಮಾಣ ಮಾಡಲಾಗಿತ್ತು. ಶ್ರೀನಡುವಳೆ ಬಸಪ್ಪನ ದರ್ಶನಕ್ಕೆ ಮರಳಿನ ಮೂಟೆಗಳನ್ನು ಹಾಕಿ ಓಡಾಟಕ್ಕೆ ಮಾರ್ಗ ಕಲ್ಪಿಸಲಾಗಿತ್ತು. ವಿವಿಧ ಇಲಾಖೆಗಳಿಗೆ ಅಗತ್ಯ ಸಿದ್ಧತಾ ಕಾಮಗಾರಿಗಳನ್ನು ಹಂಚಿಕೆ ಮಾಡಲಾಗಿತ್ತು ಎಂಬ ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಗೆ ಸ್ಥಳೀಯರು ಮಾಹಿತಿ ನೀಡಿದರೆ, ತಾಲೂಕು ಮಟ್ಟದ ಅಧಿಕಾರಿಗಳು ವಿವರಗಳನ್ನು ಒದಗಿಸಿದರು.

ನದಿ ತೀರದಲ್ಲಿ ಯಾಗ ಮಂಟಪ, ಧಾರ್ಮಿಕ ಸಮಾರಂಭ: ತ್ರಿವೇಣಿ ಸಂಗಮದಲ್ಲಿ ಮರಳಿನ ರಾಶಿ ಕಡಿಮೆಯಾಗಿ, ನದಿ ಪಾತ್ರದಲ್ಲಿ ನೀರು ಹರಿಯುತ್ತಿರುವುದರಿಂದ ಈ ಬಾರಿ ಕುಂಭಮೇಳದ ಯಾಗ ಮಂಟಪ ಮತ್ತು ಧಾರ್ಮಿಕ ಸಮಾರಂಭದ ವೇದಿಕೆಯನ್ನು ನದಿ ತೀರದಲ್ಲಿ ನಿರ್ಮಿಸುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಸೂಚಿಸಿದರು.

ಕೆಆರ್‌ಎಸ್ ಮತ್ತು ಕಬಿನಿ ಅಣೆಕಟ್ಟೆಗಳು ತುಂಬಿದ್ದು, ಅಲ್ಲಲ್ಲಿ ಮಳೆ ಬೀಳುತ್ತಿರುವುದರಿಂದ ನದಿಯಲ್ಲಿ ನೀರಿನ ಹರಿವಿನ ಪ್ರಮಾಣ ನಿರಂತರವಾಗಿರಲಿದೆ. ಹಾಗಾಗಿ ಯಾಗ ಮಂಟಪ, ಧಾರ್ಮಿಕ ಸಮಾರಂಭಕ್ಕೆ ನದಿ ದಡದ ಸೂಕ್ತ ಪ್ರದೇಶ ಆಯ್ಕೆ ಮಾಡುವಂತೆ ತಿಳಿಸಿದರು. ಪುಣ್ಯಸ್ನಾನಕ್ಕೆ ಸೂಕ್ತವಾದ ಏಳೆಂಟು ಸ್ಥಳಗಳನ್ನು ಆಯ್ಕೆ ಮಾಡಿ, ಅಪಾಯವಾಗದಂತೆ ಮುಂಜಾಗ್ರತ ಕ್ರಮ ಕೈಗೊಳ್ಳಲು ಸ್ಥಳದಲ್ಲಿದ್ದ ಲೋಕೋಪಯೋಗಿ ಹಾಗೂ ಜಿಪಂ ಕಾರ್ಯಪಾಲಕ ಇಂಜಿನಿಯರ್ ಅವರಿಗೆ ಸೂಚಿಸಿದರು.

ಇದೇ ವೇಳೆ ಜೀರ್ಣೋದ್ಧಾರ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿರುವ ಶ್ರೀಅಗಸ್ತ್ಯೇಶ್ವರ ದೇವಾಲಯಕ್ಕೆ ತೆರಳಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಪೂಜೆ ಸಲ್ಲಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಡಿವೈಎಸ್‌ಪಿ ಜಿ.ಎಸ್.ರಘು, ಉಪವಿಭಾಗಾಧಿಕಾರಿ ರಕ್ಷಿತ್, ಲೋಕೋಪಯೋಗಿ ಇಲಾಖೆ ಇಇ ಜಿ.ರಾಜು, ಎಇಇ ಸತೀಶ್, ತಹಸೀಲ್ದಾರ್ ಟಿ.ಜಿ. ಸುರೇಶಾಚಾರ್, ಕಾರ್ಯ ನಿರ್ವಾಹಕ ಅಧಿಕಾರಿ ಪಿ.ಎಸ್.ಅನಂತ ರಾಜು, ಕಾವೇರಿ ನೀರಾವರಿ ನಿಗಮದ ಎಇಇ ಎಸ್.ಮಂಜುನಾಥ್, ಸಹಾಯಕ ಇಂಜಿನಿಯರ್ ರವೀಂದ್ರ, ಮಾದೇಗೌಡನಹುಂಡಿ ವಿಭಾಗದ ಎಇ ಮಂಜುನಾಥ್, ಇನ್ಸ್‌ಪೆಕ್ಟರ್‌ಗಳಾದ ಮನೋಜ್ ಕುಮಾರ್, ಧನಂಜಯ್, ಎಸ್‌ಐ ಜಗದೀಶ ಧೂಳಶೆಟ್ಟಿ ಜಿಪಂ ಎಇಇ ಪಿ.ಎಸ್. ಚರಿತಾ, ಪುರಸಭೆ ಮುಖ್ಯಾಧಿಕಾರಿ ಬಿ.ಕೆ. ವಸಂತ ಕುಮಾರಿ, ಇಂಜಿನಿಯರ್ ನಾಗರಾಜು, ಸೆಸ್ಕಾಂ ಎಇಇ ಕೆ.ವಿ.ವಿರೇಶ್, ಕಬಿನಿ ವಿತರಣಾ ನಾಲ ಉಪವಿಭಾಗದ ಎಇಇ ಶಾಂತಕುಮಾರ್, ರಂಗಸ್ವಾಮಿ, ಆರ್‌ಐ ಮಹೇಂದ್ರ, ಹಿರಿಯ ಕಾಂಗ್ರೆಸ್ ಮುಖಂಡ ಪಿ.ಸ್ವಾಮಿನಾಥಗೌಡ, ಕಸಬಾ ಪಿಎಸಿಎಸ್ ನಿರ್ದೇಶಕ ಟಿ.ಎಸ್.ಫಣೀಶ್ ಕುಮಾರ್, ಯುವ ಮುಖಂಡ ಚೇತನ್ ಇತರರಿದ್ದರು.

ಚಿಲ್ಕುಂದ ಗ್ರಾಪಂಗೆ ಜಗದೀಶ್ ಅಧ್ಯಕ್ಷ



ಚಿಲ್ಕುಂದ ಗ್ರಾಪಂ ಅಧ್ಯಕ್ಷ ಜಗದೀಶ್ ಅವರನ್ನು ಸನ್ಮಾನಿಸಲಾಯಿತು.

ಹನಗೋಡು, ಡಿ.30– ಸಮೀಪದ ಚಿಲ್ಕುಂದ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಸದಸ್ಯ ಜಗದೀಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷ ಸತೀಶ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜಗದೀಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಪಿಡಬ್ಲ್ಯೂಡಿ ಎಇಇ ಯತೀಶ್ ಘೋಷಿಸಿದರು. ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಗ್ರಾಪಂ ಆವರಣದಲ್ಲಿ ಜಮಾಯಿಸಿದ್ದ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಪಟಾಕಿ ಸಿಡಿಸಿ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ನೂತನ ಅಧ್ಯಕ್ಷರನ್ನು ಸನ್ಮಾನಿಸಿ ಮಾತನಾಡಿದ ತಾಪಂ ಮಾಜಿ ಉಪಾಧ್ಯಕ್ಷ ಪ್ರೇಮಕುಮಾರ್, ನೂತನ ಅಧ್ಯಕ್ಷರು ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರು, ಬೀದಿ ದೀಪ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವಂತೆ ತಿಳಿಸಿದರು.

ನೂತನ ಅಧ್ಯಕ್ಷ ಜಗದೀಶ್ ಮಾತನಾಡಿ, ಅವಿರೋಧ ಆಯ್ಕೆಗೆ ಸಹಕರಿಸಿದ ಎಲ್ಲಾ ಸದಸ್ಯರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಶಾಸಕ ಜಿ.ಡಿ.ಹರೀಶ್‌ಗೌಡರ ಸಲಹೆ ಹಾಗೂ ಗ್ರಾಪಂ ಸದಸ್ಯರ ಸಹಕಾರದಿಂದ ಗ್ರಾಪಂ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳುತ್ತೇನೆ ಎಂದರು.

ಈ ವೇಳೆ ಮುಖಂಡರಾದ ವಿನೋದ್ ರಾಜ್, ಶಿವಕುಮಾರ್, ವಸಂತಕುಮಾರಿ, ಶೋಭಾ, ಜಯರಾಂ, ಗಾಯತ್ರಿ, ಕಾವೇರಮ್ಮ, ಗೌರಮ್ಮ, ನಾಗರತ್ನ ಹಾಗೂ ಜೆಡಿಎಸ್ ಮುಖಂಡರಿದ್ದರು.

ವಾಟರ್ ಮ್ಯಾನ್ ವಿರುದ್ಧ ಪ್ರತಿಭಟನೆ



ವಾಟರ್ ಮ್ಯಾನ್ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಹಂಪಾಪುರ, ಡಿ.30– ಗ್ರಾಪಂ ವ್ಯಾಪ್ತಿಯ 1ನೇ ವಾರ್ಡ್ ನಿವಾಸಿಗಳಿಗೆ ಕುಡಿಯುವ ನೀರು ಪೂರೈಕೆ ಮಾಡದ ವಾಟರ್‌ಮ್ಯಾನ್ ವಿರುದ್ಧ ರೈತ ಮುಖಂಡರು ಪ್ರತಿಭಟನೆ ನಡೆಸಿದರು.

ಹಂಪಾಪುರ ಗ್ರಾಪಂ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಗ್ರಾಪಂ ವ್ಯಾಪ್ತಿಯ 1ನೇ ವಾರ್ಡ್ ನಿವಾಸಿಗಳಿಗೆ ಸಮಯಕ್ಕೆ ಸರಿಯಾಗಿ ಕುಡಿಯುವ ನೀರನ್ನು ಪೂರೈಕೆ ಮಾಡದೇ ವಾಟರ್ ಮ್ಯಾನ್ ಮಂಜು ತೊಂದರೆ ನೀಡುತ್ತಿದ್ದಾರೆ. ತನಗೆ ಇಷ್ಟ ಬಂದಾಗ ನೀರು ಬಿಡುವ ವಾಟರ್ ಮ್ಯಾನ್ ವಿರುದ್ಧ ಪಿಡಿಓ ಸೌಮ್ಯ ಯಾವುದೇ ಕ್ರಮ ಕೈಗೊಂಡಿಲ್ಲ. 5 ದಿನಕ್ಕೊಮ್ಮೆ ನೀರು ಬಿಡುತ್ತಿದ್ದು, ಅದೂ ಸಹ ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ. ನೀರು ಬಿಡುವಂತೆ ಕೇಳಿದರೆ ಮಂಜು ಉಡಾಫೆ ಉತ್ತರ ನೀಡುತ್ತಾರೆ. ಇದರಿಂದ ಕುಡಿಯುವ ನೀರಿಲ್ಲದೇ ಇಲ್ಲಿನ ನಿವಾಸಿಗಳು ತೊಂದರೆಗೆ ಒಳಗಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆ ಮಾಡಬೇಕು ಎಂದರು.

ಸಾರ್ವಜನಿಕರು ಗ್ರಾಪಂಗೆ ಕುಂದುಕೊರತೆ ಅರ್ಜಿ ನೀಡಿದರೆ ಅದಕ್ಕೆ ಉತ್ತರಿಸದೇ ವಿಳಂಬ ಮಾಡಲಾಗುತ್ತಿದೆ. ಅರ್ಜಿ ಕೊಟ್ಟು 6 ತಿಂಗಳಾದರೂ ಅದಕ್ಕೆ ಉತ್ತರ ನೀಡಲು ಇಲ್ಲಿನ ಅಧಿಕಾರಿಗಳು ಮುಂದಾಗುತ್ತಿಲ್ಲ. ಹೀಗಾಗಿ ಅರ್ಜಿಯನ್ನು ಪರಿಶೀಲಿಸಿ ಶೀಘ್ರ ಉತ್ತರ ನೀಡಬೇಕು ಎಂದ ಪ್ರತಿಭಟನಾಕಾರರು ನಮ್ಮ ಸಮಸ್ಯೆ ಬಗೆಹರಿಯದಿದ್ದರೇ ರಸ್ತೆ ತಡೆದು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿ ಗ್ರಾಪಂ ಅಧಿಕಾರಿ ಅಮೃತ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಹೆಚ್.ಬಿ.ರಾಜೇಶ್, ನಂಜುಂಡಸ್ವಾಮಿ, ಸಂಘಟನಾ ಕಾರ್ಯದರ್ಶಿ ರಮೇಶ್, ಹೇಮಂತ್ ಕುಮಾರ್, ಸ್ವಾಮಿ, ಮುಖಂಡರಾದ ಗಂಗಾಧರ್, ಮಂಜು, ಸಿದ್ದರಾಮ, ರುದ್ರಣ್ಣ, ಸೀನ, ಮಹದೇವಪ್ಪ, ಸಿದ್ದನಾಯಕ, ಮಧು, ನಾಗಣ್ಣ ಇನ್ನಿತರರಿದ್ದರು.

ಅನೀಮಿಯ ಮುಕ್ತ ಪೌಷ್ಟಿಕ ಕರ್ನಾಟಕ ಕಾರ್ಯಾಗಾರ



ಪಿರಿಯಾಪಟ್ಟಣದಲ್ಲಿ ಕಾರ್ಯಾಗಾರ ನಡೆಯಿತು.

ಪಿರಿಯಾಪಟ್ಟಣ, ಡಿ.30– ಪಟ್ಟಣದ ತಾಪಂ ಸಭಾಂಗಣದಲ್ಲಿ ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ ಹಾಗೂ ಐಟಿಸಿ ವತಿಯಿಂದ ಅನೀಮಿಯ ಮುಕ್ತ ಪೌಷ್ಟಿಕ ಕರ್ನಾಟಕದ ಕುರಿತು ಒಂದು ದಿನದ ಕಾರ್ಯಾಗಾರ ನಡೆಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ರವಿಪ್ರಸನ್ನ ಮಾತನಾಡಿ, ಅನೀಮಿಯ ಮುಕ್ತ ತಾಲೂಕು ಮಾಡಲು ಶಾಲಾ ಶಿಕ್ಷಕರ ಪಾತ್ರ ತಿಳಿಸಿದರು.

ಡಾ.ಸುನೀಲ್, ಅನೀಮಿಯಾ ರೋಗ ಲಕ್ಷಣಗಳು, ಅದನ್ನು ತಡೆಗಟ್ಟುವ ವಿಧಾನ, ಆಹಾರ ಪದ್ಧತಿ ಹಾಗೂ ಚಿಕಿತ್ಸೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಸರ್ಕಾರಿ ಶಾಲೆಯ ಕಿರಿಯ, ಹಿರಿಯ ಹಾಗೂ ಪ್ರೌಢಶಾಲೆ ಮುಖ್ಯೋಪಾಧ್ಯಾಯರು, ಸಿ.ಆರ್‌ಪಿಗಳು, ಬಿಆರ್‌ಸಿ ಶಿವರಾಜ್, ಪಿ.ಟಿ.ಸಂಸ್ಥೆಯ ಜಿಲ್ಲಾ ಸಂಯೋಜಕ ಮಧುಕರ್, ತಾಲೂಕು ಸಂಯೋಜಕ ಸಂತೋಷ್, ವಸಂತ್, ಜ್ಯೋತಿ, ರಂಗರಾಜ್ ಭಾಗವಹಿಸಿದ್ದರು.

ಬನ್ನಿಕುಪ್ಪೆ ಪಿಎಸಿಎಸ್‌ಗೆ ಚೌಡನಾಯಕ ಉಪಾಧ್ಯಕ್ಷ



ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಸನ್ಮಾನಿಸಲಾಯಿತು.

ಹುಣಸೂರು, ಡಿ.30– ತಾಲೂಕಿನ ಬನ್ನಿಕುಪ್ಪೆ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷರಾಗಿ ಚೌಡನಾಯಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಚೌಡನಾಯಕ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆಯ ರಾಜಣ್ಣ ಘೋಷಿಸಿದರು. ಇದೇ ವೇಳೆ ನೂತನ ಉಪಾಧ್ಯಕ್ಷ ಚೌಡನಾಯಕ ಹಾಗೂ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಅಭಿನಂದಿಸಲಾಯಿತು.

ಈ ವೇಳೆ ಅಧ್ಯಕ್ಷ ಜಯರಾಮ, ಮಾಜಿ ಉಪಾಧ್ಯಕ್ಷ ಅಶೋಕ, ನಿರ್ದೇಶಕರಾದ ಗೋವಿಂದೇಗೌಡ, ಚೆಲುವರಾಜ, ಅಣ್ಣಯ್ಯ ನಾಯಕ, ನಾಗಯ್ಯ, ಪುಟ್ಟನಾಯಕ, ಈಶ್ವರಗೌಡ, ಲಲಿತಮ್ಮ, ಚಿಕ್ಕತಾಯಮ್ಮ, ಸಿಇಓ ಮಂಜುನಾಥ್ ಹಾಜರಿದ್ದರು.

ಹಳ್ಳಿಗಳಲ್ಲಿ ಜಾನಪದ ಕಲೆಗೆ ಹೆಚ್ಚು ಒತ್ತು ನೀಡಿ



ಕಾರ್ಯಕ್ರಮವನ್ನು ಗ್ರಾಪಂ ಸದಸ್ಯ ಶಂಕರ್ ಉದ್ಘಾಟಿಸಿದರು.

ಮಲ್ಕುಂಡಿ, ಡಿ.30– ಗ್ರಾಮೀಣ ಭಾಗದಲ್ಲಿ ಜಾನಪದ ಕಲೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ದುಗ್ಗಹಳ್ಳಿ ಗ್ರಾಪಂ ಸದಸ್ಯ ಶಂಕರ್ ತಿಳಿಸಿದರು.

ಸಮೀಪದ ಎಂ.ಕೊಂಗಳ್ಳಿ ಗ್ರಾಮದಲ್ಲಿ ಜಿ.ಎಂ.ತಂದಾನಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಮೈಸೂರಿನ ಗುರುರಾಜ್ ಅವರ ತಂಡದಿಂದ ಆಯೋಜಿಸಿದ್ದ ಜಾನಪದ ಮಹಾಕಾವ್ಯ ಶೀರ್ಷಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಗರ ಪ್ರದೇಶಕ್ಕಿಂತ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಜಾನಪದ ಕಲಾ ತಂಡಗಳಿದ್ದು, ಜಾನಪದ ಕಲೆಗೆ ಹೆಚ್ಚಿನ ಒತ್ತು ನೀಡಬೇಕು ಎಂದರು.

ಈ ವೇಳೆ ಎಂ.ಎಸ್.ಡೆವಲಪರ್ಸ್‌ನ ಎಂ.ಮಂಜು, ಕನಕ ನೌಕರರ ಸಂಘದ ಅಧ್ಯಕ್ಷ ಜವರೇಗೌಡ, ಬ್ರಾಹ್ಮಣ ಪರಿವಾರದ ಅಧ್ಯಕ್ಷ ಗಣೇಶ್ ರಾವ್, ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಕುಮಾರ್, ಗ್ರಾಮದ ಮುಖಂಡ ಸುರೇಶ್ ಸೇರಿದಂತೆ ಇತರರಿದ್ದರು.

ಪ್ರಶಸ್ತಿಯ ಮೌಲ್ಯ ಹೆಚ್ಚಿಸುವ ಹಾಗೆ ಸೇವೆ ಸಲ್ಲಿಸಿ

ದೊಡ್ಡಬಳ್ಳಾಪುರ ವಾಲ್ಮೀಕಿ ಮಠದ ಬ್ರಹ್ಮಾನಂದ ಸ್ವಾಮೀಜಿ



ಡಾ.ಎಂ.ಮಾದೇಶ್ ಭಾರತ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ತಿ.ನರಸೀಪುರ, ಡಿ.30– ಕೇವಲ ಪ್ರಶಸ್ತಿ ಪಡೆದರಷ್ಟೇ ಸಾಲದು. ಪ್ರಶಸ್ತಿ ಮೌಲ್ಯ ಹೆಚ್ಚಾಗುವ ಹಾಗೆ ಸೇವೆ ಸಲ್ಲಿಸುವುದು ಪ್ರಶಸ್ತಿ ಪಡೆದುಕೊಂಡವರ ಪರಮ ಕರ್ತವ್ಯವಾಗಿರಬೇಕು ಎಂದು ದೊಡ್ಡ ಬಳ್ಳಾಪುರ ವಾಲ್ಮೀಕಿ ಮಠದ ಬ್ರಹ್ಮಾನಂದ ಸ್ವಾಮೀಜಿ ತಿಳಿಸಿದರು.

ಹೈದರಾಬಾದ್‌ನ ಅಕ್ಷಯ ಪ್ರಾರ್ಥನ ಫೌಂಡೇಶನ್ ಸಂಸ್ಥೆ ಬೆಂಗಳೂರಿನ ಗಾಂಧಿನಗರದ ಬಾಪು ಸಭಾಂಗಣದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಹಮ್ಮಿಕೊಂಡಿದ್ದ ಭಾರತ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು. ವ್ಯಕ್ತಿತ್ವ, ಸೇವೆ, ತ್ಯಾಗ, ಹೋರಾಟದಿಂದ ಮಾತ್ರ ಪ್ರಶಸ್ತಿಗಳು ಸಿಗುವಂತಾಗಬೇಕು. ಅರ್ಹತೆ ಇದ್ದವರಿಗೆ ಪ್ರಶಸ್ತಿ ದೊರೆತಾಗ ಅವರ ಜವಾಬ್ದಾರಿ ಹೆಚ್ಚಾಗಿ ಮತ್ತಷ್ಟು ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಪ್ರೇರಣೆ ನೀಡಿದಂತಾಗುತ್ತದೆ. ಸಮಾಜ ಸೇವೆ ಮಾಡುವವರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅಕ್ಷಯ ಪ್ರಾರ್ಥನಾ ಫೌಂಡೇಶನ್ ಹಮ್ಮಿಕೊಂಡಿರುವ ಕಾರ್ಯಕ್ರಮ ಶ್ಲಾಘನೀಯ. ಮತ್ತಷ್ಟು ಹೆಚ್ಚಿನ ಮಟ್ಟದಲ್ಲಿ ಪ್ರಶಸ್ತಿ ಕಾರ್ಯಕ್ರಮಗಳು ಜರುಗಲಿ ಎಂದು ಸಲಹೆ ನೀಡಿದರು.

ಮನುಷ್ಯ ಕೇವಲ ಆಸ್ತಿ ಐಶ್ವರ್ಯ ಮಾಡಿದರಷ್ಟೇ ಸಾಲದು. ತಾನು ಮಾಡಿದ ಸಂಪಾದನೆ ಒಂದು ಭಾಗವನ್ನಾದರೂ ಸಮಾಜ ಸೇವೆಗೆ ಮುಡುಪಾಗಿಟ್ಟರಷ್ಟೇ ಆತನ ಜೀವನ ಸಾರ್ಥಕತೆ ಪಡೆದುಕೊಳ್ಳುತ್ತದೆ ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್, ಪ್ರಶಸ್ತಿಯಿಂದ ನನ್ನ ಜವಾಬ್ದಾರಿ ಮತ್ತಷ್ಟು ಹೆಚ್ಚಿದೆ. ಸಾವಿರಕ್ಕೂ ಹೆಚ್ಚು ಅನಾಥ ಶವಗಳನ್ನು ಪೊಲೀಸರ ಸಹಕಾರದೊಂದಿಗೆ ಸಂಸ್ಕಾರ ಮಾಡಿದ್ದೇನೆ. ಯಾವುದೇ ಪ್ರತಿ ಫಲಾಪೇಕ್ಷೆ ಇಲ್ಲದೇ ವೃತ್ತಿಯಲ್ಲಿ ದಿನಸಿ ಅಂಗಡಿ ವ್ಯಾಪಾರಿಯಾಗಿದ್ದರೂ ಶವ ಸಂಸ್ಕಾರ ಕಾಯಕವನ್ನು ಪ್ರವೃತ್ತಿಯಾಗಿ ಸಿಕೊಂಡಿದ್ದೇನೆ. ನನ್ನ ಈ ಕೆಲಸಕ್ಕೆ ಪ್ರೋತ್ಸಾಹ ನೀಡಿದ ಪೊಲೀಸ್ ಇಲಾಖೆಗೆ ಈ ಪ್ರಶಸ್ತಿ ಅರ್ಪಿಸಲು ಬಯಸುತ್ತೇನೆ. ನನ್ನ ಜೀವನದ ಸಂಧ್ಯಾ ಕಾಲದವರೆಗೂ ನನ್ನ ಕಾಯಕ ಮುಂದುವರೆಸಲು ಇಚ್ಛಿಸುತ್ತೇನೆ. ಹಾಗೆಯೇ ಅನಾಥ ಶವ ಸಂಸ್ಕಾರ ಕಾರ್ಯದಲ್ಲಿ ನನಗೆ ಸಹಕಾರ ನೀಡಿ ಕಾರ್ಯ ಸಾಧನೆಗೆ ಸಹಕರಿಸಿದ ಸಹಾಯಕ ಸಿಬ್ಬಂದಿಗಳಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಇದೇ ವೇಳೆ ಅಕ್ಷಯ ಪ್ರಾರ್ಥನಾ ಫೌಂಡೇಷನ್ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿದ 70 ಸಾಧಕರಿಗೆ ಭಾರತ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ರಾಜ್ಯ ಪಪಂ ವಾಲ್ಮೀಕಿ ನೌಕರರ ಒಕ್ಕೂಟದ ಅಧ್ಯಕ್ಷ ಪಿ.ಮೋಹನ್ ಕಿಶೋರ್, ಅಕ್ಷಯ ಫೌಂಡೇಶನ್ ಮುಖ್ಯಸ್ಥೆ ರಮಾದೇವಿ, ರಂಗಭೂಮಿ ಕಲಾವಿದೆ ಶಶಿಕಲಾ ಜಗದೀಶ್, ಮಂಗಳೂರಿನ ರಾಮಭದ್ರಯ್ಯ, ಶೇಖರಪ್ಪ, ಶಿಕ್ಷಕಿ ಶಶಿಕಲಾ ಸೇರಿದಂತೆ ಮಂದಿ ಹಾಜರಿದ್ದರು.

ನಂ.ಗೂಡಲ್ಲಿ ಡಾ.ವಿಷ್ಣುವರ್ಧನ್ ಪುಣ್ಯಸ್ಮರಣೆ



ನಂಜನಗೂಡಲ್ಲಿ ವಿಷ್ಣುವರ್ಧನ್ ಪುಣ್ಯಸ್ಮರಣೆ ನಡೆಯಿತು.


ನಂಜನಗೂಡು, ಡಿ.30– ಡಾ.ವಿಷ್ಣುವರ್ಧನ್ ಅವರು ತಮ್ಮ ನಟನೆ ಚಾತುರ್ಯದ ಮೂಲಕ ಕನ್ನಡ ಸಂಸ್ಕೃತಿಯನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದ ಮಹಾನಟ ಎಂದು ಕನ್ನಡ ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಸಿ.ಚಿಕ್ಕರಂಗ ನಾಯಕ ತಿಳಿಸಿದರು.

ನಗರದ ನೆಹರು ವೃತ್ತದಲ್ಲಿ ಚಾಮಲಾಪುರ ಬೀದಿಯ ಡಾ.ವಿಷ್ಣುವರ್ಧನ್ ಅಭಿಮಾನಿ ಬಳಗ ಆಯೋಜಿಸಿದ್ದ ವಿಷ್ಣುವರ್ಧನ್ ಅವರ 15ನೇ ಪುಣ್ಯಸ್ಮರಣೆಯಲ್ಲಿ ಮಾತನಾಡಿದ ಅವರು, ವಿಷ್ಣುವರ್ಧನ್ ಅವರು ಕನ್ನಡ ಸಂಸ್ಕೃತಿ ಬಿಂಬಿಸುವ ಮತ್ತು ನಾಡಿನ ಇತಿಹಾಸ ಸಾರುವ ಅನೇಕ ಚಲನಚಿತ್ರಗಳಲ್ಲಿ ನಟಿಸುವ ಮೂಲಕ ಕನ್ನಡ ಸಂಸ್ಕೃತಿಯನ್ನು ವಿಶ್ವಮಟ್ಟಕ್ಕೆ ಪರಿಚಯಿಸಿದ ಮಹಾನ್ ನಟ. ಅಲ್ಲದೇ ಸಮಾಜಕ್ಕೆ ಸಂದೇಶ ಸಾರುವ ಅವರ ಚಲನಚಿತ್ರಗಳು ಇಂದಿನ ಯುವಕರಿಗೆ ಪ್ರೇರಣೆ ಎಂದರು.

ಈ ವೇಳೆ ಮಹೇಶ ನಾಯಕ, ಮಹದೇವ ನಾಯಕ, ಮಹೇಶ, ನಂಜುಂಡಸ್ವಾಮಿ, ಕುಮಾರ, ರಮೇಶ, ಗಜೇಂದ್ರ, ಸುನಿಲ್, ದರ್ಶನ್, ಸೋಮು ಇದ್ದರು.

ಕೆ.ಬೆಳತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

ಸತೀಶ್‌ಗೌಡ ಅಧ್ಯಕ್ಷ, ನಾಗರಾಜು ಉಪಾಧ್ಯಕ್ಷ



ನೂತನ ಅಧ್ಯಕ್ಷ ಸತೀಶ್‌ಗೌಡ ಅವರನ್ನು ಕಾಂಗ್ರೆಸ್ ಮುಖಂಡರು ಸನ್ಮಾನಿಸಿದರು.

ಹೆಚ್.ಡಿ.ಕೋಟೆ, ಡಿ.30– ತಾಲೂಕಿನ ಕೆ.ಬೆಳತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕಾಂಗ್ರೆಸ್ ಮುಖಂಡ, ಜಯಕರ್ನಾಟಕ ಸಂಘಟನೆ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ಉಪಾಧ್ಯಕ್ಷರಾಗಿ ನಾಗರಾಜು ಆಯ್ಕೆಯಾಗಿದ್ದಾರೆ. ಆ ಮೂಲಕ ಕೆ.ಬೆಳತ್ತೂರು ಪಿಎಸಿಎಸ್ ಅಧಿಕಾರ ಕಾಂಗ್ರೆಸ್ ಪಾಲಾಗಿದೆ.


ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸತೀಶ್ ಗೌಡ, ಪದ್ಮರಾಜು ಹಾಗೂ ಸುಮಾ ಅವರು ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ನಾಗರಾಜು ಮತ್ತು ಪುಟ್ಟರಾಜು ನಾಮಪತ್ರ ಸಲ್ಲಿಸಿದ್ದರು. ಆದರೆ ಪದ್ಮರಾಜು ಅವರು ಅಧ್ಯಕ್ಷ ಸ್ಥಾನಕ್ಕೆ ಸಲ್ಲಿಸಿದ್ದ ನಾಮಪತ್ರ ವಾಪಸ್ ಪಡೆದರು. ನಂತರ ನಡೆದ ಚುನಾವಣೆಯಲ್ಲಿ ಸತೀಶ್‌ಗೌಡ 8 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೇ, ಸುಮಾ 5 ಮತಗಳನ್ನು ಪಡೆದು ಪರಾಭವಗೊಂಡರು. ಮತ್ತೊಂದೆಡೆ ನಾಗರಾಜು ಅವರು 8 ಮತಗಳನ್ನು ಪಡೆದು ಉಪಾಧ್ಯಕ್ಷರಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿ ಪುಟ್ಟರಾಜು 5 ಮತಗಳನ್ನು ಪಡೆದು ಪರಾಭವಗೊಂಡರು. ಈ ವೇಳೆ ಚುನಾವಣಾಧಿಕಾರಿ ರೇಣುಕಾ ಅವರು ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯನ್ನು ಘೋಷಿಸುತ್ತಿದ್ದಂತೆ ಅಧ್ಯಕ್ಷ ಸತೀಶ್‌ಗೌಡರ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಹಾಗೂ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ನೂತನ ಅಧ್ಯಕ್ಷ ಸತೀಶ್‌ಗೌಡ ಮಾತನಾಡಿ, ಕೆ.ಬೆಳತ್ತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಭಿವೃದ್ಧಿಗೆ ಶ್ರಮಿಸಲಾಗುವುದು. ಅಲ್ಲದೇ ರೈತರಿಗೆ ಸರ್ಕಾರದಿಂದ ಸಿಗುವ ಸಾಲ ಸೌಲಭ್ಯ ಸೇರಿದಂತೆ ಇನ್ನಿತರ ಸವಲತ್ತುಗಳನ್ನು ಸಮರ್ಪಕವಾಗಿ ತಲುಪಿಸಲಾಗುವುದು. ಶಾಸಕ ಅನಿಲ್ ಚಿಕ್ಕಮಾದು ಅವರ ಸಹಕಾರದೊಂದಿಗೆ ಸರ್ಕಾರದಿಂದ ಹೆಚ್ಚಿನ ಸವಲತ್ತುಗಳನ್ನು ತಂದು ಸಹಕಾರ ಸಂಘ, ರೈತರ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಚುನಾವಣೆಯಲ್ಲಿ ನಿರ್ದೇಶಕರಾದ ಪದ್ಮರಾಜು, ಬೆಟ್ಟೇಗೌಡ, ಕೆಂಪಮ್ಮ, ವಿನೋದ, ಮಹದೇವು, ದಿವಾಕರ್, ಸುವರ್ಣಮ್ಮ, ಡಿಸಿಸಿ ಬ್ಯಾಂಕ್ ಸೂಪರ್ ವೈಸರ್ ಚಂದ್ರು ಮುಖಂಡರಾದ ಮಹಾಲಕ್ಷ್ಮಿ ಸ್ವೀಟ್ಸ್ ಮಹದೇವು, ನಾಗನಹಳ್ಳಿ ಪ್ರದೀಪ, ಸ್ವಾಮಿ, ಕ್ಯಾತನಹಳ್ಳಿ ನಾಗರಾಜು, ರಾಜು ವಿಶ್ವಕರ್ಮ, ಗಣೇಶಾಚಾರ್, ರಾಜನಾಯಕ, ಪರಶಿವಮೂರ್ತಿ, ಶರತ್, ಹೋಂಡಾ ನಯಾಜ್, ಹೀರೋ ಜಯರಾಮ್, ಸುರೇಶ್, ಸೋಮೇಗೌಡ ಸೇರಿದಂತೆ ಇನ್ನಿತರರಿದ್ದರು.

ವ್ಯಾಮೋಹ ತ್ಯಜಿಸಿದರೆ ಮೋಕ್ಷ ಪ್ರಾಪ್ತಿ

ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಯೋಗ ಜೀವನ ಕೃತಿಯನ್ನು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಿಡುಗಡೆಗೊಳಿಸಿದರು.

ನಂಜನಗೂಡು, ಡಿ.30– ಹೊರಗಿನ ಆಕರ್ಷಣೆಗಳಿಂದ ಹೊರಬಂದು ವ್ಯಾಮೋಹ ತ್ಯಜಿಸಿದರೆ ಮೋಕ್ಷ ಪ್ರಾಪ್ತಿಯಾಗುತ್ತದೆ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯ ಯೋಗ ಮಹಾಮನೆಯ 16ನೇ ವಾರ್ಷಿಕೋತ್ಸವ ಅಂಗವಾಗಿ ಪ್ರಕಾಶ್ ಜಿ.ಉಡಿಗಾಲ ಅವರು ರಚಿಸಿರುವ ಯೋಗ ಜೀವನ ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಂಸಾರವೆಂದರೆ ಕೇವಲ ಸತಿ–ಪತಿ ಸಂಬಂಧವಷ್ಟೇ ಅಲ್ಲ. ನಮ್ಮ ನಡುವೆ ಇರುವವರ ಜೊತೆ ಹೇಗೆ ಜೀವಿಸುತ್ತಿದ್ದೇವೆ ಎಂಬದರ ಮೇಲೆ ನಮ್ಮ ಜೀವನದ ಸಾರ್ಥಕತೆ ಅಡಗಿರುತ್ತದೆ. ಹೊರಗಿನ ಆಕರ್ಷಣೆಗಳಿಂದ ಹೊರ ಬರಬೇಕು. ಸುಖ, ಶಾಂತಿ, ನೆಮ್ಮದಿಗೆ ಧಕ್ಕೆ ತರುವಂತಹ ಬೇಡವಾದುದ್ದನ್ನು ತ್ಯಜಿಸಬೇಕು. ಜನ ಮೆಚ್ಚುವ ಹಾಗೆ ನಡೆದುಕೊಳ್ಳುವ ಬದಲು ಮನ ಮೆಚ್ಚುವ ಹಾಗೇ ಬದುಕಬೇಕು. ಅಗತ್ಯವಿರುವುದನ್ನು ಮಾತ್ರ ನಾವು ಸ್ವೀಕರಿಸಬೇಕು. ಆಗ ಮಾತ್ರ ನಾವು ಧ್ಯಾನ ಸ್ಥಿತಿಯತ್ತ ಸಾಗಿ ಮೋಕ್ಷ ಹೊಂದಲು ಸಾಧ್ಯ ಎಂದರು.

ಉತ್ತಮ ಸಮಾಜ ನಿರ್ಮಾಣಕ್ಕಾಗಿ ಕಾಲ ಕಾಲಕ್ಕೆ ಸಂತರು, ಶರಣರು, ದಾರ್ಶನಿಕರು ಜನರನ್ನು ತಿದ್ದುತ್ತಾ, ಎಚ್ಚರಿಸುತ್ತಾ ಬಂದಿದ್ದಾರೆ. ಅಂತಹ ಮಹಾತ್ಮರ ನುಡಿಗಳನ್ನೇ ಅತ್ಯಂತ ಸರಳವಾಗಿ ಜನರಿಗೆ ಮನಮುಟ್ಟುವ ಹಾಗೇ ಪ್ರಕಾಶ್ ಜಿ.ಉಡಿಗಾಲ ಅವರು ಯೋಗ ಜೀವನ ಕೃತಿಯಲ್ಲಿ ವಿವರಿಸಿದ್ದಾರೆ. ಅವರ ಲೇಖನಗಳಲ್ಲಿ ಜೀವನ ಸತ್ವ ಅಡಗಿದ್ದು, ಪ್ರತಿಯೊಬ್ಬರ ಬದುಕನ್ನು ಉತ್ತಮ ರೀತಿ ರೂಪಿಸಿಕೊಳ್ಳಲು ಈ ಕೃತಿ ಸಹಕಾರಿಯಾಗಲಿದೆ. ಪ್ರತಿಯೊಬ್ಬರೂ ಈ ಪುಸ್ತಕವನ್ನು ಓದುವಂತಾದರೆ ಅವರ ಆಶಯ ಸಾರ್ಥಕವಾಗುತ್ತದೆ ಎಂದು ಹೇಳಿದರು. ನಂಜನಗೂಡನ್ನು ಯೋಗ ನಗರಿಯನ್ನಾಗಿ ಮಾಡುವ ಸಂಕಲ್ಪ ತೊಟ್ಟಿರುವ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯ ನಿಸ್ವಾರ್ಥ ಸೇವೆ ಹೀಗೆ ನಿರಂತರವಾಗಿ ಸಾಗಲಿ. ಪ್ರಯತ್ನವೇ ದೇವರು ಎನ್ನುತ್ತಾರೆ. ನಿರಂತರ ಪ್ರಯತ್ನದ ಫಲವಾಗಿ ಸಮಿತಿಯ ಸಂಕಲ್ಪ ಸಾಕಾರಗೊಳ್ಳಲಿ ಎಂದು ಆಶೀರ್ವದಿಸಿದರು.

ಚಾಮರಾಜನಗರದ ದೀನಬಂಧು ಸಂಸ್ಥೆ ಕಾರ್ಯದರ್ಶಿ ಪ್ರೊ.ಜಿ.ಎಸ್.ಜಯದೇವ ಮಾತನಾಡಿ, ಭಾರತೀಯ ಯೋಗಕ್ಕೆ ಜಾಗತಿಕ ಮನ್ನಣೆ ದೊರೆತಿದೆ. ಅಮೇರಿಕಾದಲ್ಲಿ ಯೋಗಕ್ಕಾಗಿ ವಾರ್ಷಿಕ 27 ಬಿಲಿಯನ್ ಡಾಲರ್ ವಹಿವಾಟು ನಡೆಯುತ್ತಿದೆ. ಹೊರ ದೇಶಗಳಲ್ಲಿ ಯೋಗ ಆರ್ಥಿಕ ಉದ್ಯಮವಾಗಿ ಬೆಳೆಯುತ್ತಿದೆ ಅಂತಹ ಯೋಗವನ್ನು ಉಚಿತವಾಗಿ ಜನರಿಗೆ ಮುಟ್ಟಿಸುವ ಕಾರ್ಯದಲ್ಲಿ ಸಮಿತಿಯು 16 ವರ್ಷಗಳಿಂದ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು.

ಯೋಗ ಜೀವನ ಕೃತಿ ಕುರಿತು ಪತ್ರಕರ್ತ ಪ್ರತಾಪ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕುಮಾರಿ ತನ್ಮಯಿ ಏಕಾತ್ಮತಾ ಸ್ತೋತ್ರವನ್ನು ಸಾಮೂಹಿಕವಾಗಿ ಪಠಿಸಿದರು. ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ, ಕಾರ್ಯದರ್ಶಿ ಎನ್.ಆರ್.ಗಣೇಶ್ ಮೂರ್ತಿ, ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ, ನಂಜನಗೂಡು ಯೋಗ ಫೌಂಡೇಶನ್ ಅಧ್ಯಕ್ಷ ಪ್ರಕಾಶ್, ಗೌರವಾಧ್ಯಕ್ಷ ರಾಜು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮಂಗಳವಾರ 31 ಡಿಸೆಂಬರ್ 2024

ಮುಂದಿನ ವಿಧಾನಸಭಾ ಚುನಾವಣೆ ವೇಳೆಗೆ ಕ್ಷೇತ್ರ ಪುನರ್ ವಿಂಗಡಣೆ

ಪರಿಶಿಷ್ಟ ಜಾತಿ/ ಪಂಗಡಕ್ಕೆ ಮತ್ತಷ್ಟು ಮೀಸಲು ಕ್ಷೇತ್ರ

ಬಿಜೆಪಿ ಮುಖಂಡ ಅಪ್ಪಣ್ಣ ವಿಶ್ವಾಸ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ 'ಮಹರ್ಷಿ ವಾಲ್ಮೀಕಿ ಪ್ರಬುದ್ಧ ವೇದಿಕೆ' ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು.

ಮೈಸೂರು,ಡಿ.30(ಎಂಟಿವೈ)– ಮುಂದಿನ ವಿಧಾನಸಭಾ ಚುನಾವಣೆ ವೇಳೆಗೆ ರಾಜ್ಯದಲ್ಲಿ ಕ್ಷೇತ್ರ ಪುನರ್ ವಿಂಗಡಣೆ ನಡೆಯಲಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಇನ್ನಷ್ಟು ಮೀಸಲು ಕ್ಷೇತ್ರಗಳು ಲಭಿಸುತ್ತವೆ. ವಾಲ್ಮೀಕಿ ಸಮುದಾಯ ಒಗ್ಗಟ್ಟು ಕಾಯ್ದುಕೊಂಡು ಸೂಕ್ತ ರಾಜಕೀಯ ಸ್ಥಾನಮಾನ ಪಡೆದುಕೊಳ್ಳಬೇಕು ಎಂದು ಬಿಜೆಪಿ ಮುಖಂಡ ಅಪ್ಪಣ್ಣ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ 'ಮಹರ್ಷಿ ವಾಲ್ಮೀಕಿ ಪ್ರಬುದ್ಧ ವೇದಿಕೆ' ವತಿಯಿಂದ ಆಯೋಜಿಸಿದ್ದ ವಿವಿಧ ಕ್ಷೇತ್ರದಲ್ಲಿ 'ಸಾಧನೆ ಮಾಡಿದವರಿಗೆ ಸನ್ಮಾನ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾಯಕ ಸಮುದಾಯ ಒಗ್ಗಟ್ಟು ಕಾಪಾಡಿಕೊಂಡರೆ ಮತ್ತು ರಾಜಕೀಯ ಸ್ಥಾನಮಾನವನ್ನು ಪಡೆದುಕೊಳ್ಳಲು ಸಾಧ್ಯ. ರಾಜ್ಯದಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಿಂದಾಗಿ 2028ರಲ್ಲಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು ವಿಧಾನಸಭಾ ಕ್ಷೇತ್ರ 300 ಗಡಿ ತಲುಪಲಿದೆ. ಅದರಲ್ಲಿ ಎಸ್‌ಸಿ–ಎಸ್ಟಿ ಸಮುದಾಯಕ್ಕೆ ಇನ್ನಷ್ಟು ಮೀಸಲು ಕ್ಷೇತ್ರ ಲಭಿಸುತ್ತದೆ. ನಾಯಕ ಸಮುದಾಯದ ಪುರುಷ, ಮಹಿಳೆಯರಿಗೆ ಮೀಸಲಾತಿ ಬರುತ್ತದೆ. ನಾವೆಲ್ಲರೂ ಸಂಘಟಿತರಾಗಿ ಶಿಕ್ಷಣ, ಉದ್ಯೋಗ, ರಾಜಕೀಯ ಕ್ಷೇತ್ರದಲ್ಲಿ ನಾವು ಗುರುತಿಸಿಕೊಳ್ಳಬೇಕು. ನಾಯಕ ಸಮುದಾಯದವರು ಬಸವಣ್ಣ, ನಾಲ್ವಡಿ ಕೃಷ್ಣರಾಜ ಒಡೆಯರ್, ಡಾ.ಬಿ.ಆರ್.ಅಂಬೇಡ್ಕರ್, ಮಹರ್ಷಿ ವಾಲ್ಮೀಕಿಯವರನ್ನು ದಿನನಿತ್ಯ ಸ್ಮರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೂರು ದಶಕದ ಹಿಂದೆ ವಾಲ್ಮೀಕಿ ಸಮುದಾಯದಲ್ಲಿ ಸ್ನಾತಕೋತ್ತರ ಪದವಿ ಪಡೆದವರು ಬೆರಳೆಣಿಕೆಯಷ್ಟಿದ್ದರು. ಈಗ ವಿದ್ಯಾವಂತರ ಸಂಖ್ಯೆ ಹೆಚ್ಚಿದ್ದರೂ ಆಗಿನಂತೆ ಒಗ್ಗಟ್ಟಿಲ್ಲ. ರಾಜಕೀಯ ಸ್ಥಾನಮಾನ ಸಿಗುತ್ತಿಲ್ಲ. ಸಮಾಜವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಬೆಳೆಯಬೇಕೆಂದರೆ ರಾಜಕೀಯವಾಗಿ ಹಕ್ಕನ್ನು ಚಲಾಯಿಸಬೇಕು. ಉಳಿದ ಸಮುದಾಯಗಳು ಒಗ್ಗಟ್ಟನ್ನು ಸಾಧಿಸಿವೆ. ನಮ್ಮ ಸಮುದಾಯದಲ್ಲಿ ದಕ್ಷಿಣ ಕರ್ನಾಟಕದವರಿಗೆ ಹೆಚ್ಚು ಸ್ಥಾನಮಾನ ಸಿಗುತ್ತಿಲ್ಲ. ದೇಶದಲ್ಲಿ ಎಸ್‌ಟಿ ಸಮುದಾಯ ಹೆಚ್ಚಿದ್ದರೂ ಚದುರಿ ಹೋಗಿದ್ದೇವೆ ಎಂದು ವಿಷಾದಿಸಿದರು.

ಪಂಜಾಬ್‌ನ ಅಮೃತಸರದಲ್ಲಿ ವಾಲ್ಮೀಕಿ ಮಹರ್ಷಿಗಳ ಬೃಹತ್ ಪ್ರತಿಮೆಯಿದೆ. ಉತ್ತರಪ್ರದೇಶ, ಬಿಹಾರದಲ್ಲಿ ಪರಿಶಿಷ್ಟ ಜಾತಿಗೆ ಸೇರುತ್ತೇವೆ. ರಾಜಸ್ಥಾನ, ಮಹಾರಾಷ್ಟ್ರ, ಗುಜರಾತಿನಲ್ಲಿ ಎಸ್‌ಟಿ ಗುಂಪಿಗೆ ಸೇರುತ್ತೇವೆ. ಸಮುದಾಯ ಒಗ್ಗಟ್ಟಾಗಿದ್ದರೆ ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಸಮಾಜದ ಕಾರ್ಯ ನಡೆಯುತ್ತದೆ ಇಲ್ಲದಿದ್ದರೆ ಅಭಿವೃದ್ಧಿ ಅಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಕೃತಿ ಚಿಂತಕ ಡಾ.ಪ್ರಶಾಂತ ನಾಯಕ, ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಮುಖಂಡರಾದ ಜೆ.ಎಂ.ಜವರನಾಯಕ, ಎಂ.ರಾಮಚಂದ್ರ, ನಿಂಗರಾಜು ಎನ್. ಬೆಳ್ಳೂರು, ವೆಂಕಟೇಶ್ ಕ್ಯಾತಮಾರನಹಳ್ಳಿ, ಕೆಂಪನಾಯಕ ಹಿನಕಲ್, ವೆಂಕಯ್ಯ, ಡಾ.ನಂಜುಂಡಸ್ವಾಮಿ ಹರದನಹಳ್ಳಿ, ಸಿದ್ದರಾಜು ಟಿ.ಕಾಟೂರು, ಸಾಹುಕಾರ್ ಹುಂಡಿ ಮಹಾದೇವ, ಟೆನ್ನಿಸ್ ಗೋಪಿ, ವೆಂಕಟಯ್ಯ ಚಿಕ್ಕಸ್ವಾಮಿ ಜಗದೀಶ್ ಮೂರ್ತಿ, ಬ್ಯಾಂಕ್ ಸಿದ್ದರಾಜು, ಉಪನ್ಯಾಸಕ ಸಿದ್ದನಾಯಕ ಮುಂತಾದವರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪುಷ್ಪ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿಜಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ಔಟ್ ಆಫ್ ಸಿಲಬಸ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಮ್ಯಾಕ್ಸ್ (ಕ): ಬೆ.9ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12ಕ್ಕೆ, ಸಂ.5.10ಕ್ಕೆ, ರಾ.7.40ಕ್ಕೆ, ಯುಐ (2024) (ಕ): ಮ.2.30ಕ್ಕೆ, ಬರೋಜ್(3ಡಿ) (ಮ): ರಾ.10.10ಕ್ಕೆ.
ಸ್ಕ್ರೀನ್ 2	ಯುಐ (2024) (ಕ): ಬೆ.9.40ಕ್ಕೆ, ಸಂ.4.25ಕ್ಕೆ, ಪುಷ್ಪಾ 2 (ಕ): ಮ.12.30ಕ್ಕೆ, ಬೇಬಿ ಜಾನ್ (ಹಿಂ): ರಾ.7.10ಕ್ಕೆ, ಮಾರ್ಕೊ (ಮ): ರಾ.10.30ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.50ಕ್ಕೆ, ಬೇಬಿ ಜಾನ್ (ಹಿಂ): ಮ.12.55ಕ್ಕೆ, ಸಂ.4.15ಕ್ಕೆ, ಯುಐ (2024) (ಕ): ರಾ.7.35ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.15ಕ್ಕೆ, ಮ.1.10ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.10ಕ್ಕೆ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ತಲುಪಿದ ಚೀನಾ ದೌರ್ಜನ್ಯ ಖಂಡಿಸುವ ಬೈಕ್ ರ್‍ಯಾಲಿ




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ದೇಶ ಸಂಚಾರ ಮಾಡುತ್ತಿರುವ ಟಿಬೆಟಿಯನ್ ಬೈಕ್ ಸವಾರರ ತಂಡದ ಸದಸ್ಯರು ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು,ಡಿ.30(ಎಂಟಿವೈ)– ಟಿಬೆಟಿಯನ್ ಪ್ರಾಂತ್ಯದಲ್ಲಿ ಚೀನಾ ನಡೆಸುತ್ತಿರುವ ದೌರ್ಜನ್ಯ ವಿರೋಧಿಸುವುದರೊಂದಿಗೆ ವಿಶ್ವದ ಗಮನ ಸೆಳೆಯುವ ನಿಟ್ಟಿನಲ್ಲಿ ಟಿಬೆಟಿಯನ್ ಯುವಕರು ಹಮ್ಮಿಕೊಂಡಿರುವ ಬೈಕ್ ರ್‍ಯಾಲಿ ಇಂದು ನಗರಕ್ಕೆ ಆಗಮಿಸಿದ್ದು, ಈ ವೇಳೆ ಜನಪ್ರತಿನಿಧಿಗಳನ್ನು ಭೇಟಿ ಮಾಡಿ, ಟಿಬೆಟಿಯನ್ನರ ಸಮಸ್ಯೆ ಬಗ್ಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ಟಿಬೆಟಿಯನ್ ಯುವ ಕಾಂಗ್ರೆಸ್ ಅಧ್ಯಕ್ಷ ಗೌಪೊ ಧುಂಡೆಪ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ನ.22 ರಂದು ಈ ಬೈಕ್ ರ್‍ಯಾಲಿ ಅರುಣಾಚಲ ಪ್ರದೇಶದ ಭಾರತ–ಟಿಬೆಟಿಯನ್ ಗಡಿಯಲ್ಲಿನ ಬುಮ್ಲಾ ಪಾಸ್ ಬಳಿಯಿಂದ ಆರಂಭವಾಗಿ ಇದುವರೆಗೆ 20 ರಾಜ್ಯಗಳಲ್ಲಿ ಸಂಚರಿಸಿದೆ. ಈಗ ಮೈಸೂರು ತಲುಪಿದೆ ಇದುವರೆಗೆ ಹಲವಾರು ಸಂಸದರು, ಸ್ಥಳೀಯ ಸಿಎಂಗಳು ಹಾಗೂ ರಾಜ್ಯಪಾಲರನ್ನು ಭೇಟಿ ಮಾಡಿ ಟಿಬೆಟ್ ಸ್ವತಂತ್ರಗೊಳಿಸುವ ಬಗ್ಗೆ ಬೆಂಬಲ ಸೂಚಿಸುವಂತೆ ಮನವಿ ಮಾಡಿದೆ. ಈ ತಂಡದಲ್ಲಿ 12 ಮಂದಿ ಬೈಕರ್‌ಗಳಿದ್ದಾರೆ. ಈ ರ್‍ಯಾಲಿ ಹಾದುಹೋದ ಕಡೆಯಲ್ಲೆಲ್ಲ ಉತ್ತಮ ಸ್ಪಂದನೆ ದೊರೆತಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಟಿಬೆಟಿಯನ್ ಮುಖಂಡರಾದ ತ್ರೆರಿಂಗ್ ಚಾಪಲ್ ಹಾಗೂ ಇನ್ನಿತರರು ಇದ್ದರು.

ಕ್ಯಾಲೆಂಡರ್ ಬಿಡುಗಡೆ; ಸಾಧಕರಿಗೆ ಪ್ರಶಸ್ತಿ ಪ್ರದಾನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರಿನ ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ಪ್ರಕಟಿಸಿರುವ ನೂತನ ವರ್ಷ ಕ್ಯಾಲೆಂಡರ್ ಅನ್ನು ಮೈಸೂರು ಯೋಗ ಒಕ್ಕೂಟದ ಗೌರವಾಧ್ಯಕ್ಷ ಡಾ.ಎ.ಎಸ್.ಚಂದ್ರಶೇಖರ್ ಬಿಡುಗಡೆ ಮಾಡಿದರು.

ಮೈಸೂರು,ಡಿ.30(ಎಂಟಿವೈ)– ಮೈಸೂರಿನ ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಹಾಗೂ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆಯಿತು.

ಮೈಸೂರು ಯೋಗ ಒಕ್ಕೂಟದ ಗೌರವಾಧ್ಯಕ್ಷ ಡಾ.ಎ.ಎಸ್.ಚಂದ್ರಶೇಖರ್ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ಯೋಗದಿಂದ ಜನರು ತಮ್ಮ ಆರೋಗ್ಯ ಕಾಪಾಡಿಕೊಳ್ಳಬಹುದು. ಯೋಗದ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕಾಗಿದೆ. ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್, ಜನರಲ್ಲಿ ಯೋಗದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತಿರುವುದು ಶ್ಲಾಘನೀಯ. ಸಂಸ್ಥೆ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಪಂಚಾಂಗದಂತೆ ಜನರಿಗೆ ಮಾಹಿತಿ ಒದಗಿಸುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರಿಗೆ ಕನ್ನಡ ಸಾಹಿತ್ಯ ಚೈತನ್ಯ ಪ್ರಶಸ್ತಿ, ಯೋಗ ಒಕ್ಕೂಟದ ಮಾಜಿ ಅಧ್ಯಕ್ಷ ಎಸ್.ವಿ.ವೆಂಕಟೇಶಯ್ಯ ಹಾಗೂ ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ.ದೇವರಾಜ್ ಅವರಿಗೆ ಯೋಗ ಚೈತನ್ಯ ಪ್ರಶಸ್ತಿ, ನೇಗಿಲಯೋಗಿ ಸಂಸ್ಥೆಯ ಅಧ್ಯಕ್ಷ ಡಿ.ರವಿಕುಮಾರ್ ಅವರಿಗೆ ಶಿಕ್ಷಣ ಚೈತನ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಸಮಾಜ ಸೇವಕ ಕೆ ರಘುರಾಂ ವಾಜಪೇಯಿ ವಹಿಸಿದ್ದರು. ಮೈಸೂರು ಯೋಗ ಒಕ್ಕೂಟದ ಕಾರ್ಯಾಧ್ಯಕ್ಷ ಟಿ. ಜಲೇಂದ್ರಕುಮಾರ್, ಹಿರಿಯ ಉಪಾಧ್ಯಕ್ಷ ಎಂ.ಎಸ್. ರಮೇಶ್ ಕುಮಾರ್, ಕಾರ್ಯಾಧ್ಯಕ್ಷ ಡಾ.ಬಿ.ಪಿ. ಮೂರ್ತಿ, ಹಿಮಾಲಯ ಪ್ರತಿಷ್ಠಾನದ ಸಂಸ್ಥಾಪಕ ಎನ್. ಅನಂತ ಪಾಲ್ಗೊಂಡಿದ್ದರು.

ಜೆಕೆ ಟೈರ್ಸ್ ವಿಕ್ರಾಂತ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದಿಂದ ಕುವೆಂಪು ಜಯಂತಿ



ಜೆ.ಕೆ. ಟೈರ್ಸ್ ವಿಕ್ರಾಂತ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜಯಂತಿ ಹಾಗೂ ಸಂಘದ ವಾರ್ಷಿಕೋತ್ಸವವನ್ನು ಗಣ್ಯರು ದೀಪ ಬೆಳಗಿಸಿ, ಉದ್ಘಾಟಿಸಿದರು.


ಮೈಸೂರು, ಡಿ.30(ಎಸ್‌ಬಿಡಿ)– ಮೈಸೂರಿನ ಹೆಬ್ಬಾಳದಲ್ಲಿರುವ ಜೆ.ಕೆ. ಟೈರ್ಸ್ ವಿಕ್ರಾಂತ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ರಾಷ್ಟ್ರಕವಿ ಕುವೆಂಪು ಜಯಂತಿ ಹಾಗೂ ಸಂಘದ 30ನೇ ವಾರ್ಷಿಕೋತ್ಸವ ಆಚರಿಸಲಾಯಿತು.

ಸಮಾರಂಭವನ್ನು ದೀಪ ಬೆಳಗಿಸುವ ಮೂಲಕ ಗಣ್ಯರು ಉದ್ಘಾಟಿಸಿದರು. ಇದೇ ವೇಳೆ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿದರು. ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ), ಮಂಡ್ಯದ 5 ರೂಪಾಯಿ ಡಾಕ್ಟರ್ ಖ್ಯಾತಿಯ ಶಂಕರೇಗೌಡರು ಹಾಗೂ ನಿವೃತ್ತ ನೌಕರರನ್ನು ಇದೇ ವೇಳೆ ಅಭಿನಂದಿಸಲಾಯಿತು. ಅಲ್ಲದೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳನ್ನು ಪುರಸ್ಕರಿಸಲಾಯಿತು.

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರು ಕಾರ್ಯಕ್ರಮದಲ್ಲಿ ಮಾತನಾಡಿ, ಸಂಘಟನೆಯೊಂದಿಗೆ ಸಾಮಾಜಿಕ ಕಾರ್ಯಗಳನ್ನೂ ಮುಂದುವರೆಸಿಕೊಂಡು ಹೋಗುವಂತೆ ಸಲಹೆ ನೀಡಿದರು. ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಸಂಸದ ಸಿ.ಎಸ್.ಪುಟ್ಟರಾಜು, ವಿಧಾನಪರಿಷತ್ ಸದಸ್ಯ ವಿವೇಕಾನಂದ, ಕೆ.ಆರ್.ಪೇಟೆ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕ ಎಲ್.ನಾಗೇಂದ್ರ, ನಗರಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಕಾಂಗ್ರೆಸ್ ಮುಖಂಡ ಚೇತನ್ ಸೇರಿದಂತೆ ಹಲವು ಗಣ್ಯರು, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸರ್ಕಾರಿ ಜಾಗದಲ್ಲಿ ಅನಧಿಕೃತ ನಿರ್ಮಾಣ

ಕಾಮಗಾರಿ ಸ್ಥಗಿತಗೊಳಿಸುವಂತೆ ವಿಜಯನಗರ ಠಾಣೆಗೆ ತಹಸೀಲ್ದಾರ್ ಪತ್ರ



ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವುದು.

ಮೈಸೂರು, ಡಿ. 30(ಆರ್‌ಕೆ)– ಮೈಸೂರಿನ ಹೆಬ್ಬಾಳಿನಲ್ಲಿರುವ ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ಬೃಹತ್ ಕಟ್ಟಡಗಳು ತಲೆ ಎತ್ತುತ್ತಿವೆ.

ಮೈಸೂರು ತಾಲೂಕು, ಕಸಬಾ ಹೋಬಳಿ, ಹೆಬ್ಬಾಳು ಗ್ರಾಮದ ಸರ್ವೆ ನಂಬರ್ 221 (ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಬಳಿ)ರ 1.25 ಎಕರೆ ಸರ್ಕಾರಿ ಜಾಗದಲ್ಲಿ ಭೂಗಳ್ಳರು ಅಕ್ರಮವಾಗಿ ಕಟ್ಟಡ ನಿರ್ಮಿಸಿ, ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬ ವಿಷಯ ತಿಳಿದ ಕಂದಾಯ ನಿರೀಕ್ಷಕರು ಇಂದು ಬೆಳಗ್ಗೆ ಸ್ಥಳಕ್ಕೆ ತೆರಳಿ ಕಾಮಗಾರಿ ಸ್ಥಗಿತಗೊಳಿಸಲು ಯತ್ನಿಸಿದರಾದರೂ ಪ್ರಯೋಜನವಾಗಲಿಲ್ಲ.

ಈ ಸಂಬಂಧ ಮೈಸೂರು ತಹಸೀಲ್ದಾರ್ ಮಹೇಶ್ ಅವರು ವಿಜಯನಗರ ಠಾಣೆ ಇನ್‌ಸ್ಪೆಕ್ಟರ್‌ಗೆ ಇಂದು ಪತ್ರ ಬರೆದಿದ್ದು, ಸದರಿ ಸರ್ವೆ ನಂಬರ್ ಜಮೀನನ್ನು ವಿಶೇಷ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ ಯುಎಲ್‌ಎ 1135/1976–77 ದಿನಾಂಕ 5–7–1985ರಂತೆ ಹೆಚ್ಚುವರಿ ಸ್ವಾರಾಸ್ತಿ ಎಂದು ಘೋಷಿಸಿ ಆರ್‌ಟಿಸಿಯಲ್ಲಿ 'ಸರ್ಕಾರ' ಎಂಬುದಾಗಿ ನಮೂದಾಗಿದೆ ಎಂದು ತಿಳಿಸಿದ್ದಾರೆ.

ಸದರಿ ಜಮೀನಿನ ಸಂಬಂಧ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟೀಷನ್ ಪ್ರಕರಣ ದಾಖಲಾಗಿದ್ದು, ಅದರಂತೆ ಸಣ್ಣೇಗೌಡ ಎಂಬುವರ ಹೆಸರಿಗೆ ಖಾತೆ ದಾಖಲು ಮಾಡಲು 2024ರ ಮಾರ್ಚ್ 7ರಂದು ಆದೇಶಿಸಲಾಗಿದೆ ಈ ಮಧ್ಯೆ ಸದರಿ ಜಮೀನಿನ ಆರ್‌ಟಿಸಿಯಲ್ಲಿ 'ಸರ್ಕಾರ' ನಮೂದಿಸಿರುವುದರಿಂದ ಜಮೀನಿನಲ್ಲಿ ಭೂಗಳ್ಳರು ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡಿ ಮಾರಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ಕಟ್ಟಡ ಕಾಮಗಾರಿ ಸ್ಥಗಿತಗೊಳಿಸುವಂತೆ ಮಹೇಶ ಪತ್ರದಲ್ಲಿ ಕೋರಿಕೊಂಡಿದ್ದಾರೆ.

ಅನಿಕೇತನ ಪದ್ಯ ವಾಚನ ಸ್ಪರ್ಧೆ



ಬೆಂಗಳೂರಿನ ಖಿಧ್ಮಾ ಫೌಂಡೇಶನ್‌ನ ವಾರ್ಷಿಕೋತ್ಸವದ ಪ್ರಯುಕ್ತ ಆಯೋಜಿಸಿದ್ದ ವಿಶ್ವಮಾನವ ಕುವೆಂಪು ಜಯಂತಿ ಮತ್ತು ಸಾಹಿತ್ಯ, ಸಾಂಸ್ಕೃತಿಕ ಹಾಗೂ ಸೌಹಾರ್ದ ಸಮ್ಮಿಲನ ಕಾರ್ಯಕ್ರಮದಲ್ಲಿ ಮೈಸೂರು ನಗರದ ಅನಂತಗೀತ ವಿದ್ಯಾಲಯದ ವಿದ್ಯಾರ್ಥಿ ಮೊಹಮ್ಮದ್ ಜುನೈದ್ ಭಾಗವಹಿಸಿ ಕುವೆಂಪು ಅವರ ಅನಿಕೇತನ ಪದ್ಯವನ್ನು ವಾಚಿಸಿ ಪ್ರಶಂಸನೀಯ ಪತ್ರವನ್ನು ಪಡೆದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕ ಲೋಕೇಶ್ ಹೆಚ್.ಪಿ., ಹಿರಿಯ ಶಿಕ್ಷಕರಾದ ಜಮುನಾ, ಕಾವೇರಮ್ಮ ಉಷಾ, ಶಿಲ್ಪ ಇತರರು ಉಪಸ್ಥಿತರಿದ್ದರು.

ಬೆಲವತ್ತ ಹನುಮಂತು ಕೊಲೆ ಆರೋಪಿಗಳ ಶೀಘ್ರ ಬಂಧನಕ್ಕೆ ದಸಂಸ ಮುಖಂಡರ ಆಗ್ರಹ

ತಪ್ಪಿದರೆ ರಾಜ್ಯಾದ್ಯಂತ ಹೋರಾಟ ಎಚ್ಚರಿಕೆ

ಮೈಸೂರು,ಡಿ.30(ಎಂಟಿವೈ)– ದಲಿತರ ಭೂಮಿ ಕಬಳಿಸುವವರ ವಿರುದ್ಧ ಹೋರಾಡುತ್ತಿದ್ದ ದಸಂಸ ಹೋರಾಟಗಾರ ಹನುಮಂತು ಕೊಲೆ ಆರೋಪಿಗಳನ್ನು ಶೀಘ್ರ ಬಂಧಿಸದೇ ಇದ್ದರೆ, ರಾಜ್ಯದಾದ್ಯಂತ ಉಗ್ರ ಹೋರಾಟ ನಡೆಸುವುದಾಗಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಮಲ್ಲೇಶ್ ಚುಂಚನಹಳ್ಳಿ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಬೆಲವತ್ತ ಗ್ರಾಮದ ಬಳಿ ಡಿ.22ರಂದು ಸಂಜೆ 6.20ರಲ್ಲಿ ದಲಿತ ಹೋರಾಟಗಾರ ಕೆ. ಹನುಮಂತು ಅವರನ್ನು ಭೂ ಮಾಫಿಯಾದಲ್ಲಿ ತೊಡಗಿಸಿಕೊಂಡಿರುವ ರೌಡಿ ಶೀಟರ್‌ಗಳು, ಪ್ರಭಾವಿಗಳ ಬೆಂಬಲಿಗರು ಬರ್ಬರವಾಗಿ ಕೊಲೆ ಮಾಡಿದ್ದಾರೆ. ಈ ಸಂಬಂಧ 13 ಆರೋಪಿಗಳ ವಿರುದ್ಧ ಎಫ್‌ಐಆರ್ ಆಗಿದೆ. ಆದರೂ ಪ್ರಭಾವಿಗಳ ಒತ್ತಡದಿಂದಾಗಿ ಪೊಲೀಸರು ಆರೋಪಿಗಳನ್ನು ಬಂಧಿಸದೆ ಬೇಜವಾಬ್ದಾರಿ ಪ್ರದರ್ಶಿಸುತ್ತಿದ್ದಾರೆ. ಈ ಪ್ರಕರಣದ ಹಿಂದೆ ಪ್ರಭಾವಿಗಳ ಕೈವಾಡವಿದೆ ಎಂದು ಆರೋಪಿಸಿದರು.

ಈ ಕೊಲೆ ಪ್ರಕರಣದಲ್ಲಿ ಶಾಸಕರ ಆಪ್ತರೊಬ್ಬರ ಹೆಸರು ಕೇಳಿ ಬಂದಿದ್ದರೂ ಸಂಬಂಧಿಸಿದವರು ತುಟಿ ಬಿಚ್ಚಿಲ್ಲ. ಬೆಲವತ್ತ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸೇರುತ್ತದೆ. ಕೊಲೆಯಾದವರು ಜೆಡಿಎಸ್ ಮುಖಂಡರೂ ಆಗಿದ್ದಾರೆ. ಹೀಗಿದ್ದರೂ ಆ ಪಕ್ಷದ ಮುಖಂಡರರೆಲ್ಲಾ ಈ ಬಗ್ಗೆ ಏಕೆ ಮೌನ ವಹಿಸಿದ್ದಾರೋ ಗೊತ್ತಿಲ್ಲ ಎಂದು ವಿಷಾದಿಸಿದರು.

ಹನುಮಂತು ಅವರು ಭೋವಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಕಾನೂನು ಹೋರಾಟ ಮಾಡಿ ತಮ್ಮ ತಾತನಿಂದ ಬಂದಿದ್ದ ಜಮೀನು ವಾಪಸು ಪಡೆದಿದ್ದಾರೆ. ಅಲ್ಲದೆ, ಸರ್ಕಾರದಿಂದ ದಲಿತರಿಗೆ ಮಂಜೂರಾದ ಭೂಮಿಯನ್ನು ಕಬಳಿಸಿದ್ದ ಅನ್ಯ ಸಮುದಾಯದವರಿಂದ ಭೂಮಿ ವಾಪಸ್ಸು ದಲಿತರಿಗೆ ಕೊಡಿಸಲು ಸುಪ್ರಿಂಕೋರ್ಟ್ ವರೆಗೂ ಹೋರಾಟ ಮಾಡುತ್ತಿದ್ದ ಹುಟ್ಟು ಹೋರಾಟಗಾರರಾಗಿದ್ದರು. ಹೀಗಾಗಿ ಭೂ ಮಾಫಿಯಾದವರ ಕೈವಾಡ ಈ ಕೊಲೆ ಹಿಂದಿರುವ ಶಂಕೆಯಿದೆ ಆದ್ದರಿಂದ ಆರೋಪಿಗಳು ಎಷ್ಟೇ ಪ್ರಭಾವಿಗಳಾಗಿದ್ದರೂ ಅವರನ್ನು ಬಂಧಿಸಿ, ಕಾನೂನು ಕ್ರಮಕ್ಕೆ ಒಳಪಡಿಸಬೇಕು. ಇದಕ್ಕೆ ಒಂದು ವಾರ ಗಡುವು ನೀಡುತ್ತಿದ್ದು, ತಪ್ಪಿದಲ್ಲಿ ರಾಜ್ಯದಾದ್ಯಂತ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಸಿದರು.

ದಸಂಸದ ರಾಜ್ಯ ಸಮಿತಿಯ ಗೋವಿಂದರಾಜು ಮಾತನಾಡಿ, ಮೈಸೂರು ತಾಲೂಕಿನ ಬೆಲವತ್ತ, ಬೆಳವಾಡಿ, ಕೆಸರೆ ಸೇರಿದಂತೆ ಇನ್ನಿತರ ಗ್ರಾಮಗಳಲ್ಲಿ ದಲಿತರಿಗೆ ನೀಡಿದ್ದ ಜಮೀನನ್ನು ಇತರರು ಕಬಳಿಸಿದ್ದಾರೆ. ಬೇನಾಮಿ ಹೆಸರಿನಲ್ಲಿ ಇವುಗಳಿಗೆ ಪರಿಹಾರವನ್ನೂ ಪಡೆದಿದ್ದಾರೆ. ಹಲವರು ನಕಲಿ ದಾಖಲೆ ಸೃಷ್ಟಿಸಿಕೊಂಡಿದ್ದಾರೆ. ಹೀಗಾಗಿ ಸಂಬಂಧಿಸಿದವರು ಇದರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ದಸಂಸದ ಮುಖಂಡರಾದ ರಾಜಣ್ಣ ಇಟ್ನಾ, ಸುರೇಶ್ ಯರಗನಹಳ್ಳಿ, ಕೃಷ್ಣ ಕೊಳಗಟ್ಟಿ, ಪುಟ್ಟಸ್ವಾಮಿ ದೇವರಸನಹಳ್ಳಿ ಇದ್ದರು.

ಹೆಚ್.ಡಿ.ಕೋಟೆ ಬಳಿ ಬೋನಿಗೆ ಬಿದ್ದ ಹೆಣ್ಣು ಹುಲಿ

•ಗ್ರಾಮಗಳ ಅಂಚಿನಲ್ಲಿ ಕಾಣಿಸಿಕೊಳ್ಳುತ್ತಿದ್ದ ಹುಲಿ ಇದು •ಆರೋಗ್ಯ ಪರಿಶೀಲಿಸಿ ಮರಳಿ ಕಾಡಿಗೆ ಬಿಡಲು ನಿರ್ಧಾರ



ಹೆಚ್.ಡಿ.ಕೋಟೆ ತಾಲೂಕಿನ ಕೆ.ಜಿ.ಹುಂಡಿ ಗ್ರಾಮದ ಜಮೀನಿನಲ್ಲಿ ಬೋನಿಗೆ ಬಿದ್ದ ಹುಲಿ.

ಮೈಸೂರು,ಡಿ.30(ಎಂಟಿವೈ)– ಹೆಚ್.ಡಿ.ಕೋಟೆ ತಾಲೂಕಿನ ವಿವಿಧ ಗ್ರಾಮಗಳ ಜಮೀನಿನಲ್ಲಿ ಕಾಣಿಸಿಕೊಂಡು ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದ್ದ ಹೆಣ್ಣು ಹುಲಿಯೊಂದು ಕೆ.ಜಿ.ಹಳ್ಳಿ ಗ್ರಾಮದ ಜಮೀನೊಂದರಲ್ಲಿ ಅಳವಡಿಸಿದ್ದ ಬೋನಿಗೆ ಬಿದ್ದಿದ್ದು, ಆ ಹುಲಿಯನ್ನು ದಟ್ಟಾರಣ್ಯದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ.

ಮೈಸೂರು ಪ್ರಾದೇಶಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಸೇರುವ ಹೆಚ್.ಡಿ. ಕೋಟೆ ವಲಯದ ಶಾಂತಿಪುರ, ಟೈಗರ್ ಬ್ಲಾಕ್, ಚಾಕಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹುಲಿ ಚಲನವಲನ ಹಾಗೂ ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದ್ದ ವಯಸ್ಕ ಹೆಣ್ಣು ಹುಲಿ ಸೆರೆಗೆ ಡಿ.17ರಿಂದ ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸುತ್ತಿತ್ತು. ಆದರೆ, ಹುಲಿ ಮಾತ್ರ ಅರಣ್ಯ ಇಲಾಖೆಯ ತಂಡಕ್ಕೆ ಚಳ್ಳೆಹಣ್ಣು ತಿನ್ನಿಸಿ, ಕಣ್ಮರೆಯಾಗುತ್ತಿತ್ತು. ಡಿ.17ರಂದು ಹುಲಿ ಕಂಡು ಬಂದಿದೆ ಎನ್ನಲಾದ ಜಮೀನಿನಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಮೂರು ಮರಿಯೊಂದಿಗೆ ಇರುವ ತಾಯಿ ಹುಲಿಯೂ ಕಂಡು ಬಂದಿತ್ತು.

ಈ ಹಿನ್ನೆಲೆಯಲ್ಲಿ ಹುಲಿಗಳ ಜಾಡು ಪತ್ತೆಗಾಗಿ ಥರ್ಮಲ್ ಡ್ರೋನ್, ಕುಮ್ಕಿ ಆನೆಗಳಾದ ಮಹೇಂದ್ರ, ಭೀಮ ಆನೆಯನ್ನು ಬಳಸಿಕೊಳ್ಳಲಾಗಿತ್ತು. ಟ್ರ್ಯಾಪ್ ಕೇಜ್ ಅಳವಡಿಸಿ ಹುಲಿ ಸೆರೆಗೆ ಕ್ರಮ ಕೈಗೊಳ್ಳಲಾಗಿತ್ತು. ಆದರೆ, ಯಾವುದೇ ಪ್ರಯೋಜನವಾಗಿರಲಿಲ್ಲ.

ಹೆಚ್.ಡಿ.ಕೋಟೆ ತಾಲೂಕಿನ ಕೆ.ಜಿ. ಹುಂಡಿ ಗ್ರಾಮದ ಖಾಸಗಿ ಜಮೀನಿನಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸಿದ ವಾಕ್ ಥ್ರೂ ಕೇಜ್ ಅಳವಡಿಸಿ, ಹುಲಿ ಚಲನವಲನ ಗಮನಿಸಲಾಗುತ್ತಿತ್ತು. ಕೇಜ್‌ನಲ್ಲಿದ್ದ ಮಾಂಸ ಸೇವನೆಗಾಗಿ ಕಳೆದ(ಡಿ.29) ಮಧ್ಯರಾತ್ರಿ ವಯಸ್ಕ ಹೆಣ್ಣು ಹುಲಿಯು ಬೋನಿಗೆ ಬಿದ್ದಿದೆ. ಆ ಹುಲಿಯ ಆರೋಗ್ಯ ತಪಾಸಣೆ ಮಾಡಲಾಗಿದ್ದು, ಆರೋಗ್ಯಕರವಾಗಿದೆ ಎಂದು ಪಶುವೈದ್ಯಾಧಿಕಾರಿಗಳು ದೃಢಪಡಿಸಿದ್ದಾರೆ. ಅಲ್ಲದೆ, ಚಿಕ್ಕ ವಯಸ್ಸಿನ ಹೆಣ್ಣು ಹುಲಿಯಾಗಿರುವುದರಿಂದ ಅದನ್ನು ಹುಲಿ ಸಂರಕ್ಷಿತ ಪ್ರದೇಶದ ದಟ್ಟ ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ಎನ್‌ಟಿಸಿಎ ಅರಣ್ಯ ಇಲಾಖೆಗೆ ಮಾರ್ಗದರ್ಶನ ನೀಡಿದೆ.

ಹುಲಿ ಸೆರೆ ಕಾರ್ಯಾಚರಣೆಯ ನೇತೃತ್ವವನ್ನು ಡಿಸಿಎಫ್ ಡಾ.ಕೆ.ಎನ್.ಬಸವರಾಜು ವಹಿಸಿದ್ದರು. ಹೆಚ್.ಡಿ.ಕೋಟೆಯ ಎಸಿಎಫ್, ಮೈಸೂರು, ಹೆಚ್.ಡಿ.ಕೋಟೆ, ನಾಗರಹೊಳೆಯ ಸಿಬ್ಬಂದಿಗಳು, ಚಿರತೆ ಕಾರ್ಯಪಡೆ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	4.30 - 6.00	12.00 - 1.30	3.00 - 4.30
ಸೋಮ	7.30 - 9.00	10.30 - 12.00	1.30 - 3.00
ಮಂಗಳ	3.00 - 4.30	9.00 - 10.30	12.00 - 1.30
ಬುಧ	12.00 - 1.30	7.30 - 9.00	10.30 - 12.00
ಗುರು	1.30 - 3.00	6.00 - 7.30	9.00 - 10.30
ಶುಕ್ರ	10.30 - 12.00	3.00 - 4.30	7.30 - 9.00
ಶನಿ	9.00 - 10.30	1.30 - 3.00	6.00 - 7.30

2025



ಜನವರಿ 2025

ಭಾನು		5	12	19	26
ಸೋ		6	13	20	27
ಮಂ		7	14	21	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	31
ಶನಿ	4	11	18	25	

ಫೆಬ್ರವರಿ 2025

ಭಾನು		2	9	16	23
ಸೋ		3	10	17	24
ಮಂ		4	11	18	25
ಬುಧ		5	12	19	26
ಗುರು		6	13	20	27
ಶುಕ್ರ		7	14	21	28
ಶನಿ	1	8	15	22	

ಮಾರ್ಚ್ 2025

ಭಾನು	30	2	9	16	23
ಸೋ	31	3	10	17	24
ಮಂ		4	11	18	25
ಬುಧ		5	12	19	26
ಗುರು		6	13	20	27
ಶುಕ್ರ		7	14	21	28
ಶನಿ	1	8	15	22	29

ಏಪ್ರಿಲ್ 2025

ಭಾನು		6	13	20	27
ಸೋ		7	14	21	28
ಮಂ	1	8	15	22	29
ಬುಧ	2	9	16	23	30
ಗುರು	3	10	17	24	
ಶುಕ್ರ	4	11	18	25	
ಶನಿ	5	12	19	26	

ಮೇ 2025

ಭಾನು		4	11	18	25
ಸೋ		5	12	19	26
ಮಂ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9	16	23	30
ಶನಿ	3	10	17	24	31

ಜೂನ್ 2025

ಭಾನು	1	8	15	22	29
ಸೋ	2	9	16	23	30
ಮಂ	3	10	17	24	
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

ಜುಲೈ 2025

ಭಾನು		6	13	20	27
ಸೋ		7	14	21	28
ಮಂ	1	8	15	22	29
ಬುಧ	2	9	16	23	30
ಗುರು	3	10	17	24	31
ಶುಕ್ರ	4	11	18	25	
ಶನಿ	5	12	19	26	

ಆಗಸ್ಟ್ 2025

ಭಾನು	31	3	10	17	24
ಸೋ		4	11	18	25
ಮಂ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30

ಸೆಪ್ಟೆಂಬರ್ 2025

ಭಾನು		7	14	21	28
ಸೋ	1	8	15	22	29
ಮಂ	2	9	16	23	30
ಬುಧ	3	10	17	24	
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	

ಅಕ್ಟೋಬರ್ 2025

ಭಾನು		5	12	19	26
ಸೋ		6	13	20	27
ಮಂ		7	14	21	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	31
ಶನಿ	4	11	18	25	

ನವೆಂಬರ್ 2025

ಭಾನು	30	2	9	16	23
ಸೋ		3	10	17	24
ಮಂ		4	11	18	25
ಬುಧ		5	12	19	26
ಗುರು		6	13	20	27
ಶುಕ್ರ		7	14	21	28
ಶನಿ	1	8	15	22	29

ಡಿಸೆಂಬರ್ 2025

ಭಾನು		7	14	21	28
ಸೋ	1	8	15	22	29
ಮಂ	2	9	16	23	30
ಬುಧ	3	10	17	24	31
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	

ರಜಾ ದಿನಗಳು

ಜನವರಿ
1 ನೂತನ ವರ್ಷಾರಂಭ
14 ಮಕರ ಸಂಕ್ರಾಂತಿ
26 ಗಣರಾಜ್ಯೋತ್ಸವ

ಫೆಬ್ರವರಿ
6 ಮಧ್ವನವಮಿ
14 ಷಬ್-ಎ-ಬರಾತ್
26 ಮಹಾಶಿವರಾತ್ರಿ

ಮಾರ್ಚ್
13 ಹೋಳಿ ಹಬ್ಬ
30 ಚಾಂದ್ರಮಾನ ಯುಗಾದಿ
31 ಕುತುಬ್-ಎ-ರಂಜಾನ್

ಏಪ್ರಿಲ್
2 ದೇವರ ದಾಸೀಮಯ್ಯ ಜಯಂತಿ
6 ಚಾಂದ್ರ ಶ್ರೀರಾಮನವಮಿ
10 ಮಹಾವೀರ ಜಯಂತಿ
14 ಡಾ.ಬಿ.ಆರ್.ಅಂಬೇಡ್ಕರ್ /ಸೌರ ಯುಗಾದಿ
18 ಗುಡ್ ಫ್ರೈಡೇ
19 ಹೋಲಿ ಸಾಟರ್ಡೇ
30 ಬಸವ ಜಯಂತಿ

ಮೇ
1 ಮೇ ದಿನ /ಕಾರ್ಮಿಕರ ದಿನ
2 ಶಂಕರ /ರಾಮಾನುಜಾಚಾರ್ಯ ಜಯಂತಿ
12 ಬುದ್ಧ ಪೂರ್ಣಿಮಾ

ಜೂನ್
7 ಬಕ್ರೀದ್

ಜುಲೈ
6 ಮೊಹರಂ 10ನೇ ದಿನ

ಆಗಸ್ಟ್
8 ವರಮಹಾಲಕ್ಷ್ಮಿ ವ್ರತ
9 ಋಗ್ /ಯಜುರ್ ಉಪಾಕರ್ಮ
26 ಸ್ವರ್ಣಗೌರಿ ವ್ರತ

ಸೆಪ್ಟೆಂಬರ್
5 ಈದ್-ಮಿಲಾದ್ /ತಿರು ಓಣಂ
6 ಅನಂತಪದ್ಮನಾಭ ವ್ರತ
7 ನಾರಾಯಣಗುರು ಜಯಂತಿ
8 ಸಂತ ಮೇರಿ ಹಬ್ಬ
17 ವಿಶ್ವಕರ್ಮ ಜಯಂತಿ
21 ಮಹಾಲಯ ಅಮಾವಾಸ್ಯೆ

ಅಕ್ಟೋಬರ್
1 ಆಯುಧ ಪೂಜೆ /ಮಹಾನವಮಿ
2 ಗಾಂಧಿ ಜಯಂತಿ /ವಿಜಯದಶಮಿ
7 ವಾಲ್ಮೀಕಿ ಜಯಂತಿ
17 ತುಲಾ ಸಂಕ್ರಮಣ
20 ನರಕ ಚತುರ್ದಶಿ
22 ಬಲಿಪಾಡ್ಯಮಿ

ನವೆಂಬರ್
1 ಕನ್ನಡ ರಾಜ್ಯೋತ್ಸವ
5 ಗುರುನಾನಕ್ ಜಯಂತಿ
8 ಕನಕದಾಸ ಜಯಂತಿ

ಡಿಸೆಂಬರ್
5 ಹುತ್ತರಿ
24 ಕ್ರಿಸ್‌ಮಸ್ ಈವ್
25 ಕ್ರಿಸ್‌ಮಸ್